REGISTERED KA/ BGW/ 1876/2026-28 RNI NO KNKAN/26/A4553, Bengaluru PSO, Mysore Road, Bengaluru-26

ನ್ಯೂಸ್ ಎಕ್ಸ್‌ಪ್ಲೋರ್

NEWS EXPLORE

ಸಂಪಾದಕ: ಬಿ.ಕುಮಾರಸ್ವಾಮಿ

KANNADA DAILY ಕನ್ನಡ ದಿನಪತ್ರಿಕೆ

Editor: B. Kumaraswamy

E-MAIL: newsexplore2026@gmail.com

Volume 1 ಸಂಪುಟ | Issue 122 ಸಂಚಿಕೆ | Friday ಶುಕ್ರವಾರ | October 9, 2026 ಅಕ್ಟೋಬರ್ ೯, 2026 | pages 4 ಪುಟಗಳು | PRGI: KNKAN/26/A4553 | ₹ 2

ಬಲಿಜ ಸೇವಾ ಟ್ರಸ್ಟ್ (ರಿ).

ಬಲಿಜ ವಧು - ವರರ ಮಾಹಿತಿ ಕೇಂದ್ರ, ಕೊಳ್ಳೇಗಾಲ ತಾಲ್ಲೂಕು ಚಾಮರಾಜನಗರ ಜಿಲ್ಲೆ -571440

ಬಿ.ವಿ. ಮಹೇಶ್ -9113979881

ನಾಗರಾಜು -9886566406

ರಜನಿಕಾಂತ್ -8123125787



ಜಾಹೀರಾತಿಗಾಗಿ ಸಂಪರ್ಕಿಸಿ: 9482834853

ನನ್ನ ಹಾಗೂ ಸಚಿವರ ವಿರುದ್ಧ ಸ್ಟಿಂಗ್ ಆಪರೇಷನ್ ಮಾಡಿದ ಪಿತಾಮಹ ಯಾರು ಎಂದು ಗೊತ್ತು: ಸಿಎಂ

ನವದೆಹಲಿ: "ಮುಖ್ಯಮಂತ್ರಿ ಆದ ಬಳಿಕ ನನ್ನ ಹಾಗೂ ಇತರೆ ಸಚಿವರ ವಿರುದ್ಧ ಸ್ಟಿಂಗ್ ಆಪರೇಷನ್ ಪ್ರಯತ್ನ ನಡೆದಿದ್ದು, ಇದರ ಪಿತಾಮಹ ಯಾರು? ಇದಕ್ಕೆ ಹಣಕಾಸಿನ ನೆರವು ಯಾರು ನೀಡುತ್ತಿದ್ದಾರೆ ಹಾಗೂ ಹೇಗೆ ಕಾರ್ಯಾಚರಣೆ ನಡೆಸುತ್ತಿದ್ದಾರೆ ಎಂಬುದು ನನಗೆ ತಿಳಿದಿದೆ" ಎಂದು ಸಿಎಂ ಡಿ ಕೆ ಶಿವಕುಮಾರ್ ಅವರು ತಿಳಿಸಿದ್ದಾರೆ.

ನವದೆಹಲಿಯ ಕರ್ನಾಟಕ ಭವನದ ಬಳಿ ಮಾಧ್ಯಮಗಳ ಪ್ರಶ್ನೆಗಳಿಗೆ ಶಿವಕುಮಾರ್ ಅವರು ಗುರುವಾರ ಪ್ರತಿಕ್ರಿಯೆ ನೀಡಿದರು.

ಸಚಿವರ ಮೇಲೆ ಗುಪ್ತ ಕಾರ್ಯಾಚರಣೆ ಮಾಡುತ್ತಿರುವ ಬಗ್ಗೆ ನೀಡಿರುವ ಎಚ್ಚರಿಕೆ ಬಗ್ಗೆ ಕೇಳಿದಾಗ, "ಮಾರುವೇಷದ ಕಾರ್ಯಾಚರಣೆಗಳನ್ನು ನನ್ನ ಮೇಲಿಂದಲೇ ಶುರು ಮಾಡಲು ಪ್ರಯತ್ನ ಮಾಡಿದ್ದಾರೆ. ನನ್ನ ಬಳಿ ಈ ಬಗ್ಗೆ ಎಲ್ಲ ಸಾಕ್ಷ್ಯಗಳೂ ಇವೆ. ನಾನು ಜವಾಬ್ದಾರಿ ಸ್ಥಾನದಲ್ಲಿದ್ದೇನೆ. ನಾನು ಏನೇ ಮಾತನಾಡಬೇಕಾದರೂ ಸುಮ್ಮನೆ ಮಾತನಾಡುವುದಿಲ್ಲ" ಎಂದರು.

ಈ ಕಾರ್ಯಾಚರಣೆ ಸಿಎಂ ಆಗುವ ಮುನ್ನವೇ ಅಥವಾ ಸಿಎಂ ಆದ ಬಳಿಕ ನಡೆದಿದೆಯೇ ಎಂದು ಕೇಳಿದಾಗ, "ಮುಖ್ಯಮಂತ್ರಿಯಾದ ಬಳಿಕ ನಡೆದಿರುವ ಪ್ರಯತ್ನಗಳ ಬಗ್ಗೆ ಹೇಳುತ್ತಿದ್ದೇನೆ. ನನ್ನನ್ನು ಸೇರಿಸಿ ಬೇರೆ ಯಾವ, ಯಾವ ನಾಯಕರ ವಿರುದ್ಧ ಕಾರ್ಯಾಚರಣೆ ಮಾಡಲು ಪ್ರಯತ್ನಿಸುತ್ತಿದ್ದಾರೆ ಎಂಬುದೂ ತಿಳಿದಿದೆ. ಆದರೆ, ಈ ಎಲ್ಲ ವಿಚಾರಗಳನ್ನು ಈಗ ಬಹಿರಂಗವಾಗಿ ಮಾತನಾಡುವ ಅಗತ್ಯವಿಲ್ಲ" ಎಂದು ತಿಳಿಸಿದರು.

ತಮ್ಮ ವಿರುದ್ಧದ ಪ್ರಯತ್ನಗಳ ಹಿಂದೆ ಕರ್ನಾಟಕದವರೇ ಇದ್ದಾರೆಯೇ ಅಥವಾ ಬೇರೆ ರಾಜ್ಯದವರೂ ಇದ್ದಾರೆಯೇ ಎಂಬ ಬಗ್ಗೆ ಕೇಳಲಾಗಿ, "ನಾನು ನಿಮ್ಮ ಬಳಿ ಎಲ್ಲವನ್ನೂ ಬಹಿರಂಗಪಡಿಸಲು ಹೋಗುವುದಿಲ್ಲ. ಕಾಲ ಬಂದಾಗ ಉತ್ತರ ಕೊಡುತ್ತೇನೆ" ಎಂದು ಹೇಳಿದರು.

ಅಧಿಕಾರಿಗಳು, ಸಚಿವರಿಗೆ ಎಚ್ಚರಿಕೆಯಿಂದಿರಲು ಸೂಚನೆ ಸಚಿವರನ್ನು ಸಿಕ್ಕಿ ಹಾಕಿಸಲು ಏಜೆಂಟರನ್ನು ನೇಮಕ ಮಾಡಿಕೊಂಡಿರುವ ಬಗ್ಗೆ ಬಹಳ ಚರ್ಚೆಯಾಗುತ್ತಿದೆ ಎಂದು ಕೇಳಿದಾಗ, "ಕೆಲವರು ನನ್ನ ಬಳಿ ಬಂದಿದ್ದರು, ನಾನು ಫೋಟೋಗಳನ್ನು ಬಿಡುಗಡೆ ಮಾಡಲು ಸಿದ್ಧ. ಸದ್ಯಕ್ಕೆ ಅದರ ಅವಶ್ಯಕತೆ ಇಲ್ಲ. ಯಾರು ಏನೇನು ಮಾಡುತ್ತಿದ್ದಾರೆ ಎಂಬುದು ನನಗೆ ಗೊತ್ತು. ಕುಂಬಳಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿ ನೋಡಿಕೊಳ್ಳುತ್ತಿದ್ದಾರೆ. ನನ್ನ ಬಳಿ ಯಾರು ಬಂದಿದ್ದರೋ ಅವರ ಮೇಲೆ ಅನುಮಾನ ಬಂದು ಪೊಲೀಸರಿಗೆ ತಿಳಿಸಿ, ದಾಖಲೆಗಳನ್ನು ಸಿದ್ಧಪಡಿಸಿ ಇಟ್ಟುಕೊಂಡಿದ್ದೇನೆ. ಅದನ್ನು ಈಗಲೇ ಬಹಿರಂಗ ಮಾಡಲು ಸಾಧ್ಯವಿಲ್ಲ. ಇದಕ್ಕೆ ಪಿತಾಮಹರು ಯಾರು ಎಂದು ತಿಳಿದಿದೆ. ಅದಕ್ಕೆಲ್ಲಾ ಉತ್ತರಿಸಲು ಹೋಗುವುದಿಲ್ಲ. ಅಧಿಕಾರಿಗಳನ್ನು ಸುಮ್ಮನೆ ಸಿಕ್ಕಿಹಾಕಿಸಲು ಪ್ರಯತ್ನ ಮಾಡುತ್ತಿದ್ದು, ಅವರು ಹುಷಾರಾಗಿರಬೇಕು ಎಂದು ಎಚ್ಚರಿಕೆ ನೀಡಿದೆ. ಹಿಂದೆ ಮಾಧ್ಯಮದಿಂದ ಸ್ಟಿಂಗ್ ಆಪರೇಷನ್ ಮಾಡಲು ಬಂದಿದ್ದರು.



ಹಾಗಾಗಿ ಈಗಲೇ ಎಚ್ಚರಿಕೆ ನೀಡಲಾಗಿದೆ. ಕೆಲವು ನಾಯಕರು ಈ ಕಾರ್ಯಾಚರಣೆಗೆ ಖಾಸಗಿ ಏಜೆಂಟರನ್ನು ನೇಮಕ ಮಾಡಿಕೊಂಡಿದ್ದಾರೆ ಎಂಬ ಬಗ್ಗೆ ಪಕ್ಕಾ ಮಾಹಿತಿ ಇದೆ" ಎಂದರು.

ಭಾರತೀಯರಮತಗಳನ್ನುರಕ್ಷಣೆಮಾಡುವುದುಕೇಂದ್ರಸರ್ಕಾರದಕರ್ತವ್ಯ ಎಸ್ ಐ ಆರ್ ಬಗ್ಗೆ ಕಳೆದ ಎರಡು ದಿನಗಳಿಂದ ಹೋರಾಟ ನಡೆದಿರುವ ಬಗ್ಗೆ ಕೇಳಿದಾಗ, "ಬಾಂಗ್ಲಾದೇಶ ಹಾಗೂ ಬೇರೆಡೆಗಳಿಂದ ಬಂದು ಜನರು ಇಲ್ಲಿದ್ದಾರೆ ಎಂದು ಬಿಜೆಪಿಯವರು ಹೇಳುತ್ತಾರೆ. ಹಾಗಿದ್ದರೆ ದೇಶದ ಗಡಿಯಲ್ಲಿ ಬಾಂಗ್ಲಾದೇಶದಿಂದ ನುಸುಳಿಕೋರರನ್ನು ತಡೆಗಟ್ಟುವುದು ಕೇಂದ್ರ ಸರ್ಕಾರದ ಕರ್ತವ್ಯವಲ್ಲವೇ? ಬಿಜೆಪಿಯ ಸಂಸದರೂ ಹಾಗೂ ಶಾಸಕರು, ನಾವು ಬಾಂಗ್ಲಾದೇಶದವರನ್ನು ಮತಪಟ್ಟಿಯಿಂದ ತೆಗೆಯಲು ಅರ್ಜಿ ಸಲ್ಲಿಸಿದ್ದೇವೆ ಎಂದಿದ್ದಾರೆ. ಭಾರತೀಯರ ಮತಗಳ ರಕ್ಷಣೆ ಮಾಡುವುದು ಕೇಂದ್ರ ಸರ್ಕಾರದ ಕರ್ತವ್ಯ. ನಮ್ಮಲ್ಲಿ ಅಕ್ರಮ ಬಾಂಗ್ಲಾ ವಲಸಿಗರು ಇದ್ದರೆ ಅವರ ಮತದಾನದ ಹಕ್ಕು ಕಸಿಯುವುದು ಮಾತ್ರವಲ್ಲ, ಅವರನ್ನೇ ದೇಶದಿಂದ ಹೊರಗೆ ಹಾಕಲಿ. ಆ ಕೆಲಸ ಯಾಕೆ ಮಾಡುತ್ತಿಲ್ಲ?" ಎಂದು ಪ್ರಶ್ನಿಸಿದರು.

ಕೇಂದ್ರದಲ್ಲಿ ಪ್ರತಿಪಕ್ಷಗಳ ಹೋರಾಟದ ಬಗ್ಗೆ ಪೊಲೀಸರ ಕ್ರಮದ ಬಗ್ಗೆ ಕೇಳಿದಾಗ, "ಹೋರಾಟಗಾರರ ವಿರುದ್ಧ ಪೊಲೀಸರೂ ಅಮಾನವೀಯವಾಗಿ ನಡೆದುಕೊಳ್ಳುತ್ತಿದ್ದಾರೆ. ಕಾಂಗ್ರೆಸ್ ನಾಯಕರಾದ ರಾಹುಲ್ ಗಾಂಧಿ ಹಾಗೂ ಪ್ರಿಯಾಂಕ ಗಾಂಧಿಯವರು ದೇಶದ ಪ್ರಜಾಪ್ರಭುತ್ವ ಹಾಗೂ ಜನರ ರಕ್ಷಣೆಗಾಗಿ ಹೋರಾಡುತ್ತಿದ್ದಾರೆ" ಎಂದರು.

ಅರ್ಹ ಮತಗಳನ್ನು ಅಳಿಸಿಹಾಕದಂತೆ ಚುನಾವಣಾ ಆಯೋಗದ ಸ್ಪಷ್ಟ ಸೂಚನೆ 'ರಾಜ್ಯದಲ್ಲಿ ಬಿಜೆಪಿಯವರು ತಮ್ಮ ಬಡ ಬಿಜೆಪಿ ಕಾರ್ಯಕರ್ತರ ಹೆಸರಿನಲ್ಲಿ ಪೂರ್ವಮುದ್ರಿತ ಫಾರಂ 7 ಗಳನ್ನು ನೀಡುತ್ತಿದ್ದಾರೆ. ವಿಶೇಷವಾಗಿ ಅಲ್ಪಸಂಖ್ಯಾತ ಮತದಾರರ ಪೂರ್ವ ಮುದ್ರಿತ ಅರ್ಜಿಗಳನ್ನು ಲಕ್ಷಾಂತರ ಸಂಖ್ಯೆಯಲ್ಲಿ ಸಲ್ಲಿಸಲಾಗುತ್ತಿದೆ.

ಕೆಲವು ಬಿಜೆಪಿ ಕಾರ್ಯಕರ್ತರು ತಪ್ಪೊಪ್ಪಿಗೆ ಮಾಡಿಕೊಂಡು ಅರ್ಜಿಗಳನ್ನು ವಾಪಸ್ಸು ಪಡೆದಿದ್ದಾರೆ. ಕೇಂದ್ರ ಸರ್ಕಾರದವರು ಈ ಮತಗಳ್ಳತನವನ್ನು ಒಂದು ದೊಡ್ಡ ಕ್ರಿಮಿನಲ್ ಸಂಚು ಎಂದು ಏಕೆ ಪರಿಗಣಿಸಲಿಲ್ಲ? ರಾಜ್ಯದಲ್ಲಿ ನಮ್ಮ ಹೋರಾಟದ ನಂತರ ಚುನಾವಣಾ ಆಯೋಗವೂ, ಸೂಕ್ತ ಪರಿಶೀಲನೆಯಿಲ್ಲದೇ ಯಾವುದೇ ಅರ್ಹ ಮತವನ್ನು ತೆಗೆದುಹಾಕಬಾರದೆಂದು ಸ್ಪಷ್ಟ ಸೂಚನೆ ನೀಡಿದೆ. ನಾವು ಆ ಹೋರಾಟ ಮಾಡದೇ ಇದ್ದಿದ್ದರೆ, ಬಡ ಹಳ್ಳಿಗರು, ಅನಕ್ಷರಸ್ಥರ ಮತಗಳನ್ನು ಡಿಲೀಟ್ ಮಾಡಲಾಗುತ್ತಿತ್ತು. ಈಗ ಚುನಾವಣಾ ಆಯೋಗವು, ದೇಶಾದ್ಯಂತ ಯಾವುದೇ ವಸತಿಯಿಲ್ಲದವರು, ಶೋಷಿತರು ಮತದಾನದ ಹಕ್ಕಿನಿಂದ ವಂಚಿತರಾಗದಂತೆ ಒಂದು ತಿಂಗಳ ಕಾಲ ಅಭಿಯಾನದ ರೀತಿಯಲ್ಲಿ ಮತಗಳ ರಕ್ಷಣೆ ಮಾಡಬೇಕೆಂದು ತಿಳಿಸಿದೆ" ಎಂದರು.

ಮುಖ್ಯಮಂತ್ರಿಯಾಗಿ ರಾಜ್ಯದ ಪ್ರತಿಯೊಬ್ಬರ ಮತರಕ್ಷಣೆ ನನ್ನ ಕರ್ತವ್ಯ

"ಮತಗಳನ್ನು ರಕ್ಷಿಸುವ ಕಾರ್ಯವು ಬೆಂಗಳೂರಿನಿಂದ ಪ್ರಾರಂಭವಾಗಿದ್ದು, ಬಿಜೆಪಿ ನಾಯಕರಿಗೆ ನಾಚಿಕೆಯಾಗಬೇಕು. ರಾಜ್ಯದ ಪ್ರತಿ ನಾಗರಿಕನ ಮತದ ಹಕ್ಕನ್ನು ರಕ್ಷಿಸುವುದು ಮುಖ್ಯಮಂತ್ರಿಯಾಗಿ ನನ್ನ ಕರ್ತವ್ಯವಲ್ಲವೇ? ಬಿಜೆಪಿಯವರು ಮತಗಳ್ಳತನ ಮಾಡಲು ಇಂತಹ ಹಂತಕ್ಕೆ ತಲುಪುವರೆಂಬ ಕಲ್ಪನೆ ನಮಗಿರಲಿಲ್ಲ. ಚುನಾವಣೆ ಗೆಲ್ಲಲು ಮೊದಲು ರಾಜ್ಯದ ಹಾಗೂ ದೇಶದ ಜನರ ಮನಸ್ಸನ್ನು ಗೆಲ್ಲಬೇಕು. ಆದರೆ ಬಿಜೆಪಿಯವರು ಚುನಾವಣಾ ಆಯೋಗದ ವ್ಯವಸ್ಥೆಯನ್ನೇ ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ" ಎಂದರು.

ಮತದಾನ ಹಕ್ಕಿಗೆ ಹೋರಾಡುತ್ತಿರುವ ಇಂಡಿಯಾ ಬ್ಲಾಕ್ ನ ನಾಯಕರನ್ನು ಅಭಿನಂದಿಸುತ್ತೇನೆ"ರಾಜ್ಯದಲ್ಲಿ ನಡೆಯುತ್ತಿರುವ ಈ ಮತಗಳ ಅಕ್ರಮದ ಬಗ್ಗೆ ವಿಚಾರಿಸಲು ಸರ್ಕಾರಕ್ಕೆ ಅಧಿಕಾರವಿಲ್ಲವೇ? ಇಂತಹ ಕ್ರಿಮಿನಲ್ ಸಂಚಿನ ವಿರುದ್ಧ ನಾವು ಧ್ವನಿಯೆತ್ತಿದ್ದು, ಮಾಧ್ಯಮಗಳೂ ನಮಗೆ ಸಹಕರಿಸಿವೆ. ಈ ಮೂಲಕ ಮಾಧ್ಯಮದವರು ಅರ್ಹಮತದಾರರ ನೆರವಿಗೆ ನಿಂತಿದ್ದಾರೆ. ಆದ್ದರಿಂದ ನವದೆಹಲಿಯಲ್ಲಿ ದೇಶದ ಮತದಾರನ ಹಿತರಕ್ಷಣೆಗೆ ಹೋರಾಡುತ್ತಿರುವ ಇಂಡಿಯಾ ಬ್ಲಾಕ್ ನ ನಾಯಕರಿಗೆ ನಾನು ಅಭಿನಂದಿಸುತ್ತೇನೆ. ಇದರಿಂದ ದೇಶದ ಪ್ರಜಾಪ್ರಭುತ್ವ ಹಾಗೂ ಮತಗಳನ್ನು ರಕ್ಷಿಸಲಾಗುತ್ತಿದೆ" ಎಂದರು.

ಇಂದು ಭಾರತೀಯ ಪ್ರಜಾಪ್ರಭುತ್ವದ ಕಪ್ಪು ದಿನ

"ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರ ರಾಜೀನಾಮೆ ಹಾಗೂ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ (ಖಖಖ) ವಿರೋಧಿಸಿ ನಡೆಯುತ್ತಿರುವ ಪ್ರತಿಭಟನೆ ನಡೆಸುತ್ತಿರುವವರ ಮೇಲೆ ದಬ್ಬಾಳಿಕೆ ನಡೆದಿದ್ದು, ಇಂದು 'ಭಾರತೀಯ ಪ್ರಜಾಪ್ರಭುತ್ವದ ಕರಾಳ ದಿನ' ಎಂದು ಪಕ್ಷ ಘೋಷಿಸಿದೆ. ಇದೊಂದು ಕರಾಳ ದಿನವಾಗಿದ್ದು, ಇಡೀ ದೇಶದ ಪ್ರಜಾಪ್ರಭುತ್ವ ಉಳಿಸಲು ಈ ಹೋರಾಟ ಮಾಡಿದೆ.

– ಪುಟ 3ಕ್ಕೆ



ಜಿಎಸ್‌ಟಿ ಕೌನ್ಸಿಲ್ ಸಭೆ ಬಳಿಕ ನವದೆಹಲಿಯ ಭಾರತ್ ಮಂಟಪಮ್ ನಲ್ಲಿ ಗ್ರೂಪ್ ಫೋಟೋ...

ಅಭಿಜಿತ್ ದೀಪ್ಕೆ ಹಿಂಬಾಲಕರೇ ರಾಹುಲ್

ಬೆಂಗಳೂರು: ಮುಖ್ಯಮಂತ್ರಿಗಳು ಸಣ್ಣತನದ ರಾಜಕಾರಣ ಮಾಡುವುದನ್ನು ನಿಲ್ಲಿಸಲಿ ಎಂದು ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಅವರು ಆಗ್ರಹಿಸಿದ್ದಾರೆ. ರಾಜ್ಯ ಬಿಜೆಪಿ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಇಂದು ಮಾಧ್ಯಮಗಳ ಜೊತೆ ಮಾತನಾಡಿದ ಅವರು, ಘೋಷಣೆಗಳನ್ನು ಮಾಡುತ್ತೀರಿ; ಯಾರಿಗಾದರೂ ನಯಾಪೈಸೆ ಕೊಟ್ಟಿದ್ದೀರಾ ಎಂದು ಪ್ರಶ್ನಿಸಿದರು. ಘೋಷಣೆ ಮಾಡುವುದೇ ದೊಡ್ಡ ಸಾಧನೆ ಅಂದುಕೊಂಡಿದ್ದೀರಾ ಎಂದು ಕೇಳಿದರು. ಎಸ್‌ಡಿಆರ್‌ಎಫ್ ಹಣ ಎಲ್ಲಿ ಹೋಗಿದೆ. ಸರ್ಕಾರ ದಿವಾಳಿ ಆಗಿದೆ. ಬರಗಾಲದ ಪರಿಸ್ಥಿತಿ ಎದುರಿಸಲು ಇವರ ಬಳಿ ಹಣ ಇಲ್ಲ. ಬರಗಾಲದ ಸಂಕಷ್ಟದ ಪರಿಸ್ಥಿತಿ ಎದುರಿಸಲು ಸಾಧ್ಯವಾಗದ ಈ ಸರ್ಕಾರ ರಾಜೀನಾಮೆ ನೀಡಲಿ ಎಂದು ಒತ್ತಾಯಿಸಿದರು.



ಸ್ಟಿಂಗ್ ಆಪರೇಷನ್ ನಡೆಯುತ್ತಿದೆ ಎನ್ನುವುದಾದರೆ ಮುಖ್ಯಮಂತ್ರಿಗಳು ಯಾರಿಗೆ ಎಚ್ಚರಿಕೆ ಕೊಟ್ಟಿದ್ದಾರೆ ಎಂದು ಪ್ರಶ್ನಿಸಿದರು. ಯಾರಾದರೂ ಸ್ಟಿಂಗ್ ಆಪರೇಷನ್ ಮಾಡಿದ್ದೇ ಆದರೆ ಕಾಂಗ್ರೆಸ್ ನವರಿಗೆ? ಭಯ ಯಾಕೆ ಎಂದು ಪ್ರಶ್ನೆ ಹಾಕಿದರು. ಭ್ರ?ಾ?ಟಚಾರದಲ್ಲಿ ತೊಡಗಿರುವ ಮಂತ್ರಿಗಳು ಮತ್ತು ಶಾಸಕರು, ಉನ್ನತ ಅಧಿಕಾರಿಗಳಿಗೆ ಮುಖ್ಯಮಂತ್ರಿಗಳು ಎಚ್ಚರಿಕೆ ಕೊಟ್ಟರೇ? ನೀವು ಭವಿಷ್ಯದಲ್ಲಿ ಸಿಕ್ಕಿಬೀಳಬಹುದು. ಇದರಿಂದ ನನ್ನ ಸರ್ಕಾರಕ್ಕೆ ತೊಂದರೆ ಅಡ್ಡಿ ಆಗಬಹುದು. ನಿಮಗೆ ಮಾತ್ರ ಅಲ್ಲ ನನ್ನನ್ನು ಸ್ಟಿಂಗ್ ಆಪರೇಷನ್ ಮಾಡಲಿಕ್ಕೆ ಪ್ರಯತ್ನ ಮಾಡಿದರು ಅಂತ ಹೇಳಿಕೊಂಡಿರೋದುನಿಜವಾಗಲೂ ಇದು ನಾಚಿಕೆಗೇಡಿನ ಸಂಗತಿ ಎಂದು ತಿಳಿಸಿದರುಕಾಂಗ್ರೆಸ್ ಪಕ್ಷವೆಂದರೆಸ್ಟಿಂಗ್ ಆಪರೇಷನ್ ಫ್ಯಾಕ್ಟರಿ.. ಒಬ್ಬ ಮುಖ್ಯಮಂತ್ರಿ ಗಳಾದವರು ಇಂಥ ಕನಿಷ್ಠ ಮಟ್ಟಕ್ಕೆಇಳಿಬಾರದಾಗಿತ್ತು. ಕಾಂಗ್ರೆಸ್ ಪಕ್ಷವೆಂದರೆಸ್ಟಿಂಗ್ ಆಪರೇಷನ್ ಫ್ಯಾಕ್ಟರಿ. ಆ ಫ್ಯಾಕ್ಟರಿ ಮೇಲೆ ಯಾರಾದರೂ ಸ್ಟಿಂಗ್ ಆಪರೇಷನ್ ಮಾಡ್ತಾರೆ ಅಂತಂದ್ರೆ ಅವರು ಇನ್ನೆಂತವರು ಇರಬೇಕು. ಕಾಂಗ್ರೆಸ್ ಸ್ಟಿಂಗ್ ಆಪರೇಷನ್‌ಗೆ ಇಟೂಂದು ಭಯಪಟ್ಟಿದೆ ಅಂದರೆ ಅಳುಕಿಲ್ಲದೆ ಭಯ ಬರಲಿಕ್ಕೆ ಸಾಧ್ಯ ಇಲ್ಲ. ಸರ್ಕಾರ ಸಂಪೂರ್ಣವಾಗಿ ಭ್ರಷ್ಟಾಚಾರದಲ್ಲಿ ಮುಳುಗಿದೆ ಅನ್ನೋದು ಇದರಿಂದ ಗೊತ್ತಾಗುತ್ತದೆ ಎಂದು ವಿಶ್ಲೇಷಿಸಿದರು.

ಜನರೇ ತೀರ್ಮಾನ ಮಾಡುತ್ತಾರೆ..

ಸತೀಶ್ ಜಾರಕಿಹೊಳಿ ಅವರು ತಮ್ಮ ಹೇಳಿಕೆಯಲ್ಲಿ ಅದೇನೋ ಜಾಮೂನ್ ಎನ್ನುತ್ತಾರೆ. ಒಡೆ, ಉದ್ದಿನವಡೆ, ಮಸಾಲೆ ವಡೆ, ಮಸಾಲೆ ದೋಸೆ ಅಥವಾ ದಾವಣಗೆರೆಯ ಬೆಣ್ಣೆ ದೋಸೆ ಅನ್ನುತ್ತಾರೆ. ಸಹಜವಾಗಿ ಬಾಯಲ್ಲಿ ನೀರೂರುತ್ತೆ ಎಂದಿದ್ದಾರೆ. ನಿಮಗೆ ಯಾವತ್ತು ನೀರೂರಿದೆ? ಜನರಿಗೆ ಅರ್ಥ ಆಗಲಿ. ಬಳಿಕ ಅದು ಸರಿಯೇ ತಪ್ಪೇ ಅನ್ನೋದನ್ನ ಜನ ತೀರ್ಮಾನ ಮಾಡುತ್ತಾರೆ ಎಂದು ಹೇಳಿದರು. ರಮೇಶ್ ಜಾರಕಿಹೊಳಿಗೆ ಸ್ಟಿಂಗ್ ಆಪರೇಷನ್ ಮಾಡಿದ್ದು ಯಾರು? ಸತೀಶ್ ಜಾರಕಿಹೊಳಿ ಅವರೇ, ನಿಮ್ಮ ಸಹೋದರ ರಮೇಶ್ ಜಾರಕಿಹೊಳಿ ಅವರಿಗೆ ಸ್ಟಿಂಗ್ ಆಪರೇಷನ್ ಮಾಡಿದ್ದು ಯಾರು ಅಂತ ನಿಮಗೆ ಗೊತ್ತಿಲ್ಲವೇ ಯಾವತ್ತಾದರೂ ಅದನ್ನು ನೀವು ಬಾಯಿ ಬಿಟ್ಟಿದ್ದೀರಾ ಅವರನ್ನು ರಾಜಕೀಯವಾಗಿ ಮುಗಿಸಲಿಕ್ಕೆ ಪ್ರಯತ್ನ ಮಾಡಿದ್ದುಯಾರು? ನಿಮ್ಮಪಕ್ಷದವರೇಅಲ್ಲವೇಎಂದುಪ್ರಶ್ನೆಹಾಕಿದರು. ಯಾವತ್ತಾದರೂ ನಿಮ್ಮ ಸಹೋದರನ ಬೆಂಬಲಕ್ಕೆ ನೀವು ಬಂದಿದ್ದೀರಾ ಎಂದು ಕೇಳಿದರು. ಒಂದು ದಿನ ನೀವು ಮಾತಾಡಿಲ್ಲ ಎಂದು ಟೀಕಿಸಿದರು. ಅವರಿಗೆಸ್ಟಿಂಗ್ ಆಪರೇಷನ್ ಆಗಿದ್ದು ನಿಮಗೆ ಖುಷಿ ಇತ್ತೇ ಆ ಫ್ಯಾಕ್ಟರಿಓನರ್ ಯಾರು ಎಂದು ಪ್ರಶ್ನೆಗಳನ್ನು ಕೇಳಿದರು.

ನಿಮ್ಮ ಕ್ಯಾಪ್ಟನ್ ಎಚ್ಚರಿಕೆ ಕೊಟ್ಟಿದ್ದಾರೆ...

ನಿಮ್ಮ ಚಾಂಪಿಯನ್, ನಿಮ್ಮ ಕ್ಯಾಪ್ಟನ್ ನಿಮಗೆ ಎಚ್ಚರಿಕೆಕೊಟ್ಟಿದ್ದಾರೆ. ಎಚ್ಚರಿಕೆಯಿಂದ ಎದ್ದು ನೀವು ಅದನ್ನು ಪಾಲಿಸಿ ಎಂದು ತಿಳಿಸಿದರು. ಪ್ರಶ್ನೆಗೆ ಉತ್ತರ ನೀಡಿದ ಅವರು, ಕರ್ನಾಟಕದಲ್ಲಿ ಗೃಹಸಚಿವರು ಜೈಲಿಗೆ ಹೋಗ್ತಾರೆ ಅನ್ನೋದಕ್ಕೆ ಅನೇಕ ಕಾರಣಗಳಿವೆ. ಅದು ಕೆಪಿಎಸ್ಸಿ ವಿಷಯದಲ್ಲಿ ನೀವು ಅನೇಕ ಬಾರಿ ಪೊಲೀಸ್ ಅಧಿಕಾರಿಗಳನ್ನು ಕರೆದು ಯಾಕೆ ತಪ್ಪಿಸಿಕೊಳ್ಳುವಂತ ವ್ಯವಸ್ಥೆ ಮಾಡುತ್ತಿದ್ದೀರಿ? ಇ.ಡಿ.ಗೆ ಹೋದಮೇಲೆ ಅಂತೂ ಪಾಪ ಎಲ್ಲರ ಬಟ್ಟೆ ಒದ್ದೆ ಆಗುತ್ತಿದೆ. ನಿಮಗೆ ಸಂಬಂಧವಿಲ್ಲದ ವಿಚಾರಗಳಿಗೆ ಎಫ್.ಐಆರ್ ಹಾಕಿದ್ದೀರಿ. ಎಲೆಕ್ಷನ್ ಕಮಿಷನ್ ಫಾರಂ 7 ತುಂಬಿದ ವಿಚಾರದಲ್ಲಿ ಯಾರಾದರೂ ಮಿಸ್ ಯೂಸ್ ಮಾಡಿದ್ರೆ ಜೈಲಿಗೆ ಹೋಗ್ತೀರಿ ಅಂತ ಹೇಳ್ತಿದ್ರಲ್ಲ; ಇದೀಗ ಬಹಳ ಜನರು ನೀವು ಮಾಡ್ತಿರೋ ತಪ್ಪಿನಿಂದ ನೀವು ಜೈಲಿಗೆ ಹೋಗ್ತೀರಿ ಅಂತ ಮಾತನಾಡುತ್ತಾರೆ ಎಂದು ಗಮನ ಸೆಳೆದರು.

ಕಳ್ಳನ ಮನಸ್ಸು ಹುಳ್ಳುಳ್ಳಗೆ?

ಇ.ಡಿ., ಆದಾಯ ತೆರಿಗೆ, ಸಿಬಿಐ ನಮ್ಮ ಮೇಲೆ ದಾಳಿ ಮಾಡಬಹುದು. ಜೈಲಿಗೆ ಕಳಿಸಬಹುದು ಎನ್ನುತ್ತಾರೆ. ಯಾಕೆ ಈ ಭಾವನೆ ನಿಮಗೆ? ಕಳ್ಳನ ಮನಸ್ಸು ಹುಳ್ಳುಳ್ಳಗೆ ಎಂಬುದೇ ಇದಕ್ಕೆ ಕಾರಣವೇ ಎಂದು ಪ್ರಶ್ನಿಸಿದರು. ನೀವು ಮಾಡಿದ ಪಾಪದ ಕೊಡ ತುಂಬಿದೆ; ಅದಕ್ಕಾಗಿ ನೀವು ಜೈಲಿಗೆ ಹೋಗಬಹುದು ಎಂದು ಎಚ್ಚರಿಸಿದರು.

ಕಾಕ್ರೋಚ್‌ಗಳದು ಪ್ಯಾಕೇಜ್ ಟೀಮ್..

ಇವತ್ತು ಕೆಲವು ಕಾಕ್ರೋಚ್ ಗಳು ಬೆಂಗಳೂರಿಗೆ ಬಂದಿವೆ. ರಾಹುಲ್ ಗಾಂಧಿಯವರು ಕಾಕ್ರೋಚ್ ಗಳನ್ನು ಎಲ್ಲಾ ಕಳಿಸಿದ್ದಾರೆ. ಅಭಿಜಿತ್ ದೀಪ್ಕೆ ಅವರು ಬಂದಿದ್ದಾರೆ. ಇದು ಒಂದು ಪ್ಯಾಕೇಜ್ ಟೀಮ್ ಅಭಿಜಿತ್ ದೀಪ್ಕೆ ಅವರ ಹಿಂಬಾಲಕರೇ ರಾಹುಲ್ ಗಾಂಧಿ; ಅವರು ನಾಯಕ ಅಲ್ಲ ಎಂದು ತಿಳಿಸಿದರು. ಅವರು ಇವತ್ತು ದೇಶದಲ್ಲಿ ಖಳನಾಯಕ. ಅವರು ದೀಪ್ಕೆ ಹಿಂಬಾಲಕ ಎಂದು ನುಡಿದರು. ದೇಶದ ದೃಷ್ಟಿಯಲ್ಲಿ ರಾಹುಲ್ ಅವರು ಖಳನಾಯಕನಾಗಿದ್ದಾರೆ. ದೀಪ್ಕೆ ಅವರ ಹಿಂಬಾಲಕರಾಗಿದ್ದಾರೆ; ಇವತ್ತು ದೀಪ್ಕೆ ಅಂಡ್ ಕಂಪನಿ ಪ್ಯಾಕೇಜ್ ಕಂಪನಿ ಎಂದು ದೂರಿದರು. ವಿಮಾನವ್ಯವಸ್ಥೆ, ವಾಸ್ತವ್ಯ ವ್ಯವಸ್ಥೆ ಎಲ್ಲಿಂದ ಬರುತ್ತದೆ ಎಂದು ಕೇಳಿದರು. ಹಣದ ಮೂಲದ ವಿವರ ಹುಡುಕಲು ಮನವಿ ಇವೆಲ್ಲವೂ ಕೂಡ ದೇಶವನ್ನು ಅಭದ್ರಗೊಳಿಸತಕ್ಕಂತ ದುಷ್ಟ ಶಕ್ತಿಗಳ ಕೈವಾಡ ಇದೆ ಎಂದು ಆಕ್ಷೇಪಿಸಿದರು. ಇದರ ಹಿಂದೆ ಹೊರದೇಶದವರು ಇದ್ದು, ಇದನ್ನು ಕೇಂದ್ರ ಸರ್ಕಾರ ಬಯಲು ಮಾಡಬೇಕು. ಇವರಿಗೆ ಎಲ್ಲಿಂದ ಹಣ ಬರುತ್ತಿದೆ ಎಂಬ ಮೂಲವನ್ನು ಹುಡುಕಬೇಕು ಎಂದು ಮನವಿ ಮಾಡಿದರು. ಇವರು ಯಾರೂ ವಿದ್ಯಾರ್ಥಿಗಳಲ್ಲ ವಿದ್ಯಾರ್ಥಿಗಳು ಅವರವರ ಮನೆಗಳಲ್ಲಿ ಇದ್ದಾರೆ. ಇವರೆಲ್ಲರೂ ದೇಶ ವಿರೋಧಿ ಚಟುವಟಿಕೆಗಳಲ್ಲಿ ಭಾಗಿಯಾಗುವವರು ಎಂದು ಆರೋಪಿಸಿದರು. ಪ್ರತಿಭಟನೆಯಲ್ಲಿ ಬರುವವರಿಗೆ ಒಂದರೆಡು ಸಾವಿರ ರೂಪಾಯಿ ದುಡ್ಡು ಕೊಟ್ಟಿದ್ದಾರೆ. ಇವರಿಗೆ ಎಸ್‌ಐಆರ್, ಜ್ಞಾನೇಶ್ ಕುಮಾರ್ ಬಗ್ಗೆ ಗೊತ್ತಿಲ್ಲ ಎಂದು ಟೀಕಿಸಿದರು. ಕಾಂಗ್ರೆಸ್ ಕಂಪನಿ ಹಿಂದೆ ಅಧಿಕಾರ ಉಳಿಸಿಕೊಳ್ಳಲು ದೇಶದಲ್ಲಿ ತುರ್ತು ಪರಿಸ್ಥಿತಿ ಘೋಷಿಸಿತ್ತು. ಕಾಂಗ್ರೆಸ್ ಪಕ್ಷ ಎಲ್ಲಾ ಕಡೆಯಿಂದ ಹಣ ಸಂಗ್ರಹಿಸಿ ಅವರಿಗೆ ವಿಶೇಷ ವಿಮಾನಗಳನ್ನು ಕೊಟ್ಟು ಅವರು ಮಾಡುತ್ತಿರುವ ಕುತಂತ್ರ ಇದು ಎಂದು ದೂರಿದರು. ಕಾಂಗ್ರೆಸ್ಸಿನ ನಿಜವಾದ ಶಕ್ತಿ ಕಳೆದುಹೋಗಿದೆ. ಅವರಲ್ಲಿ ಈಗ ಶಕ್ತಿ ಇಲ್ಲ. ಕಾಂಗ್ರೆಸ್ ನವರು ಕರೆದರೆ ಜನ ಬರುವುದಿಲ್ಲ. ಅದಕ್ಕೆ ಕಾಂಗ್ರೆಸ್ ಬದಲಾಗಿ ಕಾಕ್ರೋಚ್ ತಂದಿದ್ದಾರೆ. ಕಾಂಗ್ರೆಸ್ ಪಕ್ಷ ಕಾಕ್ರೋಚ್ ಅನ್ನು ಹಿಂಬಾಲಿಸುತ್ತಿದೆ ಎಂದು ತಿಳಿಸಿದರು.

ಮೋದಿಜೀ ಸರ್ಕಾರ ಸುಭದ್ರ..

ದೇಶದಲ್ಲಿ ಮೋದಿಜಿಯವರ ಸರ್ಕಾರ ಸುಭದ್ರವಾಗಿರುತ್ತದೆ. ಯಾವುದೇ ಕೆಟ್ಟ ನಡತೆ ಇಲ್ಲ; ಕೆಟ್ಟ ವ್ಯವಸ್ಥೆ ಇಲ್ಲ ಎಂದು ತಿಳಿಸಿದರು. ಇವತ್ತು ದೇಶ ಸುಭದ್ರವಾಗಿದೆ. ಅಭಿವೃದ್ಧಿ ಕಡೆಗೆ ಸಾಗಿದೆ. ಇಡೀ ಪ್ರಪಂಚವೇ ಇವತ್ತು ನಮ್ಮನ್ನು ದೃಷ್ಟಿಸಿ ನೋಡುವ ಮತ್ತು ಅಭಿಮಾನದಿಂದ ಕಾಣುವ ಸಂದರ್ಭ ಬಂದಿದೆ ಎಂದು ವಿಶ್ಲೇಷಿಸಿದರು. ಮೋದಿಜೀ ಅವರು ಒಂದು ದಿನ ರಜೆ ಪಡೆಯದೇ 25 ವರ್ಷಗಳ ಕಾಲ ಈ ದೇಶದಲ್ಲಿ ಕಾರ್ಯ ನಿರ್ವಹಿಸಿದ್ದಾರೆ. ಡಾ.ಬಾಬಾಸಾಹೇಬ್ ಅಂಬೇಡ್ಕರ್ ರವರ ಸಂವಿಧಾನವನ್ನು ಎತ್ತಿ ಹಿಡಿಯುವ ಕೆಲಸವನ್ನು ಮೋದಿಜಿ ಸರ್ಕಾರ ಮಾಡುತ್ತಿದೆ. ಕಾಂಗ್ರೆಸ್– ಕಾಕ್ರೋಚ್‌ಗಳು ಸೇರಿ ಸಂವಿಧಾನ ವಿರೋಧಿ ಕೆಲಸ ಮಾಡುತ್ತಿದ್ದಾರೆ ಎಂದು ಟೀಕಿಸಿದರು.

ರಿಯಲ್ ಎಸ್ಟೇಟ್ ಕಡೆಗಿನ ಆಸಕ್ತಿ ರೈತರ ಬಗ್ಗೆ ಏಕಿಲ್ಲ

ಬಾಗಲಕೋಟೆ: ರಾಜ್ಯದ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ರಿಯಲ್ ಎಸ್ಟೇಟ್ ಮೇಲೆಯೇ ಎಲ್ಲಾ ಆಸಕ್ತಿ ಇದೆ. ರಾಜ್ಯದ ರೈತರ ಬಗ್ಗೆ, ಅವರ ಸಂಕಷ್ಟಗಳ ಬಗ್ಗೆ ಕಿಂಚಿತ್ತೂ ಕಾಳಜಿ ಇಲ್ಲ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ಆರೋಪಿಸಿದ್ದಾರೆ. ಮಾಧ್ಯಮಗಳೊಂದಿಗೆ ಇಂದು ಮಾತನಾಡಿದ ಅವರು, ರಿಯಲ್ ಎಸ್ಟೇಟ್ ಬಗ್ಗೆ ಮುಖ್ಯಮಂತ್ರಿಗಳು ಪರಿಣತರು. ಕಸದಿಂದ ರಸ ತೆಗೆಯಬಲ್ಲರು. ಆದರೆ ತೀವ್ರ ಬರದಿಂದ ನೋವಿನಲ್ಲಿರುವ ರೈತರ ಬಗ್ಗೆ ಅವರ ಗಮನವೇ ಇಲ್ಲ ಎಂದು ದೂರಿದರು.

ರೈತರಿಗೆ ಭಿಕ್ಷೆ ರೀತಿ ಪರಿಹಾರ ಘೋಷಣೆ...

ಬಳ್ಳಾರಿ ಚಲೋ ನಡೆಸಿದಾಗ ನಾವು ಬರದಿಂದ ತತ್ತರಿಸಿರುವ ರೈತರ ರಕ್ಷಣೆಗೆ ರಾಜ್ಯ ಸರ್ಕಾರ ಬರಬೇಕು. ಪ್ರತಿ ಹೆಕ್ಟೇರ್ಗೆ 50 ಸಾವಿರ ಪರಿಹಾರ ಕೊಡಬೇಕು, 5 ಲಕ್ಷದವರೆಗೆ ರೈತರ ಕೃಷಿ ಸಾಲ ಮನ್ನಾ ಮಾಡಬೇಕು, ಹೈನುಗಾರಿಕೆಗೆ ಪ್ರೊ?ರೀತ್ಸಾಹ ನೀಡಬೇಕು ಎಂದು ಆಗ್ರಹಿಸಿದ್ದೆವು. ಬಳ್ಳಾರಿ ಚಲೋ ನಂತರ ವಿಶೇಷ ಅಧಿವೇಶನ ಕರೆದರು. ಇದರಲ್ಲಿ ಪ್ರಚಾರ ಗಿಟ್ಟಿಸಿಕೊಂಡರು. ರೈತರಿಗೆ ಭಿಕ್ಷೆ ರೀತಿ ಎರಡೂವರೆ ಸಾವಿರ ಕೊಡ್ತೇವೆ ಎಂದರು. ಆದರೆ ಅದನ್ನೂ ಕೊಡಲಿಲ್ಲ. ಕೇವಲ ಘೋಷಣೆಗೆ ಸೀಮಿತವಾಯಿತು ಎಂದು ಹೇಳಿದರು. ಉತ್ತರ ಕರ್ನಾಟಕದಲ್ಲಿ ಮಳೆ ಇಲ್ಲದೆ ಜನ ಮತ್ತು ಜಾನುವಾರುಗಳ ಸ್ಥಿತಿ ನೋಡಿದರೆ ದುಃಖವಾಗುತ್ತದೆ. ಕೆಲಸವಿಲ್ಲದೆ ಬೇರೆ ಕಡೆಗೆ ಜನ ಗುಳೇ ಹೋಗುತ್ತಿದ್ದಾರೆ. ಆದರೆ ಸರ್ಕಾರ ಮಾತ್ರ ಯಾವುದರ ಕಡೆಗೂ ತಲೆಕೆಡಿಸಿಕೊಂಡಿಲ್ಲ ಎಂದು ಆಕ್ಷೇಪಿಸಿದರು.

ಹಣವಿಲ್ಲದಿದ್ದರೂ ಕೋಟಿ ಕೋಟಿ ಘೋಷಣೆ....



ಬೊಕ್ಕಸದಲ್ಲಿ ಹಣವಿಲ್ಲದಿದ್ದರೂ ಮುಖ್ಯಮಂತ್ರಿಗಳು ಕೋಟಿ ಕೋಟಿ ಯೋಜನೆ ಘೋಷಣೆ ಮಾಡುತ್ತಾರೆ. ಮಂಗಳೂರಿನಲ್ಲಿ ಸಂಪುಟ ಸಭೆ ನಡೆಸಿ ಆ ಭಾಗದಲ್ಲಿ 32 ಸಾವಿರದ ಯೋಜನೆಗಳನ್ನು ಘೋಷಣೆ ಮಾಡಿದರು. ಎಲ್ಲವೂ ಪುಕ್ಕಟ್ಟೆ ಘೋಷಣೆ. ರಾಜ್ಯದ ಆರ್ಥಿಕ ಸ್ಥಿತಿ ಅಧೋಗತಿಗೆ ಇಳಿದಿದೆ ಎಂದು ಹಣಕಾಸು ಇಲಾಖೆ ಅಧಿಕಾರಿಗಳೇ ಮುಖ್ಯಮಂತ್ರಿಗಳಿಗೆ ತಿಳಿಸಿದ್ದಾರೆ. ಆದರೆ ಸಿಎಂ ಮಾತ್ರ ಹೊಸ ಹೊಸ ಘೋಷಣೆ ಮಾಡುತ್ತಲೇ ಇದ್ದಾರೆ ಎಂದು ಟೀಕಿಸಿದರು. ರಾಜ್ಯದಲ್ಲಿ ಯಾವುದೇ ಅಭಿವೃದ್ಧಿ ಕಾಮಗಾರಿ ಹಣ ಇಲ್ಲ. ಆಸ್ಪತ್ರೆ ಇದ್ದರೆ ವೈದ್ಯರಿಲ್ಲ. ಶಾಲೆ ಇದ್ದರೆ ಶಿಕ್ಷಕರಿಲ್ಲದ ಸ್ಥಿತಿ ಇದೆ. ಮುಖ್ಯಮಂತ್ರಿಗಳು ಕೇವಲ ಬೆಂಗಳೂರು ಅಭಿವೃದ್ಧಿಗೆ ಸೀಮಿತವಾಗಿದ್ದಾರೆ. ಆದರೆ ಬೆಂಗಳೂರೂ ಅಭಿವೃದ್ಧಿ ಆಗುತ್ತಿಲ್ಲ ಎಂದು ವ್ಯಂಗ್ಯವಾಡಿದರು.

ರಿಂಗ್ ರಸ್ತೆ ಯಾವುದಕ್ಕೆ....

ರಾಜ್ಯದ ಎಲ್ಲಾ ವಿಧಾನಸಭಾ ಕ್ಷೇತ್ರಗಳಲ್ಲಿ ವರ್ತುಲ ರಸ್ತೆ ಮಾಡಲು ಸಂಪುಟ ಸಭೆ ತೀರ್ಮಾನ ಮಾಡಿದೆ. ಇರುವ ರಸ್ತೆಗಳನ್ನೇ ಅಭಿವೃದ್ಧಿ ಮಾಡಿಲ್ಲ. ಬಾಗಲಕೋಟೆಯಲ್ಲಿ ಕೃ?ಾ?ಣ ಮೇಲ್ದಂಡೆ ಯೋಜನೆಗೆ ಪ್ರತಿ ವರ್ಷ ಹತ್ತು ಸಾವಿರ ಕೋಟಿ ಕೊಡ್ತೇವೆ ಎಂದು ಹೇಳಿದ್ದರು. ಯಾವುದೇ ಪರಿಹಾರ ನೀಡಿಲ್ಲ. ಇರುವ ಯೋಜನೆಗಳನ್ನೇ ಮುಗಿಸದೆ ಹೊಸ ಯೋಜನೆ ಘೋಷಣೆ ಯಾಕೆ ಎಂದು ಕೇಳಿದರು.

ಮುಂದೆ ನಮ್ಮದೇ ಸರ್ಕಾರ...

ಎಲ್ಲಾ ವಿಧಾನಸಭಾ ಕ್ಷೇತ್ರಗಳಲ್ಲಿ ಹಲವಾರು ಸಮಸ್ಯೆಗಳಿವೆ. ಅದಕ್ಕೆ ಪರಿಹಾರ ನೀಡುವ ಯೋಗ್ಯತೆ ಈ ರಾಜ್ಯ ಸರ್ಕಾರಕ್ಕೆ ಇಲ್ಲ. ಏಕೆಂದರೆ ಸರ್ಕಾರದ ಬಳಿ ಹಣ ಇಲ್ಲ. ಮುಂದೆ ಎನ್‌ಡಿಎ ನೇತೃತ್ವದ ಸರ್ಕಾರವೇ ಅಧಿಕಾರಕ್ಕೆ ಬರಲಿದೆ. ಬಿಜೆಪಿ ಮಾತ್ರವೇ ಇಂತಹ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ನೀಡಲಿದೆ ಎಂದರು. ಮುಖ್ಯಮಂತ್ರಿ ಸ್ಥಾನ ಉಳಿಸಿಕೊಳ್ಳಲು ಅಧಿಕಾರಕ್ಕೆ ಬರಲು ಯಾವ ಮಟ್ಟಕ್ಕೆ ಬೇಕಾದರೂ ಕೆಲವರು ಇಳಿಯುತ್ತಾರೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಡಿಂಗ್ ಡಿಂಗ್ ಆಪರೇಷನ್ ಮಾಡಿದವರು...

ಷಡ್ಯಂತ್ರ, ಕುತಂತ್ರ, ಪಿತೂರಿ, ಸ್ಟಿಂಗ್ ಆಪರೇಷನ್, ಡಿಂಗ್ ಡಿಂಗ್ ಆಪರೇಷನ್ ಮಾಡಿಸುವ ಕೀರ್ತಿ ಈ ರಾಜ್ಯ ಚುಕ್ಕಾಣಿ ಹಿಡಿದವರಿಗೆ ಸಲ್ಲುತ್ತದೆ. ಅದನ್ನು ಯಾರು ಮಾಡುವುದು ಹೆಸರನ್ನು ಕಾಂಗ್ರೆಸ್ ಶಾಸಕರು ಹೇಳುತ್ತಾರೆ ಎಂದು ವ್ಯಂಗ್ಯವಾಡಿದರು. ತಮ್ಮದೇ ಪಕ್ಷದ ಶಾಸಕರು ಮತ್ತು ಸಚಿವರ ಮೇಲೆ ಸ್ಟಿಂಗ್ ಆಪರೇಷನ್, ಡಿಂಗ್ ಡಿಂಗ್ ಆಪರೇಷನ್ ಮಾಡಿ ಅಧಿಕಾರ ಪಡೆದವರು ಯಾರು ಅಂತ ಕಾಂಗ್ರೆಸ್ ಶಾಸಕರನ್ನು ಕೇಳಿದರೆ ಅವರೇ ಹೇಳುತ್ತಾರೆ. ರಮೇಶ್ ಜಾರಕಿಹೊಳಿ ಅವರ ಪ್ರಕರಣದಲ್ಲಿ ಅವರಿಗೆ ಯಾರು ರಕ್ಷಣೆ ನೀಡಿದರು, ವಾದ ಮಂಡಿದವರು ಯಾರು ಜನರಿಗೆ ಗೊತ್ತಿದೆ ಎಂದರು.

ಸಿಎಂ ಹಗಲುಗನಸು ಕಾಣಲಿ ಬಿಡಿ...

ಮತ್ತೆ ನಾನೇ ಮುಖ್ಯಮಂತ್ರಿ ಎಂದು ಡಿಕೆಶಿ ಅವರು ಹಗಲುಗನಸು ಕಾಣಲಿ. ಇದಕ್ಕೆ ನಮ್ಮ ವಿರೋಧವಿಲ್ಲ. ಈ ಸ್ಟಿಂಗ್ ಆಪರೇಷನ್, ಡಿಂಗ್ ಆಪರೇಷನ್ ಬಿಟ್ಟು ರಾಜ್ಯದ ಅಭಿವೃದ್ಧಿಗೆ ಕೆಲಸ ಮಾಡಲಿ. ಸಿಎಂ ಆಗಿದ್ದಾಗ ಕೆಲಸ ಮಾಡಿದ್ದನ್ನು ಜನರು ನೋಡುತ್ತಾರೆ. ಮೂರು ಸಾವಿರ ಮಠದ ಬಗ್ಗೆ ಸಿಎಂ ದುರಂಕಾರದಿಂದ ಮಾತನಾಡಿದ್ದಾರೆ. ಅಧಿಕಾರಕ್ಕೆ ಬರಲು ಎಲ್ಲಾ ಸಮಾಜದ ಜನ, ವರ್ಗದವರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ಅದೇ ರೀತಿ ಅಭಿವೃದ್ಧಿ ಸಹ ಮಾಡಬೇಕು. ಅಹಂಕಾರದಿಂದ ಮಾತನಾಡಿ ಅಧಿಕಾರಕ್ಕೆ ಬರುವ ಭ್ರಮೆ ಒಳ್ಳೆಯದಲ್ಲ. ದಿನೇ ದಿನೇ ಮತದಾರರು ಬಿಜೆಪಿ ಕಡೆ ವಿಶ್ವಾಸ ತೋರಿಸುತ್ತಿದ್ದಾರೆ ಎಂದರು.

4,756.48 ಕೋಟಿ ಟೋಲ್ ಸುಲಿಗೆ ಮಾಡಿದ ನೈಸ್: ಹೆಚ್.ಡಿ.ಕುಮಾರಸ್ವಾಮಿ ಆರೋಪ

ಬೆಂಗಳೂರು: ರಾಜ್ಯ ಹೈಕೋರ್ಟ್ ನೈಸ್ ಯೋಜನೆ ವಿರುದ್ಧ ಕಟುವಾದ ಶಬ್ದಗಳಲ್ಲಿ ಅಭಿಪ್ರಾಯ ದಾಖಲಿಸಿದ್ದರೂ, ಈ ಅಭಿಪ್ರಾಯಕ್ಕೆ ಸುಪ್ರೀಂ ಕೋರ್ಟ್ ತಡೆ ನೀಡದೇ ಇದ್ದರೂ ನೈಸ್ ಸಂಸ್ಥೆ ಅಕ್ರಮವಾಗಿ ಟೋಲ್ ಸಂಗ್ರಹ ಮಾಡುತ್ತಿದೆ ಎಂದು ಆರೋಪಿಸಿದ ಕೇಂದ್ರಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು; ಈವರೆಗೆ ನೈಸ್ ಕಂಪನಿ 4,756.48 ಕೋಟಿ ಟೋಲ್ ಹಣವನ್ನು ಅಕ್ರಮವಾಗಿ ಸುಲಿಗೆ ಮಾಡಿದೆ ಎಂದು ದೂರಿದರು. ಈ ಅಕ್ರಮ ಟೋಲ್ ಸಂಗ್ರಹವು 2008–2009 ರಲ್ಲಿ ವರ್ಷಕ್ಕೆ 5.59 ಕೋಟಿ ಇತ್ತು, 2024–2025ರ ವೇಳೆಗೆ ವರ್ಷಕ್ಕೆ 734.92.ಕೋಟಿ ತಲುಪಿದೆ. ನೈಸ್ ಯೋಜನೆ ಹೆಸರಿನಲ್ಲಿ ಕೋಟ್ಯಂತರ ರೂ. ಅಕ್ರಮ ಟೋಲ್ ದರೋಡೆ ಮುಂದುವರಿದೆ. ಹೈಕೋರ್ಟ್ ಆದೇಶದ ನಂತರವೂ ಅಕ್ರಮವಾಗಿ ಟೋಲ್ ಸುಲಿಗೆ ಆಗುತ್ತಿದೆ. ತಕ್ಷಣವೇ ಟೋಲ್ ಸಂಗ್ರಹ ಬಂದ್ ಮಾಡಬೇಕು ಎಂದು ಕುಮಾರಸ್ವಾಮಿ ಅವರು ಒತ್ತಾಯಿಸಿದರು. ಜೆಡಿಎಸ್ ಪಕ್ಷದ ಕೇಂದ್ರ ಕಚೇರಿ ಜೆ.ಪಿ. ಭವನದಲ್ಲಿ ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಕೇಂದ್ರ ಸಚಿವರು; ನೈಸ್ (NICE) ಸಂಸ್ಥೆಯು ಯೋಜನೆಯನ್ನು ಪೂರ್ಣಗೊಳಿಸದೆ ಅಕ್ರಮವಾಗಿ ಕೋಟ್ಯಂತರ ರೂಪಾಯಿ ಟೋಲ್ ಸಂಗ್ರಹಿಸುತ್ತಿದ್ದು, ಬಡ ರೈತರ ಭೂಮಿಯನ್ನು ಲೂಟಿ ಮಾಡುತ್ತಿದೆ. ನೈಸ್ ರಸ್ತೆಯ ಮೂಲ ಯೋಜನಾ ವೆಚ್ಚವೇ ?1,583,76 ಕೋಟಿ. ಆದರೆ ಈವರೆಗೆ ?4,756.48 ಕೋಟಿ ವಸೂಲಿ ಮಾಡಿದೆ ಎಂದು ವಾಗ್ದಾಳಿ ನಡೆಸಿದರು. ಕಳೆದ 20 ವರ್ಷಗಳಿಂದ ಜೆಡಿಎಸ್ ಹಾಗೂ ಮಾಜಿ ಪ್ರಧಾನಿಗಳಾದ ಹೆಚ್.ಡಿ.ದೇವೇಗೌಡರು ನಡೆಸಿಕೊಂಡು ಬಂದ ಹೋರಾಟಕ್ಕೆ ಈಗ ತಾರ್ಕಿಕ ಅಂತ್ಯ ಸಿಗುವ ಲಕ್ಷಣ ಕಾಣುತ್ತಿದೆ. ಇಷ್ಟೆಲ್ಲಾ ಅಕ್ರಮಗಳನ್ನು ನಡೆಸಿರುವ ನೈಸ್ ಕಂಪನಿಯ ಪಾಪದ ಕೊಡ ತುಂಬುತ್ತಿದೆ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

ಟೋಲ್ಒಪ್ಪಂದ(TCA)ಮತ್ತುಕರಾರುಗಳಉಲ್ಲಂಘನೆ: ಸೆಪ್ಟೆಂಬರ್ 4, 2000ರಂದು ರಾಜ್ಯದ ಲೋಕೋಪಯೋಗಿ ಇಲಾಖೆ ಕಾರ್ಯದರ್ಶಿ ಹಾಗೂ ನೈಸ್ ಸಂಸ್ಥೆ ನಡುವೆ 'ಟೋಲ್ ಕನ್ಸೆಷನ್ ಒಪ್ಪಂದ' (TCA)ಆಗಿತ್ತು. ಏಪ್ರಿಲ್ 3, 1997ರ ಮೂಲ ಫ್ರೇಮ್‌ವರ್ಕ್ ಅಗ್ರಿಮೆಂಟ್' (FWA) ಪ್ರಕಾರವೇ ಎಲ್ಲವೂ ನಡೆಯಬೇಕು. ಟೋಲ್ ಒಪ್ಪಂದಕ್ಕೂ ಫ್ರೇಮ್‌ವರ್ಕ್ ಅಗ್ರಿಮೆಂಟ್ ನೀಡಿದ ಕರಾರುಗಳಿಗೂ ಸಂಘರ್ಷ ಏರ್ಪಟ್ಟರೆ ಫ್ರೇಮ್‌ವರ್ಕ್ ಅಗ್ರಿಮೆಂಟ್ ನಿಬಂಧನೆಗಳೇ ಅಂತಿಮವಾಗಿರುತ್ತವೆ ಎಂದು ಒಪ್ಪಿ ಅಂಕಿತ ಹಾಕಲಾಗಿತ್ತು. ಒಪ್ಪಂದದ ಪ್ರಕಾರ 4 ಪಥಗಳ ಕಾಂಕ್ರೀಟ್ ರಸ್ತೆ, ಸರ್ವಿಸ್ ರಸ್ತೆ ಹಾಗೂ ನಿರ್ವಹಣಾ ಪ್ರದೇಶಗಳನ್ನು ನಿರ್ಮಿಸಿದ ನಂತರವೇ ಕಂಪನಿಯು ಟೋಲ್ ಸಂಗ್ರಹಿಸಬೇಕಿತ್ತು. ಆದರೆ ಯಾವುದೇ ನಿಬಂಧನೆ ಪಾಲಿಸದೆ 2008ರಿಂದ ಅಕ್ರಮವಾಗಿ ಟೋಲ್ ವಸೂಲಿ ಮಾಡಲಾಗುತ್ತಿದೆ ಎಂದು ಸಚಿವರು ದೂರಿದರು.

ಕೆರೆಗಳಅತಿಕ್ರಮಣಮತ್ತುಔಆಕಮೂಲಕನಿರಂತರಅಕ್ರಮ: ಹೆಚ್.ಟಿ.ಸೋಮಶೇಖರ್ ರೆಡ್ಡಿ ಪ್ರಕರಣದಲ್ಲಿ ನೈಸ್ ಸಂಸ್ಥೆಯು ಸುಪ್ರೀಂ ಕೋರ್ಟ್ ಮುಂದೆ ಪೆರಿಫೆರಲ್ ರಸ್ತೆಗೆ 2,193 ಎಕರೆ ಸೇರಿ ಒಟ್ಟು 6,999 ಎಕರೆ ಭೂಮಿಯನ್ನು ಮಾತ್ರ ಕೇಳಿತ್ತು. ಇದರಲ್ಲಿ ಕರಾಬು, ಖುಷ್ಕಿ, ತರಿ ಮತ್ತು ತೋಟದ ಜಮೀನು ಇತ್ತೇ ಹೊರತು ಯಾವುದೇ ಕೆರೆ ಜಾಗವನ್ನು ಕೇಳಿರಲಿಲ್ಲ. ಆದರೆ, 2021ರಲ್ಲಿ ಎಂಜಿನಿಯರ್ ಕಪಿಲ್ ಶರ್ಮ ಎಂಬುವವರು ದಿಶಾಂಕ್ ಆಪ್ ಬಳಸಿ ಕೆರೆಗಳನ್ನು ಮುಚ್ಚಿ ರಸ್ತೆ ನಿರ್ಮಿಸಿರುವುದನ್ನು ಪತ್ತೆ ಹಚ್ಚಿ ದೂರು ನೀಡಿದ್ದರು ಎಂದು ಹೇಳಿದರು. ಇದೇ ಸಂದರ್ಭದಲ್ಲಿ ಸಚಿವರು ಕೆರೆಗಳನ್ನು ನುಂಗಿರುವ ದಾಖಲೆಗಳನ್ನು ಮಾಧ್ಯಮಗೋಷ್ಠಿಯಲ್ಲಿ ಬಿಡುಗಡೆ ಮಾಡಿದರು.



ಸಚಿವ ಸಂಪುಟಕ್ಕೆ ವಂಚಿಸಿ ಅಲೈನ್‌ಮೆಂಟ್ ಬದಲಾವಣೆ: ಫೆಬ್ರವರಿ 12, 2004ರಂದು ಔಟ್ ಲೈನ್ ಡೆವಲಪ್ಮೆಂಟ್ ಪ್ಲಾನ್ (ODP-Outline Development Plan) ಮೂಲಕ ಸಚಿವ ಸಂಪುಟದ ಅನುಮೋದನೆ ಪಡೆಯದೇ ಕಾನೂನುಬಾಹಿರವಾಗಿ ಅಲೈನ್‌ಮೆಂಟ್ ಬದಲಾಯಿಸಲಾಯಿತು. ಈ ಮೂಲಕ ಭೂಮಿ ಹೆಚ್ಚಳ ಮಾಡಿಕೊಂಡರು. ಕ್ಯಾಬಿನೆಟ್ ಅನುಮೋದನೆ ಇಲ್ಲದೆ ಪೆರಿಫೆರಲ್ ರಸ್ತೆಯ ಭೂಮಿಯನ್ನು 2,193 ಎಕರೆಯಿಂದ 2,747 ಎಕರೆಗೆ ಹಾಗೂ ಟೋಲ್ ರಸ್ತೆಯ ಜಮೀನನ್ನು 6,999 ಎಕರೆಯಿಂದ 9,468 ಎಕರೆಗೆ ಏಕಪಕ್ಷೀಯವಾಗಿ ಹೆಚ್ಚಿಸಿಕೊಳ್ಳಲಾಯಿತು ಎಂದು ಸಚಿವರು ದಾಖಲೆಗಳ ಸಮೇತ ಆರೋಪಿಸಿದರು. ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ಗಳಲ್ಲಿ ಈ ಬಗ್ಗೆ ಸಾಕಷ್ಟು ವಿಚಾರಣೆ ನಡೆದಿದೆ. ರಾಜ್ಯ ಹೈಕೋರ್ಟ್ ಕಳೆದ ಜುಲೈ 29ರಂದು ನೀಡಿರುವ ತೀರ್ಪಿನಲ್ಲಿ ಔಆಕ ಪ್ಲಾನ್ ಮೂಲಕ ಮೂಲ ಒಪ್ಪಂದ ಬದಲಾಯಿಸಿರುವುದನ್ನು ಸಂವಿಧಾನ ಮತ್ತು ಕಾನೂನು ಮೀರಿ ಎಸಗಿದ ವಂಚನೆ (Fraud on Statute and Constitution)ಎಂದು ಸ್ಪಷ್ಟಪಡಿಸಿದೆ ಹಾಗೂ ರಾಜ್ಯ ಪ್ರಾಧಿಕಾರಗಳೂ ಈ ವಂಚನೆಯಲ್ಲಿ ಪಾಲುದಾರರು ಎಂದು ಚಾಟಿ ಬೀಸಿದೆ ಎಂಬ ಅಂಶವನ್ನು ಸಚಿವರು ಉಲ್ಲೇಖಿಸಿದರು.

ತಡೆ ನೀಡದ ಸುಪ್ರೀಂ ಕೋರ್ಟ್: ಹೈಕೋರ್ಟ್ ತೀರ್ಪಿನ ವಿರುದ್ಧ ನೈಸ್ ಸಂಸ್ಥೆ ಸಲ್ಲಿಸಿದ ರಜಾ ಕಾಲದ ವಿಶೇಷ ಅರ್ಜಿ (SLP)ಅರ್ಜಿಗೆ ಸುಪ್ರೀಂ ಕೋರ್ಟ್ ಯಾವುದೇ ತಡೆ ನೀಡದೆ, ಈ ವಿಷಯದ ಕುರಿತು ವಿಸ್ತೃತ ವಿಚಾರಣೆ ನಡೆಸಬೇಕಿದೆ ಎಂದು ಹೇಳಿ ವಿಚಾರಣೆಯನ್ನು ನವೆಂಬರ್ 2ಕ್ಕೆ ಮುಂದೂಡಿದೆ ಎಂದ ಸಚಿವರು; ನಾವು ಪರ ವಾದ ಮಾಡಲಿಕ್ಕೆ ಸರಕಾರದಿಂದ ಸೇರಿ ಒಟ್ಟು ಇಪ್ಪತ್ತೈದು ವಕೀಲರು ನ್ಯಾಯಾಲಯಕ್ಕೆ ಹಾಜರಾಗಿದ್ದರು ಎಂದು ತಿಳಿಸಿದರು. ನೈಸ್ ರಸ್ತೆಯ ಮೂಲ ಯೋಜನಾ ವೆಚ್ಚ ?1,583,76 ಕೋಟಿ ಆಗಿತ್ತು. ಆದರೆ, ಈ ಕಂಪನಿಯು ಅಪೂರ್ಣ ರಸ್ತೆಯನ್ನು ಸಂಚಾರಕ್ಕೆ ತೆರವುಗೊಳಿಸಿ 2008–2009ರಲ್ಲಿ ವರ್ಷಕ್ಕೆ ?5.59 ಕೋಟಿ ಅಕ್ರಮ ಟೋಲ್ ಸಂಗ್ರಹಿಸಿತ್ತು. 2024–2025 ರ ವೇಳೆಗೆ ವರ್ಷಕ್ಕೆ 734.97 ಕೋಟಿ ಟೋಲ್ ಸಂಗ್ರಹಿಸಿದೆ. 2008ರಿಂದ 2025ರವರೆಗೆ ಒಟ್ಟು 4,756.48 ಕೋಟಿ ಟೋಲ್ ಅನ್ನು ಅಕ್ರಮವಾಗಿ ಸುಲಿಗೆ ಮಾಡಲಾಗಿದೆ ಎಂದು ಕೇಂದ್ರ ಸಚಿವ ಕುಮಾರಸ್ವಾಮಿ ಅವರು ಗಂಭೀರ ಆರೋಪ ಮಾಡಿದರು. ಇಷ್ಟೇ ಅಲ್ಲದೆ ಮೂಲ ಚೌಕಟ್ಟು ಒಪ್ಪಂದ ಉಲ್ಲಂಘಿಸಿ ಅನೇಕ ರೀತಿಯಲ್ಲಿ ನೈಸ್ ಕಂಪನಿ ಹಣ ಮಾಡಿದೆ. ಇದರಲ್ಲಿ ಭೂ ಮಾರಾಟದಿಂದ 384 ಕೋಟಿ, ಭೂಮಿ ಮತ್ತು ನಿರ್ಮಾಣ ಯೋಜನೆಗಳ ಜಂಟಿ ಅಭಿವೃದ್ಧಿಗಳ ಮುಂಗಡವಾಗಿ 108 ಕೋಟಿ, ಕನ್ವೆನ್ಷನ್ ಸೆಂಟರ್‌ಗಳಿಂದ 338 ಕೋಟಿ ಗಳಿಸಲಾಗಿದೆ ಎಂದು ಸಚಿವರು ಮಾಹಿತಿ ನೀಡಿದರು. 2016ರಲ್ಲಿ ಸದನ ಸಮಿತಿ ಅಧ್ಯಕ್ಷರಾಗಿದ್ದ ಮಾಜಿ ಸಚಿವರಾದ ಟಿ.ಬಿ.ಜಯಚಂದ್ರ ಅವರು, ನೈಸ್ ಯೋಜನೆಯನ್ನು ಮುಟ್ಟುಗೋಲು ಹಾಕಿಕೊಳ್ಳಲು ಮತ್ತು ಹೆಚ್ಚುವರಿ ಜಮೀನನ್ನು ಹಿಂಪಡೆಯಲು ಶಿಫಾರಸು ಮಾಡಿದ್ದರು. ಆಗಸ್ಟ್ 2023ರಲ್ಲಿ ಈ ನೈಸ್ ರಸ್ತೆ ಅಗತ್ಯವಿಲ್ಲ ಎಂದಿದ್ದ ಜಯಚಂದ್ರ ಅವರು, 2025 ಮೇ ತಿಂಗಳಲ್ಲಿ ನೈಸ್ ಯೋಜನೆ ಪೂರ್ಣಗೊಳಿಸಲು ಮುಖ್ಯಮಂತ್ರಿಗಳಿಗೆ ಪತ್ರ ಬರೆದಿರುವುದರ ಹಿಂದಿನ ರಹಸ್ಯವೇನು? ಇಲ್ಲಿ ಕಾಣದ ಕೈಗಳ ಕೈವಾಡ ಎದ್ದು ಕಾಣುತ್ತಿದೆ ಎಂದು ಕುಮಾರಸ್ವಾಮಿ ಅವರು ಆರೋಪಿಸಿದರು. ಎಸ್.ಎಂ. ಕೃಷ್ಣ ಅವರ ಸರ್ಕಾರದ ಅವಧಿಯಲ್ಲಿ (ನವೆಂಬರ್ 4, 2002) ನಡೆದ ಸಂಪುಟ ನಿರ್ಣಯದಂತೆ 6 ವರ್ಷಗಳಲ್ಲಿ 4 ಪಥದ ಕಾಂಕ್ರೀಟ್ ರಸ್ತೆ ಪೂರ್ಣಗೊಳಿಸದಿದ್ದರೆ ಟೋಲ್ ವಸೂಲಿಯನ್ನು ಹಿಂಪಡೆಯಬೇಕು ಎಂಬ ಷರತ್ತು ವಿಧಿಸಲಾಗಿತ್ತು. ಆದ್ದರಿಂದ, ಹೈಕೋರ್ಟ್ ತೀರ್ಪಿನ ಹಿನ್ನೆಲೆಯಲ್ಲಿ ತಕ್ಷಣವೇ ಕಾನೂನುಬಾಹಿರವಾಗಿ ನಡೆಯುತ್ತಿರುವ ನೈಸ್ ಟೋಲ್ ಸಂಗ್ರಹವನ್ನು ಬಂದ್ ಮಾಡಬೇಕು ಎಂದು ಸಚಿವರು ಒತ್ತಾಯಿಸಿದರು. ಅಕ್ರಮ ಸುಲಿಗೆ ನಿಲ್ಲಿಸಲು ಇನ್ನೂ ಎಷ್ಟು ವರ್ಷ ಬೇಕಪ್ಪ? ಇನ್ನೂ ಹತ್ತು ವರ್ಷ ಇದೆ ಟೋಲ್ ವಸೂಲಿಗೆ ಅಂತಾರೆ. ಏನು ದರೋಡೆ ಕೆಲಸಕ್ಕ ಹತ್ತು ವರ್ಷ ಎನ್ನುವುದೆಲ್ಲಾ ಈಗ ನಡೆಯಲ್ಲ ಎಂದು ಅವರು ಹೇಳಿದರು. ಮಾಜಿ ಶಾಸಕರಾದ ಸುರೇಶ್ ಗೌಡ, ಚೌಡರೆಡ್ಡಿ ತೂಪಲ್ಲಿ, ಗ್ರೇಟರ್ ಬೆಂಗಳೂರು ಜೆಡಿಎಸ್ ಅಧ್ಯಕ್ಷ ಹೆಚ್.ಎಂ.ರಮೇಶ್ ಗೌಡ, ರಾಜ್ಯ ವಕ್ತಾರ ಹೆಚ್.ಎನ್. ದೇವರಾಜು ಮುಂತಾದವರು ಸಚಿವರ ಜತೆಯಲ್ಲಿದ್ದರು.

ಮಾಜಿ ಶಾಸಕರಾದ ಸುರೇಶ್ ಗೌಡ, ಚೌಡರೆಡ್ಡಿ ತೂಪಲ್ಲಿ, ಗ್ರೇಟರ್ ಬೆಂಗಳೂರು ಜೆಡಿಎಸ್ ಅಧ್ಯಕ್ಷ ಹೆಚ್.ಎಂ.ರಮೇಶ್ ಗೌಡ, ರಾಜ್ಯ ವಕ್ತಾರ ಹೆಚ್.ಎನ್. ದೇವರಾಜು ಮುಂತಾದವರು ಸಚಿವರ ಜತೆಯಲ್ಲಿದ್ದರು.

CMYK

ಡಿ.ಕೆ.ಶಿವಕುಮಾರ್‌ಗೆ ತಿರುಗೇಟು ಕೊಟ್ಟ ಹೆಚ್.ಡಿ.ಕುಮಾರಸ್ವಾಮಿ

ನವದೆಹಲಿ: ಸ್ಟಿಂಗ್ ಆಪರೇಶನ್ ಮಾಡುವುದರಲ್ಲಿ ಮಾಸ್ಟರ್ ಆಗಿರುವ ವ್ಯಕ್ತಿಯೇ ತನ್ನ ವಿರುದ್ಧ ಸ್ಟಿಂಗ್ ನಡೆಯುತ್ತಿದೆ ಎಂದು ಹೇಳುತ್ತಿರುವುದು ಹಾಸ್ಯಾಸ್ಪದ. ಸ್ಟಿಂಗ್ ಮಾಡುವ ಗುರುವಿಗೇ ತಿರುಮಂತ್ರ ಹೇಳಲು ಸಾಧ್ಯವೇ? ಹಾಗೇನಾದರೂ ಆಗಿದ್ದರೆ ತನಿಖೆ ಮಾಡಿಸಲಿ ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ಸವಾಲು ಹಾಕಿದರು. ನವದೆಹಲಿಯಲ್ಲಿ ಮಾಧ್ಯಮಗಳು ಕೇಳಿದ ಪ್ರಶ್ನೆಗಳಿಗೆ ಉತ್ತರಿಸಿದ ಅವರು; ನನ್ನನ್ನು ಟ್ರ್ಯಾಪ್ ಮಾಡಲಿಕ್ಕೆ ಬಂದಿದ್ದರು, ಆ ವಿಷಯ ಪೊಲೀಸರಿಗೂ ಗೊತ್ತು. ಹಲವಾರು ಫೋಟೋಗಳು ಇವೆ ಎಂದು ಬೇರೆ ಹೇಳಿದ್ದಾರೆ. ಸ್ಟಿಂಗ್ ಮಾಡಿದ ಆ ಪಿತಾಮಹ ಯಾರು ಅಂತಲೂ ಗೊತ್ತು ಎಂದಿದ್ದಾರೆ. ಅವರೆಲ್ಲಾ ಯಾರೂ ಎಂಬುದನ್ನು ಜನಗಳ ಮುಂದೆ ಇಡಿ. ನಿಮ್ಮ ಬಳಿ 35 ಲಕ್ಷ ಬಹುಮಾನ ಪಡೆದುಕೊಂಡು ಎಸ್ ಐಟಿ ಇದೆಯಲ್ಲವೇಇಂದು ಟಾಂಗ್ ಕೊಟ್ಟರು. ಈ ಮುಖ್ಯಮಂತ್ರಿ ನೀಡುತ್ತಿರುವ ಹೇಳಿಕೆಗಳೇ ಅವರ ವ್ಯಕ್ತಿತ್ವವನ್ನು ತೋರಿಸುತ್ತವೆ. ಜನರ ಗಮನವನ್ನು ಬೇರೆಡೆ ತಿರುಗಿಸಲು ಇಂತಹ ಸ್ಟಂಟ್ ಮಾಡುತ್ತಿದ್ದಾರೆ. ನೈಸ್ (ಓಱಅಇ) ಕಂಪನಿಗೆ ಸಂಬಂಧಿಸಿದ ಅಕ್ರಮಗಳ ದಾಖಲೆಗಳನ್ನು ಬಿಡುಗಡೆ ಮಾಡಿದಾಗ ಉಂಟಾದ ಮುಜುಗರವನ್ನು ಮರೆಮಾಚಲು ಇಂತಹ ಸುದ್ದಿಗಳನ್ನು ಹಬ್ಬಿಸುತ್ತಿದ್ದಾರೆ. ಮಾಧ್ಯಮಗಳಲ್ಲಿ ಈ ಸುದ್ದಿ ಪ್ರಕಟವಾಗದಂತೆ ತಡೆಯಲು ಇಂತಹ ಕೆಲಸ ಮಾಡುತ್ತಿದ್ದಾರೆ ಎಂದು ಕೇಂದ್ರ ಸಚಿವರು ಡಿಕೆಶಿ ವಿರುದ್ಧ ಆರೋಪ ಮಾಡಿದರು. ಮುಖ್ಯಮಂತ್ರಿಗಳು ಕ್ಯಾಬಿನೆಟ್ ನಲ್ಲಿ ಸಚಿವರಿಗೆ ಎಚ್ಚರಿಕೆ ಕೊಟ್ಟಿದ್ದಾರೆ. ನನ್ನನ್ನು ಟ್ರ್ಯಾಪ್ ಮಾಡಲಿಕ್ಕೆ ಬಂದಿದ್ದರು. ಆ ವಿಚಾರ ಪೊಲೀಸರಿಗೂ ಗೊತ್ತು. ಅದಕ್ಕೆ ಸಂಬಂಧಿಸಿದ ದಾಖಲೆಗಳು ಕೂಡ ಇವೆ, ಫೋಟೋಗಳು ಇವೆ ಎಂದು ಹೇಳಿಕೊಂಡಿದ್ದಾರೆ. ಆ ಪಿತಾಮಹ ಯಾರು ಅಂತಲೂ ಗೊತ್ತು ಎಂದಿದ್ದಾರೆ. ಹಾಗಾದರೆ ಯಾರು ಆ ಪಿತಾಮಹ? ಅವರ ಬಗ್ಗೆ ಮಾಹಿತಿ ಇದ್ದರೆ ಜನಗಳ ಮುಂದೆ ಇಡಿ. ಅದಕ್ಕೆ ಯಾಕೆ ಹಿಂಜರಿಯುತ್ತೀರಿ ಎಂದು ಕುಮಾರಸ್ವಾಮಿ ಅವರು ತಿರುಗೇಟು ಕೊಟ್ಟರು. ರಾಜ್ಯದ ಸಿಎಂ ಆಗಿ, ಹಿಂದಿನ ಸಿಎಂ ಸಿದ್ದರಾಮಯ್ಯ ಅವರನ್ನು ಟ್ರ್ಯಾಪ್ ಮಾಡಿದ್ದಾರೆ ಎನ್ನುವ ಸುದ್ದಿ ಹರಿದಾಡುತ್ತಿದೆ. ಆ ವಿಷಯವನ್ನು ಯಾಕೆ ಮುಚ್ಚಿಟ್ಟಿದ್ದೀರಿ? ಯಾಕೆ ಮುಚ್ಚಿಡುತ್ತಿದ್ದಿರಾ? ರಾಜ್ಯದ ಸಿಎಂ ಆಗಿದ್ದವರನ್ನು, ಹಾಲಿ ಮುಖ್ಯಮಂತ್ರಿಯನ್ನು ಟ್ರ್ಯಾಪ್ ಮಾಡತಕ್ಕದ್ದು ಅಂದರೆ ಏನರ್ಥ? ಎಲ್ಲಾ ಮಾಹಿತಿ ಇದ್ದರೂ ಇಟ್ಟುಕೊಂಡು ಏನು ಮಾಡುತ್ತಿದ್ದೀರಿ? ಎಂದು ಕೇಂದ್ರ ಸಚಿವರು ಕೇಳಿದರು. ಸ್ಟಿಂಗ್ ಮಾಡಲು ಬಂದವರನ್ನು ಹಿಡಿಯದೇ ಕಡಲೆಪುರಿ ತಿನ್ನುತ್ತಿದ್ದೀರಾ? ಎಲ್ಲಾ ವಿಷಯ ಗೊತ್ತಿದ್ದರೂ ಅವರನ್ನು ಯಾಕೆ ಹಿಡಿಯಲಿಲ್ಲ? ಈ ನೈಸ್ ಸಂಸ್ಥೆ ಮಾಲೀಕ ನಿಮ್ಮನ್ನು ಭೇಟಿ ಮಾಡಿ ಹೋದರು. ಅವರೇ ಏನಾದರೂ ನಿಮ್ಮನ್ನು ಟ್ರ್ಯಾಪ್ ಮಾಡಲಿಕ್ಕೆ ಪ್ರಯತ್ನ ಮಾಡ್ತಿದ್ದಾರೋ ಎಂಬ ಸತ್ಯವನ್ನ ನೀವೇ ಹೇಳಬೇಕು. ನಿಮ್ಮ ಹೇಳಿಕೆಗಳು ಹೇಗಿವೆ ಎಂದರೆ ಟ ಕುಂಬಳಕಾಯಿ ಕಳ್ಳ ಅಂದರೆ ಹೆಗಲು ಮುಟ್ಟಿ ನೋಡಿಕೊಂಡ ಹಾಗಿದೆ ಎಂದು ಕುಮಾರಸ್ವಾಮಿ ಅವರು ತರಾಟೆಗೆ ತೆಗೆದುಕೊಂಡರು. ಈ ಹಿಂದೆಯೂ ನನ್ನನ್ನು ಒಂದು ಮಾಧ್ಯಮದವರು ಟ್ರ್ಯಾಪ್ ಮಾಡಲಿಕ್ಕೆ ಬಂದು ಸ್ವತಃ ನನಗೇ ಸಿಕ್ಕಿ ಹಾಕಿಕೊಂಡರು ಎಂದು ಹೇಳಿದ್ದೀರಿ. ಮೊನ್ನೆ ನೂರು ದಿನದ ಮಾಧ್ಯಮಗೋಷ್ಠಿಯಲ್ಲಿ ಕೂಡ ಆ ಮಾತನ್ನು ಪುನರುಚ್ಚಾರ ಮಾಡಿದ್ದೀರಿ. ಇವಾಗ ಯಾರು ಬಂದಿದ್ದರು ಯಾವ ವ್ಯಕ್ತಿ ಬಂದಿದ್ದರು? ಯಾವ ಪಿತಾಮಹ ಬಂದಿದ್ದರು ನೀವಿದ್ದ ಜಾಗದಲ್ಲಿ ಸಿಸಿ ಕ್ಯಾಮೆರಾ ಇರಬೇಕಲ್ಲಾ ಎಲ್ಲವನ್ನೂ ತೆಗೆಸಿ. ನಿಮ್ಮ ಹಳೆಯ ಚಾಳಿ ಬಗ್ಗೆ ಜನರ ಮೇಲೆ ಹೇಳಿ ಸ್ಟಂಟ್ ಮಾಡುತ್ತಿದ್ದೀರಿ. ಇದು ಹೇಗಿದೆ ಎಂದರೆ ಗುರುವಿಗೆ ತಿರುಮಂತ್ರದ ತರಹ ಇದೆ. ಯಾರು ಅವರು ಅಂತ ಜನಗಳ ಮುಂದೆ ಹೇಳಿ ಎಂದು ಕೇಂದ್ರ ಸಚಿವರು ಸವಾಲು ಹಾಕಿದರು. ಈ ಹಿಂದೆ ರಮೇಶ್ ಜಾರಕಿಹೊಳಿ ಅವರನ್ನು ಟ್ರ್ಯಾಪ್ ಮಾಡುವ ಕೆಲಸ ಮಾಡಿದ್ದು ಯಾರು?ಮಾಜಿ ಮಂತ್ರಿ ಕೆ.ಎನ್. ರಾಜಣ್ಣ ಅವರು ವಿಧಾನಸಭೆಯಲ್ಲೇ 40–48 ಜನರ ಟ್ರ್ಯಾಪ್ ಬಗ್ಗೆ ಅಸ್ಲೆಂಬಿಯಲ್ಲಿ ಮಾತನಾಡಿದ್ದರು. ನಮ್ಮ ಮಂತ್ರಿಮಂಡಲದ ಮಂತ್ರಿಯೇ ಮೂಲಪುರುಷನೇ ಇದ್ದಾನೆ ಎಂದು ರಾಜಣ್ಣ ಹೇಳಿದ್ದರು. ಹಿಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಯಾವ ರೀತಿ ಮುಗಿಸಿದಿರಿ ಎನ್ನುವುದನ್ನು ನಾನು ಬಲ್ಲೆ. ಸತ್ಯ ಹೇಳಿ, ಇದೆಲ್ಲಾ ನಿಮ್ಮದೇ ಕೈವಾಡ ಅಲ್ಲವೇ? ಎಂದು ಡಿಕೆಶಿಯನ್ನು ನೇರವಾಗಿ ಪ್ರಶ್ನಿಸಿದರು. ಸ್ಟಿಂಗ್ ಯಾರು ಮಾಡಲು ಬಂದರು ಎಂಬುದನ್ನು ಮುಖ್ಯಮಂತ್ರಿ ಹೇಳಲೇಬೇಕಾಗುತ್ತದೆ. ಅವರು ಹೇಳಿಕೆ ಕೊಟ್ಟು ಸುಮ್ಮನೆ ಇರೋಕೆ ಆಗೋದಿಲ್ಲ. ಮುಖ್ಯಮಂತ್ರಿ ವಿರುದ್ಧವೇ ಟ್ರ್ಯಾಪ್ ನಡೆಯುತ್ತಿದೆ ಎಂದರೆ ಸಾಮಾನ್ಯ ವಿಷಯವಲ್ಲ. ಇದೆಲ್ಲಾ ತನಿಖೆಗೆ ಒಳಪಡಬೇಕು. ರಾಜ್ಯಪಾಲರನ್ನು ಭೇಟಿಗೆ ತೆರಳಿದ್ದವರಲ್ಲಿ ಒಬ್ಬರು ಇದ್ದಾರೆ ಎಂದು ಹೇಳಿದ್ದೀರಾ ಯಾರು ಅವರು? ಎಂಬುದನ್ನು ಅವರು ಹೇಳಬೇಕಾಗುತ್ತದೆ ಎಂದು ಕೇಂದ್ರ ಒತ್ತಾಯಿಸಿದರು. ಗೃಹ ಸಚಿವರು ನನ್ನ ಬಗ್ಗೆ ಏನೋ ಹೇಳಿದ್ದಾರೆ, ಅವರ ಬಳಿ ಪೆನ್ ಡ್ರೈ ಅದು ಇದು ಅಂತ ಬೇರೆ ಹೇಳಿದ್ದಾರೆ. ನಾನು ಅವರು ಹೇಳಿದ ರೀತಿಯ ಪೆನ್ ಡ್ರೈವ್ ಇಟ್ಟಿಲ್ಲ. ಇತ್ತೀಚೆಗೆ ಬಿಡುತ್ತಿದ್ದೇನಲ್ಲ, ನೈಸ್ ದಾಖಲೆಗಳು.. ಅಂತಹ ಪೆನ್ ಡ್ರೈವ್ ಗಳು ನನ್ನ ಬಳಿ ಇರೋದು. ಈ ಸರಕಾರ ರಚನೆಯಾದ ಕೇವಲ 15–20 ದಿವಸಗಳಲ್ಲಿ ಎಂಜಿನಿಯರ್ ಗಳ ವರ್ಗಾವಣೆಯಲ್ಲಿ ನಡೆದ ಭ್ರಷ್ಟಾಚಾರದ ಬಗ್ಗೆ ಪ್ರಸ್ತಾಪಿಸಿದ್ದ ಪೆನ್ ಡ್ರೈವ್ ಅದು ಎಂದು ಅವರು ಹೇಳಿದರು. ಈ ರಾಜ್ಯದ ಸಿಎಂಗೆ ಏನಾದರೂ ಆ ಸ್ಥಾನದ ಮಾರ್ಯಾದೆ ಉಳಿಸಬೇಕೆಂದಿದ್ದರೆ ಆ ಟ್ರ್ಯಾಪ್, ಸ್ಟಿಂಗ್ ಬಗ್ಗೆ ರಾಜ್ಯದ ಜನತೆಗೆ ಉತ್ತರ ಕೊಡಬೇಕು. ಸಂಪುಟದಲ್ಲಿ ನಡೆದ ಚರ್ಚೆ ಬಗ್ಗೆ ಯಾರ ಹೊರಗಡೆ ಬಿಟ್ಟಿದ್ದು, ಅಭಿವೃದ್ಧಿ ಬಗ್ಗೆ ಚರ್ಚೆ ನಡೆಸಿದ್ದು ಹೊರ ಬಂದಿಲ್ಲ. ಸ್ಟಿಂಗ್ ಬಗ್ಗೆ ಎಚ್ಚರಿಕೆ ಕೊಟ್ಟಿದ್ದು ಹೊರ ಬಂದಿದೆ. ನಿಮ್ಮನ್ನ ಸ್ಟಿಂಗ್ ಮಾಡಲು ಬಂದವರನ್ನು ಏತಕ್ಕೆ ಕಳಿಸಿದ್ದೀರಿ? ಯಾಕೆ ಬಿಟ್ಟು ಕಳಿಸಿದಿರಿ ನಿಮ್ಮ ಭೇಟಿಗೆ ಬಂದರೆ ಫೋನ್ ಗಳನ್ನು ಹೊರಗೆ ಇಡಿಸಿ ಒಳಗಡೆ ಕರೆಸಿಕೊಳ್ತೀರಾ! ಸ್ಟಿಂಗ್ ಮಾಡಲು ಬಡವರನ್ನು ಅರೆಸ್ಟ್ ಮಾಡದೆ ನಿಮ್ಮ ಅಧಿಕಾರಿಗಳು ಯಾಕೆ ಬಿಟ್ಟರಿ? ನೀವು ಕೆಲಸ ಮಾಡಲಿಕ್ಕಾಗದೆ ನಿಮ್ಮ ಆಕ್ರಮಗಳನ್ನು ಬಯಲಿಗೆಳೆದಾಗ ಅದನ್ನು ಮುಚ್ಚಿಡಲಿಕ್ಕೆ ಈ ಕೆಲಸ ಮಾಡುತ್ತಿದ್ದೀರಿ. ಇದು ತನಿಖೆಯಾದರೆ ನಿಮಗೆ ಸುತ್ತಿಕೊಳ್ಳುತ್ತದೆ. ನಿಮ್ಮ ಬೆನ್ನು ನಿಮಗೆ ಕಾಣಲ್ಲ, ಇದರ ಮೂಲ ಪಿತಾಮಹ ಯಾರು ಅಂತಾ ಎಲ್ಲರಿಗೂ ಗೊತ್ತಾಗುತ್ತದೆ. ಈ ರೀತಿಯ ನಾಟಕ ಬಿಟ್ಟು ಸತ್ಯಾಂಶ ಹೊರಗಡೆ ಇಡಿ, ಸರಿಯಾಗಿ ತನಿಖೆ ಮಾಡಿ ಎಂದು ಸಚಿವರು ಸವಾಲು ಹಾಕಿದರು. ರಮೇಶ್ ಜಾರಕಿಹೊಳಿ, ರಾಜಣ್ಣ, ಸತೀಶ್ ಜಾರಕಿಹೊಳಿ ಅವರನ್ನ ಸೈಲೆಂಟ್ ಮಾಡಿದ್ದು ಯಾರು ಎನ್ನುವುದು ಎಲ್ಲರಿಗೂ ಗೊತ್ತಿದೆ. ಇಡಿ ಮತ್ತು ಐಟಿ ಅಧಿಕಾರಿಗಳು ಬರುವುದು ಅಕ್ರಮಗಳನ್ನು ಪತ್ತೆ ಹಚ್ಚಲು. ಅವರು ನಿಮ್ಮನ್ನ ಟ್ರ್ಯಾಪ್ ಮಾಡಲು ಬರಲ್ಲ. 136 ಶಾಸಕರಿರುವ ಸರ್ಕಾರವನ್ನು ಅಸ್ಥಿರಗೊಳಿಸುವ ಶಕ್ತಿ ವಿರೋಧ ಪಕ್ಷಕ್ಕಿಲ್ಲ. ಮುಖ್ಯಮಂತ್ರಿಗಳು ಸರ್ಕಾರ ಉಳಿಸುವಂತ ಶಕ್ತಿ ಇರುವವರು. ಅವರು ಸ್ಥಾನ ಉಳಿಸಿಕೊಳ್ಳಲು ಆಡಳಿತ ಪಕ್ಷದವರೇ ಬಿಜೆಪಿ, ಜೆಡಿಎಸ್‌ನ 15–20 ಜನರ ಬೆಂಬಲ ಕೊಡುವವರು ಇದ್ದಾರೆ ಎಂದು ಹೇಳಿದ್ದಾರೆ. ಹಿಗಿದ್ದ ಮೇಲೆ ಅಸ್ಥಿರ ಮಾಡುವವರು ಯಾರು ಈ ಸುಳ್ಳು ಎಷ್ಟು ದಿನ ಹೇಳುತ್ತಿರಾ ನಿಮ್ಮ ಕೆಟ್ಟ ನಾಯಕತ್ವದಲ್ಲಿ ಕರ್ನಾಟಕ ರಾಜ್ಯ ಹಾಳಾಗುತ್ತಿದೆ. ಇದರ ಬಗ್ಗೆ ಕಠಿಣ ಕ್ರಮ ತೆಗೆದುಕೊಳ್ಳಬೇಕು. ಸತ್ಯಾಂಶ ಹೊರ ಬರಬೇಕು? ಎಂದು ಸಚಿವರು ಒತ್ತಾಯಿಸಿದರು. ಮಾಧ್ಯಮಗಳಿಗೆ ಸುದ್ದಿ ಕೊಡೊದು, ಯಾವ ಸುದ್ದಿ ಹಾಕಿದರೆ ಜಾಹೀರಾತು ಕೊಡುತ್ತೇವೆ, ಹಣಕಾಸು ಆಮಿಷಗಳನ್ನು ಒಡ್ಡಿ ಪತ್ರಕರ್ತರನ್ನು ಹೆದರಿಸುತ್ತಿದ್ದೀರಿ ಎನ್ನುವುದು ಗೊತ್ತಿದೆ. ತಮ್ಮ ಪರ ಸುದ್ದಿ ಹಾಕಿಸಿಕೊಳ್ಳಲು ಮಾಧ್ಯಮಗಳನ್ನು ಹೆದರಿಸುವ ಕೆಲಸ ಮಾಡುತ್ತಿದ್ದೀರಿ. ನಿಮ್ಮನ್ನು ಕಟ್ ಮಾಡ್ತಿವಿ, ನಿಮ್ಮನ್ನು ಬೆಳೆಯೊಕ್ಕೆ ಬಿಡಲ್ಲ ಅಂತಾ ಸಂಪಾದಕರನ್ನೇ ಹೆದರಿಸುತ್ತಿದ್ದಿರಾ ಎನ್ನುವುದು ಗೊತ್ತಿದೆ. ಯಾರನ್ನು ಕಂಟ್ರೋಲ್ ಮಾಡಬೇಕು, ಯಾವ ಸುದ್ದಿ ಬರಬೇಕು ಎಂದು ನಿಮ್ಮ ಅಪ್ಪಣೆ ಕೊಟ್ಟು ಜನರನ್ನ ಇಟ್ಟದ್ದೀರಾ ಹೇಗೆ? ಬಹಳ ದಿನ ನಿಮ್ಮ ಆಟ ನಡೆಯುವುದಿಲ್ಲ. ಪ್ರಜಾಪ್ರಭುತ್ವದ ನಾಲ್ಕನೇ ಅಂಗ ನೀವು ಅಂದುಕೊಂಡಷ್ಟು ದುರ್ಬಲ ಅಲ್ಲ ಎಂಬುದನ್ನು ತಿಳಿದುಕೊಳ್ಳಿ ಎಂದು ಕುಮಾರಸ್ವಾಮಿ ಅವರು ಡಿಕೆಶಿಗೆ ತಿರುಗೇಟು ಕೊಟ್ಟರು.

ಪ್ರಿಯಾಂಕ್ ಖರ್ಗೆಗೆ ತರಾಟೆ:

ಪ್ರಿಯಾಂಕ್ ಖರ್ಗೆ ಅವರು ನೈತಿಕತೆಯ ಬಗ್ಗೆ ಮಾತನಾಡುತ್ತಾರೆ. ಅವರಿಗೆ ಅಂತಹ ನೈತಿಕತೆ ಇದ್ದರೆ ಕೆಪಿಎಸ್ಸಿಯಲ್ಲಿ ನಡೆದ 24 ಜನ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಎಂಜಿನಿಯರ್ ಗಳ ನೇಮಕಾತಿಗೆ ರುಜು ಹಾಕಿದ್ದರ ಬಗ್ಗೆ ಇದುವರೆಗೂ ಯಾಕೆ ಉತ್ತರ ನೀಡಿಲ್ಲ ಎಂದು ಕೇಂದ್ರ ಸಚಿವರು ಪ್ರಶ್ನಿಸಿದರು. ನಾನು ಕೇಳಿದ ಪ್ರಶ್ನೆಗಳಿಗೆ, ಬಿಡುಗಡೆ ಮಾಡಿದ ದಾಖಲೆಗಳಿಗೆ ಈವರೆಗೂ ಪ್ರಿಯಾಂಕ್ ಖರ್ಗೆ ಉತ್ತರ ಕೊಟ್ಟಿಲ್ಲ. ಅವರ ಯೋಗ್ಯತೆಗೆ ಆರೋಪಗಳ ತುಟಿ ಬಿಚ್ಚಿಲ್ಲ. ನನ್ನ ನೈತಿಕತೆಯ ನಗ್ಗೆ ಮಾತನಾಡುತ್ತಾರೆ. ಸಿದ್ದಾರ್ಥ ಟ್ರಸ್ಟ್ ಹೆಸರಿನಲ್ಲಿ ಸರ್ಕಾರಿ ಭೂಮಿಯನ್ನು ಅಕ್ರಮವಾಗಿ ನಾನು ಹೊಡೆದಿಲ್ಲ. ಅವರದು ದೊಡ್ಡ ಕಂತಯೇ ಇದೆ. ಎಲ್ಲಾ ತ್ಯಜಿಸಿ ಸನ್ಯಾಸಿಯಾದ ಸಿದ್ದಾರ್ಥನ ಹೆಸರನ್ನು ಇಟ್ಟುಕೊಂಡು ಇಂತಹ ಕೆಲಸ ಮಾಡುತ್ತಿದ್ದಾರೆ. ಇವೆಲ್ಲಾ ಬಿಟ್ಟು ಗೌರಯುತವಾಗಿ ನಮ್ಮ ಪ್ರಶ್ನೆಗಳನ್ನ ಚರ್ಚೆ ಮಾಡಿ ಉತ್ತರ ಕೊಡಿ ಎಂದು ಕೇಂದ್ರ ಸಚಿವರು ಕೇಳಿದರು. ಮಾಜಿ ಶಾಸಕ, ಗ್ರೇಟರ್ ಬೆಂಗಳೂರು ಜೆಡಿಎಸ್ ಅಧ್ಯಕ್ಷ ಹೆಚ್.ಎಂ. ರಮೇಶ್ ಗೌಡ ಅವರು ಹಾಜರಿದ್ದರು.

ಸ್ಟಿಂಗ್ ಬಗ್ಗೆ ಯಾರಿಗೆ ಜ್ಞಾನ ಜಾಸ್ತಿ ಅನ್ನೋದು ಜಗತ್ತಿಗೆ ಗೊತ್ತಿದೆ: ನಿಖಿಲ್ ಕುಮಾರಸ್ವಾಮಿ ಟಾಂಗ್

ಹಾಸನ: ಚನ್ನರಾಯಪಟ್ಟಣಸ್ಟಿಂಗ್ ಆಪರೇಷನ್ ಬಗ್ಗೆ ಯಾರಿಗೆ ಹೆಚ್ಚು ಜ್ಞಾನ ಇದೆ, ಯಾರು ಇದರಲ್ಲಿ ನಿಸ್ಸೀಮರು ಅನ್ನೋದು ಇಡೀ ಜಗತ್ತಿಗೆ ಗೊತ್ತಿದೆ ಎಂದು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅವರು ತೀಕ್ಷ್ಣವಾಗಿ ಉತ್ತರಿಸಿದರು. ಚನ್ನರಾಯಪಟ್ಟಣದಲ್ಲಿ ಮಾಧ್ಯಮಗಳ ಜತೆ ಮಾತನಾಡಿದ ಅವರು, "ಸದನದ ಒಳಗೆ ಯಾರ್ಯಾರು ಸ್ಟಿಂಗ್ ಬಗ್ಗೆ ಮಾತನಾಡಿದ್ದಾರೆ, ಸ್ವಪಕ್ಷದ ಹಿರಿಯ ಸಚಿವರೇ, ಬಹಳಷ್ಟು ಬಾರಿ ವಿಧಾನಸೌಧದ ಮೆಟ್ಟಿಲು ಹತ್ತಿರುವ ಹಿರಿಯರು ಆತಂಕ ವ್ಯಕ್ತಪಡಿಸಿರುವುದು ದಾಖಲೆ ಸಮೇತ ಸದನದ ಒಳಗೆ ಇದೆ. ಇದನ್ನು ನಾನು ಹೇಳುವುದಕ್ಕಿಂತ ಜನರಿಗೇ ಬಿಟ್ಟು ಬಿಡೋಣ. ಸ್ಟಿಂಗ್ ಮಾಡ್ತಾರೆ, ಸಚಿವರು ಹುಷಾರಾಗಿರಿ ಎಂದು ಸ್ವತಃ ಸರ್ಕಾರದಲ್ಲಿರುವವರೇ ಹೇಳುತ್ತಾರೆ ಅಂದರೆ, ಸರ್ಕಾರದ ಒಳಗಡೆ ಏನೋ ನಡೆಯುತ್ತಿದೆ ಎಂದರ್ಥ. ಜನಕ್ಕೆ ಅನುಕೂಲ ಮಾಡುವುದನ್ನು ಬಿಟ್ಟು, ತಮಗೆ ಅನುಕೂಲ ಮಾಡಿಕೊಳ್ಳುತ್ತಿದ್ದಾರೆ ಎಂದು ಸಚಿವರು ಅರ್ಥ ಮಾಡಿಕೊಳ್ಳಬೇಕು. ಮುಖ್ಯಮಂತ್ರಿಗಳ ಅಂಗಳದಲ್ಲೇ ಗುಪ್ತಚರ ಇಲಾಖೆ ಇದೆ. ಸರ್ಕಾರ ಅವರದ್ದು, ಗುಪ್ತಚರ ಇಲಾಖೆ ಯಾರ ಹತ್ತಿರ ಇದೆ ಎಂಬುದನ್ನು ಅವರೇ ಹೇಳಬೇಕು, ನಾವು ಹೇಳಲು ಆಗುತ್ತಾ?" ಎಂದು ಪ್ರಶ್ನಿಸಿದರು.

ರೈತರಿಗೆ 2500 ರೂ. ಪರಿಹಾರದಿಂದ ಕಣ್ಣೀರು ಒರೆಸಲು ಸಾಧ್ಯನಾ?

ರಾಜ್ಯ ಸರ್ಕಾರ ರೈತರಿಗೆ 2500 ರೂ. ಪರಿಹಾರ ಕೊಡ್ತೀನಿ ಅಂತ ಹೇಳಿ ತಿಂಗಳುಗಳೇ ಕಳೆದಿವೆ. ಇಲ್ಲಿಯವರೆಗೂ ಸರ್ಕಾರಿ ಆದೇಶವೇ ಆಗಿಲ್ಲ. ಈ 2500 ರೂ. ಯಾವಾಗ ಬರುತ್ತೆ? ಯಾವ ಕಾಲಕ್ಕೆ ಬರುತ್ತೆ? ಕೇವಲ 2500 ರೂಪಾಯಿಯಿಂದ ರೈತರ ಕಣ್ಣೀರನ್ನು ಒರೆಸಲು ಸಾಧ್ಯನಾ? ಇದನ್ನು ಸರ್ಕಾರ ಆಲೋಚನೆ ಮಾಡಬೇಕು. ಕೇವಲ ಘೋಷಣೆಯಿಂದ ಹೊಟ್ಟೆ ತುಂಬಿಸಿಕೊಳ್ಳಲು ಆಗಲ್ಲ. ಪರಿಹಾರ ಘೋಷಣೆ ಮಾಡಿದ ಮಾತ್ರಕ್ಕೆ ರೈತರ ಸಂಕಷ್ಟ ಪರಿಹಾರ ಆಗಲ್ಲ ಎಂದು ಕಿಡಿಕಾರಿದರು. ಎನ್‌ಡಿಆರ್‌ಎಫ್ ಗೈಡ್‌ಲೈನ್ಸ್ ಎಂದು ಹೇಳಿ ಸರ್ಕಾರ ನುಣುಚಿಕೊಳ್ಳುವುದು ಬೇಡ. ಪ್ರತಿ ವರ್ಷವೂ ಎನ್‌ಡಿಆರ್‌ಎಫ್ ಕಡೆಯಿಂದ ಅತಿವೃಷ್ಟಿ ಇರಲಿ, ಅನಾವೃಷ್ಟಿ ಇರಲಿ 3700 ಕೋಟಿ ರಾಜ್ಯದ ಜನರಿಗೆ ಬರಲೇಬೇಕು, ಬರುತ್ತೆ. ಯುಪಿಎ ಮತ್ತು ಎನ್‌ಡಿಎ ಅವಧಿಯನ್ನು ಲೆಕ್ಕ ಮಾಡಿದರೆ, ಕಾಂಗ್ರೆಸ್ ಕೇಂದ್ರದಲ್ಲಿ ಆಡಳಿತದಲ್ಲಿದ್ದಾಗ ನಮ್ಮ ನಾಡಿಗೆ 5% ಗಿಂತ ಕಡಿಮೆ ಹಣ ಬಂದಿದೆ. ಎನ್‌ಡಿಎ ಬಂದ ನಂತರ ಅದು 16% ರೀಚ್ ಆಗಿದೆ. ಹಾಗಾಗಿ ಸುಮ್ಮನೆ ಕೇಂದ್ರದ ಕಡೆ ಬೆಟ್ಟು ತೋರಿಸುವುದು ಬೇಡ.



ತಮ್ಮ ಲೋಪವನ್ನು ಮುಚ್ಚಿಟ್ಟುಕೊಂಡು, ಎನ್‌ಡಿಆರ್‌ಎಫ್ ಹಣ ಬಂದ ಮೇಲೆ ಕೊಡ್ತೀವಿ ಅನ್ನೋದು ಸರಿಯಲ್ಲ. ಈಗಾಗಲೇ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಕೇಂದ್ರ ತಂಡ ಬರ ಅಧ್ಯಯನ ಮಾಡುತ್ತಿದೆ. ಅದನ್ನು ನೆಪ ಮಾಡಿಕೊಂಡು ನುಣುಚಿಕೊಳ್ಳದೆ, ಮೊದಲು ರೈತರನ್ನು ಕಾಪಾಡುವ ಕೆಲಸ ಮಾಡಲಿ ಎಂದು ಆಗ್ರಹಿಸಿದರು.

ಮೇಕೆದಾಟು ಯೋಜನೆ ವಿಚಾರ:

ಮುಂದಿನಮಾರ್ಚ್‌ಅಂತ್ಯದೊಳಗೆಮೇಕೆದಾಟುಯೋಜನೆ ಆರಂಭಿಸುತ್ತೇವೆ ಎಂದು ಸಚಿವ ಚೆಲುವರಾಯಸ್ವಾಮಿ ಹೇಳಿದ್ದಾರೆ. ಇಂಡಿ ಮೈತ್ರಿಕೂಟದಲ್ಲಿ ಡಿಎಂಕೆ ಜೊತೆ ತಮಿಳುನಾಡಿನಲ್ಲಿ ಇವರು ಅಲೈಯನ್ಸ್ ಪಾರ್ಟ್ನರ್ ಆಗಿದ್ದಾರೆ. ಈಗ ಹೊಸದಾಗಿ ನಟ ವಿಜಯ್ ಜೊತೆ ಹೋಗಿ ಐದಾರು ಸೀಟ್ ತಗೊಂಡು ಅಲ್ಲೂ ಪಾರ್ಟ್ನರ್ ಆಗಿದ್ದಾರೆ. ಹಾಗಾದರೆ ಮೇಕೆದಾಟು ಯೋಜನೆಯನ್ನು ತಡೆದಿರುವವರು ಯಾರು? ಮೇಕೆದಾಟು ಯೋಜನೆ ಆದರೆ ಈ ಭಾಗದ ರೈತರಿಗೆ ಅನುಕೂಲ ಆಗುತ್ತೆ ಅಂದಾಗ ಧಾರಾಳವಾಗಿ ಮಾಡಲಿ. ಅದಕ್ಕೆ ಬೇಕಾದ ಎನ್‌ಒಸಿ ಕೊಡಿಸಲಿ, ಹಿಡಿದುಕೊಂಡಿರುವವರು ಯಾರು? ಎಂದು ಸವಾಲು ಹಾಕಿದರು.

ಜಿ.ಪಂ, ತಾ.ಪಂ ಚುನಾವಣೆ ವಿಚಾರ:

ಈಗ ನಾವು ರೈತ ಸ್ವಾಭಿಮಾನ ಯಾತ್ರೆಯನ್ನು ಮುಂದಿಟ್ಟುಕೊಂಡು ರೈತರ ಬಳಿ ಹೋಗುತ್ತಿದ್ದೇವೆ. ಜಿ.ಪಂ, ತಾ.ಪಂ ಚುನಾವಣೆ ಬಗ್ಗೆ ನಮಗೂ ರಿಪೋರ್ಟ್ ಬಂದಿದೆ, ಗೆಜೆಟ್ ನೋಟಿಫಿಕೇಷನ್ ಇವತ್ತೇ ಹೊರಡಿಸಬಹುದು ಎಂದು ಹೇಳಲಾಗುತ್ತಿದೆ. ಈಗಾಗಲೇ ಪಕ್ಷ ಸಂಘಟನೆ ಮಾಡುತ್ತಿದ್ದೇವೆ. ಮುಂದಿನ ಯಾವುದೇ ಚುನಾವಣೆ ಇರಬಹುದು, ನಾವು ಎನ್‌ಡಿಎ ಜೊತೆಗೂಡಿ ಫೈಟ್ ಮಾಡ್ತೀವಿ. ಎನ್‌ಡಿಎ ಒಟ್ಟಾಗಿ, ಒಗ್ಗಟ್ಟಾಗಿ ಇರುತ್ತೆ. ಎರಡೂ ಪಕ್ಷದ ಕಾರ್ಯಕರ್ತರು ಒಟ್ಟಾಗಿ ದುಡಿಯುತ್ತಾರೆ. ನಾವು ಯಾವತ್ತಿನಿಂದಲೂ ಚುನಾವಣೆಗೆ ರೆಡಿ ಇದ್ದೀವಿ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಶತಮಾನ ಇತಿಹಾಸದ ಹೆಬ್ಬಾಳ ದಸರಾಗೆ ಅ.11 ರಂದು ಚಾಲನೆ

ಬೆಂಗಳೂರು: ರಾಜ್ಯದ ಎರಡನೇ ಮೈಸೂರು ದಸರಾವೆಂದೇ ಖ್ಯಾತಿ ಹೊಂದಿರುವ ಅದ್ದೂರಿ ಹೆಬ್ಬಾಳ ದಸರಾ ಉತ್ಸವಕ್ಕೆ ಇದೇ ಅಕ್ಟೋಬರ್ 11 ರಂದು ಚಾಲನೆ ದೊರೆಯಲಿದೆ. ಹೆಬ್ಬಾಳ ಕ್ಷೇತ್ರದ ಶಾಸಕರೂ ಆಗಿರುವ ಸಾರಿಗೆ ಸಚಿವ ಬೈರತಿ ಸುರೇಶ್ ಅವರು ಗುರುವಾರ ಜೆ.ಸಿ.ನಗರದ ಸರ್ಕಾರಿ ಪ್ರಾಥಮಿಕ ಶಾಲಾ ಮೈದಾನದಲ್ಲಿ ಈ ದಸರಾ ಉತ್ಸವದ ವೇದಿಕೆ ಸಿದ್ಧತೆಗೆ ಭೂಮಿಪೂಜೆ ಮತ್ತು ಧ್ವಜ ಪೂಜೆ ನೆರವೇರಿಸಿದರು. ನಂತರ ಮಾತನಾಡಿದ ಅವರು, ಬೆಂಗಳೂರಿನಲ್ಲೇ ಅತ್ಯಂತ ಹಳೆಯ ಮತ್ತು ಐತಿಹಾಸಿಕ ಹಿನ್ನೆಲೆಯುಳ್ಳ ಹೆಬ್ಬಾಳ ಪ್ರದೇಶದಲ್ಲಿ ಹಲವಾರು ವರ್ಷಗಳಿಂದಲೂ ಈ ನಾಡಹಬ್ಬವನ್ನು ಸಾಂಪ್ರದಾಯಿಕ ಮತ್ತು ಮೈಸೂರು ದಸರಾ ಶೈಲಿಯಲ್ಲಿ ಆಚರಿಸಿಕೊಂಡು ಬರಲಾಗುತ್ತಿದೆ. ಹೆಬ್ಬಾಳ ಕೆರೆಯ ಸುತ್ತಮುತ್ತಲಿನ ಪರಿಸರ ಮತ್ತು ಸಾಂಸ್ಕೃತಿಕ ಬೇರುಗಳೊಂದಿಗೆ ಈ ನಾಡಹಬ್ಬವನ್ನು ಆಚರಿಸಲಾಗುತ್ತಿದೆ ಎಂದರು. ಹೆಬ್ಬಾಳ ದಸರಾ ಬೆಂಗಳೂರಿನಲ್ಲಿ ಅತ್ಯಂತ ಸಡಗರ ಹಾಗೂ ವಿಜೃಂಭಣೆಯಿಂದ ಆಚರಿಸಲಾಗುವ ಪ್ರಮುಖ ಸಾಂಸ್ಕೃತಿಕ ಹಬ್ಬಗಳಲ್ಲಿ ಒಂದಾಗಿದೆ. ಇದು ಮೈಸೂರು ದಸರಾದಷ್ಟೇ ಭವ್ಯವಾಗಿ ಆಚರಿಸಲ್ಪಡುವ ಕಾರಣ ಇದನ್ನು 'ಕರ್ನಾಟಕದ ಎರಡನೇ ಮೈಸೂರು ದಸರಾ' ಎಂದೂ ಬಣ್ಣಿಸಲಾಗುತ್ತಿದೆ ಎಂದು ಅವರು ತಿಳಿಸಿದರು. ಪ್ರತಿ ವರ್ಷದಂತೆ ಈ ಬಾರಿಯೂ ಅಕ್ಟೋಬರ್ 11 ರಿಂದ 21 ರವರೆಗೆ ಪ್ರತಿದಿನ ಸಂಜೆ ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ. ಅಕ್ಟೋಬರ್ 11 ರಂದು ಸಂಜೆ ದಸರಾಗೆ ಅದ್ದೂರಿ ಚಾಲನೆ ದೊರೆಯಲಿದ್ದು, 114 ನೇ ದಸರಾ ಆಚರಣೆ ಇದಾಗಿದೆ. ಹೆಬ್ಬಾಳ ಕ್ಷೇತ್ರದ ವಿವಿಧ ದೇವಸ್ಥಾನಗಳ ದೇವರ ಮೂರ್ತಿಗಳನ್ನೊಳಗೊಂಡ



ಭವ್ಯ ರಥಗಳ ಮೆರವಣಿಗೆ. ತಾಯಿ ಚಾಮುಂಡೇಶ್ವರಿ ಮತ್ತು ಮೈಸೂರಿನ ಕೃಷ್ಣರಾಜ ಒಡೆಯರ್ ಅವರ ಮೂರ್ತಿಗಳನ್ನು ಅದ್ದೂರಿ ಮೆರವಣಿಗೆ ಮೂಲಕ ಭವ್ಯ ವೇದಿಕೆಗೆ ಕರೆ ತರಲಾಗುತ್ತದೆ. ಬೆಂಗಳೂರಿನಲ್ಲಿ ನಡೆಯುವ ವೈಭವದ ಈ ದಸರಾವನ್ನು ಹೆಬ್ಬಾಳ, ಜೆ.ಸಿ. ನಗರ, ಶಿವಾಜಿನಗರ, ಯಶವಂತಪುರ ಸೇರಿದಂತೆ ಬೆಂಗಳೂರಿನ ವಿವಿಧ ಭಾಗಗಳಿಂದ ಲಕ್ಷಾಂತರ ಜನರು ಆಗಮಿಸುವ ನಿರೀಕ್ಷೆ ಇದೆ. ಇದಕ್ಕಾಗಿ ಎಲ್ಲಾ ಭದ್ರತಾ ಸಿದ್ಧತೆಗಳನ್ನು ಮಾಡಿಕೊಳ್ಳಲಾಗುತ್ತಿದೆ ಎಂದೂ ಸಚಿವರು ತಿಳಿಸಿದರು.

ನಟ ದರ್ಶನ್‌ಗೆ ಸುಪ್ರೀಂನಲ್ಲಿ ಮತ್ತೊಂದು ಭಾರಿ ಹಿನ್ನಡೆ

ಬೆಂಗಳೂರು: ರೇಣುಕಾಸ್ವಾಮಿ ಪ್ರಕರಣದಲ್ಲಿ ಜೈಲುಪಾಲಾಗಿರುವ ನಟ ದರ್ಶನ್‌ಗೆ ಸುಪ್ರೀಂ ಕೋರ್ಟ್‌ನಲ್ಲಿ ಮತ್ತೊಂದು ಭಾರಿ ಹಿನ್ನಡೆಯಾಗಿದೆ. ಪತಿಯನ್ನು ಕಾನೂನಿನ ಕಂಟಕದಿಂದ ರಕ್ಷಿಸಲು ದರ್ಶನ್ ಪತ್ನಿ ವಿಜಯಲಕ್ಷ್ಮಿ ಅವರು ಸುಪ್ರೀಂ ಕೋರ್ಟ್‌ನಲ್ಲಿ ಹೂಡಿದ್ದ ಕಾನೂನು ಹೋರಾಟ ವಿಫಲವಾಗಿದ್ದು, ಸುಪ್ರೀಂ ಕೋರ್ಟ್ ಅವರ ಅರ್ಜಿಯನ್ನು ಸಂಪೂರ್ಣವಾಗಿ ವಜಾಗೊಳಿಸಿದೆ. ಪ್ರಕರಣದಲ್ಲಿ ಆರೋಪಿಯೊಬ್ಬ ಮಾಫಿ ಸಾಕ್ಷಿ (Approver) ಆಗುವುದನ್ನು ಮತ್ತು ಆತನ ಹೇಳಿಕೆ ದಾಖಲಿಸಿಕೊಳ್ಳುವ ಪ್ರಕ್ರಿಯೆಯನ್ನು ಪ್ರಶ್ನಿಸಿ ವಿಜಯಲಕ್ಷ್ಮಿ ಅವರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು.

ಸೆಷನ್ಸ್ ನ್ಯಾಯಾಲಯಕ್ಕೆ ಈ ರೀತಿಯ ಹೇಳಿಕೆ ದಾಖಲಿಸಿಕೊಳ್ಳುವ ಅಧಿಕಾರವಿಲ್ಲ ಎಂದು ಅರ್ಜಿಯಲ್ಲಿ ವಾದಿಸಲಾಗಿತ್ತು. ನ್ಯಾಯಮೂರ್ತಿ ಜೆ.ಬಿ. ಪರ್ದಿವಾಲಾ ಅವರಿದ್ದ ಪೀಠದಲ್ಲಿ ಈ ಮಹತ್ವದ ಅರ್ಜಿಯ ವಿಚಾರಣೆ ನಡೆಯಿತು. ದರ್ಶನ್ ಪರ ಹಿರಿಯ ವಕೀಲ ನಾಗಮುತ್ತು ಅವರು ವಾದ ಮಂಡಿಸಿ, 'ಮಾಫಿ ಸಾಕ್ಷಿ ಹೇಳಿಕೆ ವಿಚಾರದಲ್ಲಿ ಕೇವಲ ಪ್ರಿನ್ಸಿಪಲ್ ಕೋರ್ಟ್‌ಗೆ ಮಾತ್ರ ಅಧಿಕಾರವಿದ್ದು, ವಿಚಾರಣಾ ನ್ಯಾಯಾಲಯಕ್ಕೆ (ಟ್ರಯಲ್ ಕೋರ್ಟ್) ಈ ಅಧಿಕಾರವಿಲ್ಲ' ಎಂದು ವಾದ ಮಂಡಿಸಿದರು. ಈ ವೇಳೆ ಮಧ್ಯಪ್ರವೇಶಿಸಿದ ನ್ಯಾಯಮೂರ್ತಿ ಪರ್ದಿವಾಲಾ ಪೀಠ, 'ಮಾಫಿ ಸಾಕ್ಷಿ ಹೇಳಿಕೆ ದಾಖಲಿಸಿಕೊಳ್ಳುವ ಸಂಪೂರ್ಣ ಅಧಿಕಾರ ಸೆಷನ್ಸ್/ಟ್ರಯಲ್ ಕೋರ್ಟ್‌ಗೆ ಇದೆ. ಟ್ರಯಲ್ ಕೋರ್ಟ್‌ಗೆ ಅಧಿಕಾರವಿಲ್ಲ ಎಂಬ ವಾದವನ್ನು ಒಪ್ಪಲಾಗದು. ಇದಕ್ಕಿಂತ ಬಲವಾದ ಮತ್ತೇನಾದರೂ ಅಂಶಗಳಿದ್ದರೆ ವಾದ ಮಂಡಿಸಿ' ಎಂದು ಕಟುವಾಗಿ ಹೇಳಿತು. ವಿಚಾರಣೆ ವೇಳೆ ಸರ್ಕಾರದ ಪರ ವಾದ ಮಂಡಿಸಿದ ಹಿರಿಯ ವಕೀಲ ಸಿದ್ಧಾರ್ಥ್ ಲೂಥ್ರಾ, 'ಮಾಫಿ ಸಾಕ್ಷಿ ಹೇಳಿಕೆ ದಾಖಲಿಸಿಕೊಳ್ಳುವುದನ್ನು ಪ್ರಶ್ನಿಸುವ ಹಕ್ಕು ಆರೋಪಿಗಳಿಗೆ ಇರುವುದಿಲ್ಲ. ಆದರೆ, ಆ ಸಾಕ್ಷಿಯನ್ನು ಪಾಟಿಸವಾಲಿಗೆ (Cross-examination) ಒಳಪಡಿಸುವ ಹಕ್ಕು ಆರೋಪಿಗಿದೆ. ಈಗಾಗಲೇ ಹೈಕೋರ್ಟ್ ಕ್ರಾಸ್ ಎಕ್ಸಾಮಿನೇಷನ್ ವೇಳೆ ಆರೋಪಿ ನ್ಯಾಯಾಲಯದಲ್ಲಿ ಹಾಜರಿರಲು ಅವಕಾಶ ಕಲ್ಪಿಸಿದೆ' ಎಂದು ಪೀಠದ ಗಮನಕ್ಕೆ ತಂದರು. ಸರ್ಕಾರದ ವಾದವನ್ನು ಪುರಸ್ಕರಿಸಿದ ಸುಪ್ರೀಂ ಕೋರ್ಟ್ ಪೀಠ, ಆರೋಪಿಗೆ ಕೇವಲ ಪಾಟಿಸವಾಲು ನಡೆಸುವ ಹಕ್ಕಿದೆಯೇ ಹೊರತು, ಮಾಫಿ ಸಾಕ್ಷಿಯ ಪ್ರಕ್ರಿಯೆಯನ್ನೇ ವಿರೋಧಿಸಲು ಅಥವಾ ಪ್ರಶ್ನಿಸಲು ಹಕ್ಕಿಲ್ಲ ಎಂದು ಸ್ಪಷ್ಟಪಡಿಸಿ ವಿಜಯಲಕ್ಷ್ಮಿ ಅವರ ಅರ್ಜಿಯನ್ನು ವಜಾಗೊಳಿಸಿ ಆದೇಶಿಸಿತು. ಸುಪ್ರೀಂ ಕೋರ್ಟ್‌ನ ಈ ಆದೇಶದಿಂದಾಗಿ ದರ್ಶನ್ ಪರ ವಕೀಲರಿಗೆ ದೊಡ್ಡ ಮುಖಭಂಗವಾದಂತಾಗಿದ್ದು, ಪ್ರಕರಣದಲ್ಲಿ ಮಾಫಿ ಸಾಕ್ಷಿಯ ಹೇಳಿಕೆ ದಾಖಲಾತಿಗೆ ಇದ್ದ ಕಾನೂನು ಅಡ್ಡಿ ಸಂಪೂರ್ಣ ನಿವಾರಣೆಯಾಗಿದೆ.

ಕಣ್ಣಿಗೆ ಕಾಣದ ಲೋಕಕ್ಕೆ ಭರವಸೆಯ ಬೆಳಕು: ಬಿಡಿಎ ಅಧ್ಯಕ್ಷ ಪೀಠದಲ್ಲಿ ಅಂಧ ಬಾಲಕ!


ಬೆಂಗಳೂರು: ಸರ್ಕಾರಿ ಕಚೇರಿಗಳೆಂದರೆ ಕೇವಲ ಕಡತಗಳ ವಿಲೇವಾರಿ, ಗಂಭೀರ ಮುಖಭಾವದ ಅಧಿಕಾರಿಗಳು ಮತ್ತು ಸಾರ್ವಜನಿಕರ ದೂರು–ದುಮ್ಮಾನಗಳ ತಾಣ ಎಂಬ ಭಾವನೆಯೇ ಹೆಚ್ಚು. ಆದರೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕಚೇರಿಯಲ್ಲಿಂದು ಅತ್ಯಂತ ಅಪರೂಪದ ಹಾಗೂ ಭಾವನಾತ್ಮಕ ಕ್ಷಣಕ್ಕೆ ಸಾಕ್ಷಿಯಾಯಿತು. ಸಮಾಜದ ಮುಖ್ಯವಾಹಿನಿಯಿಂದ ದೂರ ಉಳಿಯಬಾರದು ಎಂಬ ಮಹತ್ವಾಕಾಂಕ್ಷೆಯೊಂದಿಗೆ, 'ಜ್ಯೋತಿ ಸೇವಾ ಸ್ಕೂಲ್ ಫಾರ್ ಬ್ಲೈಂಡ್' ಶಾಲೆಯ 65 ದೃಷ್ಟಿಹೀನ ಮುಗ್ಧ ಮಕ್ಕಳನ್ನು ಬಿಡಿಎ ಕಚೇರಿಗೆ ಅತಿಥಿಗಳಾಗಿ ಆಹ್ವಾನಿಸಲಾಗಿತ್ತು. ಇಂದು ನಡೆದ ಘಟನೆ ಪ್ರತಿಯೊಬ್ಬರ ಕಣ್ಣಂಚನ್ನು ತೇವಗೊಳಿಸಿತು. ಬಿಡಿಎ ಅಧ್ಯಕ್ಷರಾದ ಶ್ರೀ ಎನ್.ಎ. ಹ್ಯಾರಿಸ್ ಅವರು, ತಮ್ಮ ಅಧಿಕೃತ ಕುರ್ಚಿಯ ಮೇಲೆ ರಾಹುಲ್ ಎಂಬ ದೃಷ್ಟಿಹೀನ ಬಾಲಕನನ್ನು ಕೂರಿಸಿ, ಸಾಂಕೇತಿಕವಾಗಿ "ಒಂದು ದಿನದ ಬಿಡಿಎ ಅಧ್ಯಕ್ಷ"ನನ್ನಾಗಿ ಮಾಡಿದರು. ಆ ಆಸನದಲ್ಲಿ ಕುಳಿತ ರಾಹುಲ್ ಮುಖದಲ್ಲಿ ಅರಳಿದ ಮುಗ್ಧ ನಗೆ ಇಡೀ ಸಭಾಂಗಣಕ್ಕೆ



ಹೊಸ ಚೈತನ್ಯ ತುಂಬಿತು. ಮಕ್ಕಳನ್ನು ಉದ್ದೇಶಿಸಿ ಮಾತನಾಡಿದ ಅಧ್ಯಕ್ಷರಾದ ಶ್ರೀ ಎನ್.ಎ. ಹ್ಯಾರಿಸ್, "ಯಾರೂ ಧೃತಿಗೆಡಬೇಡಿ. ನೀವೂ ಸಮಾಜದ ಪ್ರತಿಯೊಬ್ಬರಂತೆ ಸಮಾನರು. ನಿಮ್ಮೊಂದಿಗೆ ನಾವಿದ್ದೇವೆ, ಸರ್ಕಾರವಿದೆ. ದೃಢಸಂಕಲ್ಪದಿಂದ ಓದಿ ಉನ್ನತ ಸ್ಥಾನಗಳನ್ನು ಅಲಂಕರಿಸಿ" ಎಂದು ಪ್ರೇರಣಾದಾಯಕ ಮಾತುಗಳನ್ನಾಡಿದರು. ಇದೇ ಸಂದರ್ಭದಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರಾದ ಮೇಜರ್ ಮಣಿವಣ್ಣನ್. ಪಿ. ಅವರು ಮಾತನಾಡಿ, "ಮಕ್ಕಳಲ್ಲಿ ಆತ್ಮಸ್ಥೈರ್ಯ ಮತ್ತು ಕನಸುಗಳನ್ನು ಚಿಗುರಿಸುವುದೇ ಈ ಭೇಟಿಯ ಮೂಲ ಉದ್ದೇಶ. ಕೇವಲ ಭೇಟಿಗೆ ಸೀಮಿತವಾಗದೆ, ಮುಂದಿನ ದಿನಗಳಲ್ಲಿ ಇವರ ಶಿಕ್ಷಣ ಹಾಗೂ ಉಜ್ವಲ ಭವಿಷ್ಯಕ್ಕೆ ಬಿಡಿಎ ಸಂಪೂರ್ಣ ಬೆಂಬಲ ನೀಡಲಿದೆ" ಎಂದು ಭರವಸೆ ನೀಡಿದರು. "ನಾವು ಎಂದೂ ಸರ್ಕಾರಿ ಕಚೇರಿಗಳನ್ನು ನೋಡಿರಲಿಲ್ಲ, ಆಡಳಿತ ಹೇಗೆ ನಡೆಯುತ್ತದೆ ಎಂಬುದರ ಕಲ್ಪನೆಯೂ ಇರಲಿಲ್ಲ. ಆದರೆ ಇಂದು ನಮಗೂ ದೊಡ್ಡ ಅಧಿಕಾರಿಗಳಾಗುವ, ಸಮಾಜಕ್ಕೆ ಸೇವೆ ಸಲ್ಲಿಸುವ ಆತ್ಮವಿಶ್ವಾಸ ಬಂದಿದೆ" ಎಂದು ಮಕ್ಕಳು ಸಂಭ್ರಮದಿಂದ ಹಂಚಿಕೊಂಡ ಮಾತುಗಳು ನೆರೆದಿದ್ದ ಎಲ್ಲ ಅಧಿಕಾರಿಗಳ ಹೃದಯ ತಟ್ಟಿದವು. ಅಧಿಕಾರಿಗಳು ಮಕ್ಕಳೊಂದಿಗೆ ಮುಕ್ತವಾಗಿ ಬೆರೆತು ಪ್ರೀತಿ, ವಾತ್ಸಲ್ಯದಿಂದ ಪ್ರೋತ್ಸಾಹಿಸಿದರು. ಗಂಭೀರತೆಯಿಂದ ಕೂಡಿರುತ್ತಿದ್ದ ಬಿಡಿಎ ಕಚೇರಿಯಲ್ಲಿ ಅಂದು ಅನುಕಂಪಕ್ಕಿಂತ ಮಿಗಿಲಾಗಿ ಸಮಾನತೆ, ಭರವಸೆ ಮತ್ತು ಪ್ರೀತಿಯ ವಾತಾವರಣ ತುಂಬಿ ತುಳುಕುತ್ತಿತ್ತು. ದೃಷ್ಟಿ ಇಲ್ಲದಿದ್ದರೂ ಬದುಕಿನ ಉನ್ನತ ಗುರಿಗಳನ್ನು ಕಾಣಬಲ್ಲೆವು ಎಂಬ ಆತ್ಮವಿಶ್ವಾಸ ಆ ಮಕ್ಕಳ ಮೊಗದಲ್ಲಿ ಎದ್ದು ಕಾಣುತ್ತಿತ್ತು.

ಶ್ರೀಮಹೇಶ್ವರಿ ದೇವಸ್ಥಾನದಲ್ಲಿ 115ನೇ ದಸರಾ ಮಹೋತ್ಸವ

ಬೆಂಗಳೂರು: ಮಲ್ಲೇಶ್ವರದ ಸಂಪಿಗೆ ರಸ್ತೆಯ 8ನೇ ತಿರುವಿನಲ್ಲಿರುವ ಶ್ರೀ ಮಹೇಶ್ವರಿ ಅಮ್ಮನವರ ದೇವಸ್ಥಾನದಲ್ಲಿ 115ನೇ ದಸರಾ ಮಹೋತ್ಸವದ ಅಂಗವಾಗಿ ಮಹಾಗಣಪತಿಗೆ ಹಾಗೂ ಅಮ್ಮನವರಿಗೆ ಅಕ್ಟೋಬರ್ 11 ರಿಂದ 20ರ ವರೆಗೆ ಒಂದೊಂದು ದಿನ ಒಂದೊಂದು ಅಲಂಕಾರ ಮಾಡಲಿದ್ದಾರೆ. ಸಾಂಸ್ಕೃತಿಕ ಕಾರ್ಯಕ್ರಮ ಪ್ರತಿದಿನ ಸಂಜೆ 6–30ಕ್ಕೆ : ಅಕ್ಟೋಬರ್ 11 : ಡಾ॥ ದರ್ಶಿನಿ ಮಂಜುನಾಥ್ ನಿರ್ದೇಶನದಲ್ಲಿ ನೃತ್ಯ ದಿಶಾ ಟ್ರಸ್ಟಿನ ವಿದ್ಯಾರ್ಥಿಗಳಿಂದ "ಭರತನಾಟ್ಯ ಪ್ರದರ್ಶನ", ಅಕ್ಟೋಬರ್ 12 : ಡಾ॥ ಮಾಲಿನಿ ರವಿಶಂಕರ್ ನಿರ್ದೇಶನದಲ್ಲಿ ಲಾಸ್ಯ ವರ್ಧನ ಟ್ರಸ್ಟಿನ ವಿದ್ಯಾರ್ಥಿಗಳಿಂದ "ಭರತನಾಟ್ಯ ಪ್ರದರ್ಶನ", ಅಕ್ಟೋಬರ್ 13 : ವಿದ್ವಾನ್ ಶ್ರೀಧರ್ ಸಾಗರ್ ಮತ್ತು ಸಂಗಡಿಗರಿಂದ "ಸ್ಯಾಕ್ಸೋಫೋನ್ ವಾದನ", ಅಕ್ಟೋಬರ್ 14 : ಕು॥ ಚಿರಂತನ ಮತ್ತು ತಂಡದವರಿಂದ "ನೃತ್ಯ ಪ್ರದರ್ಶನ", ಅಕ್ಟೋಬರ್ 15 : ಪುಷ್ಪಲತಾ ಕಲಾ ಶಾಲೆಯ ವಿದ್ಯಾರ್ಥಿಗಳಿಂದ "ನೃತ್ಯ ಪ್ರದರ್ಶನ", ಅಕ್ಟೋಬರ್ 16 : ನಾಟ್ಯ ಗುರುಕುಲ ಶಾಲೆಯ ಪದ್ಮಿನಿ, ಕಾವ್ಯ ಮತ್ತು ಪ್ರಜ್ವಲ ಇವರುಗಳಿಂದ "ನೃತ್ಯ ಪ್ರದರ್ಶನ", ಅಕ್ಟೋಬರ್ 17 : ವಿದುಷಿ ಗಾಯಿತ್ರಿ ಮಯ್ಯ ನಿರ್ದೇಶನದಲ್ಲಿ ತಮೋಹ ಆರ್ಟ್ಸ್ ಫೌಂಡೇಶನ್ ವಿದ್ಯಾರ್ಥಿಗಳಿಂದ "ಭರತನಾಟ್ಯ ಪ್ರದರ್ಶನ", ಅಕ್ಟೋಬರ್ 18 : ಶೃಂಗಾರ ಲಹರಿ ಶ್ರೀಮತಿ ಶ್ರೀವಾಣಿ ಸುಂದರೇಶ್ ಶಿಷ್ಯ



ವೃಂದದವರಿಂದ "ಸಂಗೀತ ಮತ್ತು ನೃತ್ಯ", ಅಕ್ಟೋಬರ್ 20 : ಕು॥ ನಿರೀಕ್ಷಾ ಎಂ. ರಾವ್ ಮತ್ತು ಸಂಗಡಿಗರಿಂದ "ಜನಪದ ಮತ್ತು ಭಕ್ತಿ ಗೀತೆಗಳ ಗಾಯನ" ನಂತರ ನಟರಾಜ ಕಲಾ ನಿಕೇತನ ಇವರಿಂದ "ನೃತ್ಯ ಪ್ರದರ್ಶನ" ಕಾರ್ಯಕ್ರಮಗಳು ಜರುಗಲಿವೆ ಎಂದು ದೇವಸ್ಥಾನದ ಪದಾಧಿಕಾರಿಗಳು ತಿಳಿಸಿದ್ದಾರೆ.

ರಸ್ತೆಯಲ್ಲಿ ಕೂಗಿದರೆ ಚುನಾವಣಾ ಆಯೋಗದ ಅಧ್ಯಕ್ಷರ ತೆಗೆದುಹಾಕಲು ಆಗುವುದಿಲ್ಲ, ಸರಿಯಾದ ಪ್ರಕ್ರಿಯೆ ಅನುಸರಿಸಿ: ಪ್ರತಿಪಕ್ಷ ನಾಯಕ ಅಶೋಕ

ಚಿತ್ರದುರ್ಗ: ಚುನಾವಣಾ ಆಯೋಗದ ಅಧ್ಯಕ್ಷರನ್ನು ಸುಲಭವಾಗಿ ತೆಗೆದುಹಾಕಲು ಸಾಧ್ಯವಿಲ್ಲ. ಸಂಸತ್ತಿನಲ್ಲಿ ಸುದೀರ್ಘವಾಗಿ ಚರ್ಚೆಯಾಗಿ ಬಹುಮತ ಸಾಬೀತಾಗಿ ರಾಷ್ಟ್ರಪತಿಯ ಬಳಿಗೆ ಹೋಗಬೇಕಾಗುತ್ತದೆ. ಭ್ರಷ್ಟಾಚಾರ ಜಾಸ್ತಿಯಾಗಿದೆ ಎಂದು ನಾನು ರಸ್ತೆಯಲ್ಲಿ ಕೂಗಿದ ಮಾತ್ರಕ್ಕೆ ಸಿಎಂ ಡಿ.ಕೆ.ಶಿವಕುಮಾರ್ ಅವರನ್ನು ತೆಗೆದುಹಾಕಲು ಆಗುವುದಿಲ್ಲ. ಎಲ್ಲಕ್ಕೂ ಸರಿಯಾದ ಪ್ರಕ್ರಿಯೆಗಳನ್ನು ಅನುಸರಿಸಬೇಕು ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ ಹೇಳಿದರು. ಪ್ರಧಾನಿ ನರೇಂದ್ರ ಮೋದಿಯವರ 25 ವರ್ಷಗಳ ಸಾರ್ವಜನಿಕ ಬದುಕಿನ ಪ್ರಯುಕ್ತ ಬಿಜೆಪಿಯಿಂದ ನಡೆದ ಸೇವಾ ಜ್ಯೋತಿ ಯಾತ್ರೆ ಕಾರ್ಯಕ್ರಮದಲ್ಲಿ ಅವರು ಭಾಗವಹಿಸಿದರು. ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಂವಿಧಾನದಲ್ಲಿ ಪ್ರತಿಭಟನೆಯ ಹಕ್ಕು ಇದೆ. ಆದರೆ ಸ್ವತಂತ್ರ ಸಂಸ್ಥೆಯಾದ ಚುನಾವಣಾ ಆಯೋಗದ ಅಧ್ಯಕ್ಷರನ್ನು ವಜಾ ಮಾಡಬೇಕೆಂದರೆ ಅದಕ್ಕೆ ಸೂಕ್ತವಾದ ಪ್ರಕ್ರಿಯೆ ಇದೆ. ಹಿಂದಿನ ಪ್ರಧಾನಿಗಳಾದ ಇಂದಿರಾಗಾಂಧಿ, ರಾಜೀವ್ ಗಾಂಧಿ ಕೂಡ ಈ ಎಲ್ಲ ಪ್ರಕ್ರಿಯೆಗಳನ್ನು ರೂಪಿಸಿದ್ದರು. ಈ ಪ್ರಕ್ರಿಯೆಯನ್ನು ಅನುಸರಿಸದ ರಾಹುಲ್ ಗಾಂಧಿ ಬೀದಿಯಲ್ಲಿ ನಿಂತು ಪ್ರತಿಭಟನೆ ಮಾಡಿ ಸಾಂವಿಧಾನಿಕ ಸಂಸ್ಥೆಗೆ ಅಪಮಾನ ಮಾಡಿದ್ದಾರೆ ಎಂದರು. ರಾಜ್ಯದಲ್ಲಿ ಕಾಂಗ್ರೆಸ್ ಗೆದ್ದಿದೆ. ಇಲ್ಲಿ ಚುನಾವಣೆ ಸರಿಯಾಗಿ ನಡೆದಿಲ್ಲ ಎಂದಾದರೆ ಕಾಂಗ್ರೆಸ್ ನಾಯಕರು ರಾಜೀನಾಮೆ ನೀಡಬೇಕು. ಕೇರಳದಲ್ಲೂ ಬಿಜೆಪಿ ಗೆದ್ದಿಲ್ಲ. ಕಾಂಗ್ರೆಸ್ ಸೋಲುವ ಕಡೆ ಮಾತ್ರ ಚುನಾವಣಾ ಆಯೋಗ ಸರಿಯಿಲ್ಲ ಎನ್ನುವುದು ರಾಹುಲ್ ಗಾಂಧಿಯವರ ಅಭಿಪ್ರಾಯ. ಅವರು ವಿರೋಧ ಪಕ್ಷದ ನಾಯಕರಾಗಲೂ ಕೂಡ ಅನರ್ಹರು. ಇಡಿ, ಸಿಬಿಐ ಎಲ್ಲವನ್ನೂ ಬಿಜೆಪಿ ಸಂಸ್ಥೆಗಳು ಎಂದು ಆರೋಪ ಮಾಡುತ್ತಿದ್ದಾರೆ. ಕೆಪಿಎಸ್‌ಸಿ ಅಕ್ರಮದ ತನಿಖೆಗೆ ಎಸ್‌ಐಟಿ ಮಾಡಿದ ಹೈಕೋರ್ಟ್ ಮೇಲೆ ಕೂಡ ಇವರು ಆರೋಪ ಮಾಡುತ್ತಾರೆ. ಸುಪ್ರೀಂ ಕೋರ್ಟ್‌ಗೂ ಇವರು ಬೆಲೆ ನೀಡುವುದಿಲ್ಲ. ಇವರ ಮನೆಯ ಮೇಲೆ ದಾಳಿ ಮಾಡಿ ಕೋಟಿಗಟ್ಟಲೆ ಲೂಟಿ ಮಾಡಿದ್ದು ಜನರಿಗೆ ಗೊತ್ತಾದ ಕೂಡಲೇ ಇಡಿ ಮೇಲೆ ಆರೋಪ ಮಾಡಲು ಆರಂಭಿಸುತ್ತಾರೆ. ಕಾಂಗ್ರೆಸ್ ಹೀಗೆಯೇ ಇದ್ದರೆ ಕರ್ನಾಟಕದಲ್ಲೂ ಬಹುಮತ ಕಳೆದುಕೊಳ್ಳುತ್ತದೆ ಎಂದರು.

ಪಿತ್ತ ನೆತ್ತಿಗೇರಿದೆ

ಸಿಎಂ ಡಿ.ಕೆ.ಶಿವಕುಮಾರ್ ವೀರಶೈವ ಲಿಂಗಾಯತ ಸ್ವಾಮೀಜಿಗಳ ಮುಂದೆ ನಿಂತು ನನ್ನ ಸೇವೆ ಮಾಡಿ ಎಂದಿದ್ದಾರೆ. ಅವರಿಗೆ ಪಿತ್ತ ನೆತ್ತಿಗೇರಿದೆ. ನಾವ್ಯಾರೂ ಇದನ್ನು ವರದಿ ಮಾಡಿಲ್ಲ. ಮಾಧ್ಯಮಗಳಲ್ಲೇ ಇದು ವರದಿಯಾಗಿ ಬಂದಿದೆ. ಇದ್ದಿದ್ದು ಇದ್ದ ಹಾಗೆಯೇ ವೀಡಿಯೋ ಬಂದಿದೆ. ಈ ವೀಡಿಯೋ ತಿರುಚಲು ಹೇಗೆ ಸಾಧ್ಯ? ಈಗಿನ ಕಾಲದಲ್ಲಿ ಯಾವುದನ್ನೂ ತಿರುಚಲು ಸಾಧ್ಯವಿಲ್ಲ. ಸಿಎಂಗೆ ಮಾನವಿದ್ದರೆ ಎಲ್ಲ ಸ್ವಾಮೀಜಿಗಳ ಮುಂದೆ ಕ್ಷಮೆ ಯಾಚಿಸಲಿ. ಅದನ್ನು ಬಿಟ್ಟು ಮಾಧ್ಯಮದವರ ಮೇಲೆ ಆರೋಪ ಮಾಡುವುದು ಬೇಡ. ಮಾಧ್ಯಮಗಳು ಎಲ್ಲ ವೀಡಿಯೋಗಳನ್ನು ಪ್ರಸಾರ ಮಾಡಬೇಕು. ಇವರು ಎಷ್ಟು ಅವಹೇಳನಕಾರಿಯಾಗಿ ಮಾತಾಡಿದ್ದಾರೆ, ಹಿಂದೂ ಧರ್ಮದ ಬಗ್ಗೆ ಹೇಗೆ ಮಾತಾಡುತ್ತಾರೆ ಎಂದು ಗೊತ್ತಾಗಲಿ. ಮುಸ್ಲಿಂ ಮೌಲ್ವಿಗಳ ಸಭೆಗೆ ಹೋಗಿ ನೀವು ನನ್ನ ಸೇವೆ ಮಾಡಿ ಎಂದು ಹೇಳಲು ಮುಖ್ಯಮಂತ್ರಿಗೆ ಆಗುತ್ತದೆಯೇ? ಹಿಂದೂ ಎಂದು ನಾಟಕವಾಡುವುದು ಬೇಡ ಎಂದರು. ಪ್ರಧಾನಿ ನರೇಂದ್ರ ಮೋದಿಯವರ 25 ವರ್ಷಗಳ ಸಾರ್ವಜನಿಕ ಬದುಕಿನ ಪ್ರಯುಕ್ತ ಸೇವಾ ಜ್ಯೋತಿ ಯಾತ್ರೆ ನಡೆದಿದೆ. ಸಮಾಜದ ವಿವಿಧ ಸಮುದಾಯಗಳಿಗೆ ಸೇವಾ ಸಂಕಲ್ಪ ಅಭಿಯಾನದ ಮೂಲಕ ಸೇವೆ ಸಲ್ಲಿಸಲಾಗುತ್ತಿದೆ. ಭಾರತದ ವಿಶ್ವಗುರುವಾಗಲು ಪ್ರಧಾನಿ ನರೇಂದ್ರ ಮೋದಿ ಕಾರಣರಾಗಿದ್ದಾರೆ ಎಂದರು.

ಎಸ್.ಬಿಂಗೀಪುರದಲ್ಲಿ ಪಾಲಿಕೆಯ ಪ್ರಾಣಿ ಚಿತಾಗಾರ ಸ್ಥಾಪನೆಗೆ ಯೋಜನೆ

ಬೆಂಗಳೂರು: ದಕ್ಷಿಣ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಸತ್ತ ಪ್ರಾಣಿಗಳ ಕಳೇಬರಗಳನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡುವ ನಿಟ್ಟಿನಲ್ಲಿ ಸುಸಜ್ಜಿತ ಪ್ರಾಣಿ ಚಿತಾಗಾರವನ್ನು ಶೀಘ್ರವೇ ಸ್ಥಾಪಿಸಲು ತುರ್ತಾಗಿ ಯೋಜನೆ ರೂಪಿಸಲಾಗುತ್ತಿದೆ ಎಂದು ಪಾಲಿಕೆ ಆಯುಕ್ತರಾದ ಶ್ರೀ ಕೆ.ಎನ್. ರಮೇಶ್ ರವರು ತಿಳಿಸಿದರು. ಪಾಲಿಕೆಗೊಂದು ಪ್ರಾಣಿ ಚಿತಾಗಾರ ನಿರ್ಮಾಣಕ್ಕೆ ಸಚಿವರ ನಿರ್ದೇಶನ ಗ್ರೇಟರ್ ಬೆಂಗಳೂರು ಪ್ರಾಧಿಕಾರ ವ್ಯಾಪ್ತಿಯ 05 ನಗರ ಪಾಲಿಕೆಗಳಲ್ಲಿ, ಪಾಲಿಕೆಗೊಂದರಂತೆ ಸತ್ತ ಪ್ರಾಣಿಗಳ ಕಳೇಬರವನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡಲು ಪ್ರಾಣಿಗಳ ಚಿತಾಗಾರಗಳನ್ನು ಸ್ಥಾಪಿಸುವಂತೆ ಗ್ರೇಟರ್ ಬೆಂಗಳೂರು ಸಚಿವರಾದ ಶ್ರೀ ಕೃಷ್ಣ ಬೈರೇಗೌಡ ರವರು ನೀಡಿದ್ದ ಸೂಚನೆ ಮೇರೆಗೆ, ಪಾಲಿಕೆ ವ್ಯಾಪ್ತಿಯಲ್ಲಿ ನೂತನ ಚಿತಾಗಾರ ಸ್ಥಾಪನೆಗೆ ಅಗತ್ಯ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ.



ತಜ್ಞರು ಹಾಗೂ ಅನುಭವಿ ಸಂಸ್ಥೆಗಳೊಂದಿಗೆ ಮಹತ್ವದ ಸಮಾಲೋಚನೆ ಯೋಜನೆಯ ಅನುಷ್ಠಾನದ ಕುರಿತು ಪಾಲಿಕೆ ಆಯುಕ್ತರ ಅಧ್ಯಕ್ಷತೆಯಲ್ಲಿ ಇಂದು ಸಭೆ ನಡೆದಿದ್ದು, ಈಗಾಗಲೇ ಪ್ರಾಣಿ ಚಿತಾಗಾರಗಳನ್ನು ಸ್ಥಾಪಿಸಿ ನಿರ್ವಹಿಸುತ್ತಿರುವ ಅನುಭವವುಳ್ಳ ಸಂಸ್ಥೆಗಳು ಹಾಗೂ ತಜ್ಞರೊಂದಿಗೆ ಚರ್ಚೆ ನಡೆಸಲಾಯಿತು. ಚಿತಾಗಾರಕ್ಕೆ ಬೇಕಾಗುವ ಜಾಗದ ವಿಸ್ತೀರ್ಣ, ನಕ್ಷೆ, ವಿದ್ಯುತ್, ಎಲ್‌ಪಿಜಿ, ಸಿಎನ್‌ಜಿ ಅಥವಾ ಹೈಬ್ರಿಡ್ ಇಂಧನ ವ್ಯವಸ್ಥೆ, ನಿರ್ಮಾಣದ ಅಂದಾಜು ವೆಚ್ಚ ಹಾಗೂ ಕಾಲಮಿತಿ, ಪ್ರತಿ ಕಳೇಬರದ ದಹನಕ್ಕೆ ತಗಲುವ ವೆಚ್ಚ, ದಿನವೊಂದಕ್ಕೆ ದಹನ ಮಾಡಬಹುದಾದ ಪ್ರಾಣಿಗಳ ಸಂಖ್ಯೆ ಮತ್ತು ಸಂಬಂಧಿತ ಇಲಾಖೆಗಳಿಂದ ಪಡೆಯಬೇಕಾದ ಶಾಸನಬದ್ಧ ಅನುಮೋದನೆಗಳ ಕುರಿತು ವಿಸ್ತೃತವಾಗಿ ಆಯುಕ್ತರು ಪರಿಶೀಲನೆ ನಡೆಸಿದರು. ಎಸ್. ಬಿಂಗೀಪುರ ಬಳಿ ಸ್ಥಳ ಗುರುತು ಜಿಗಣಿ ಹೋಬಳಿಯ ಎಸ್. ಬಿಂಗಿಪುರದಲ್ಲಿನ ಬೇಗೂರು–ಕೊಪ್ಪ ಮುಖ್ಯರಸ್ತೆಯಲ್ಲಿ ಪಾಲಿಕೆಗೆ ಸೇರಿದ ಜಾಗದಲ್ಲಿ ನೂತನ ಪ್ರಾಣಿ ಚಿತಾಗಾರವನ್ನು ಸ್ಥಾಪಿಸಲು ಉದ್ದೇಶಿಸಲಾಗಿದ್ದು, ಈ ಯೋಜನೆಗೆ ಸಂಬಂಧಿಸಿದಂತೆ 2026–27ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಅಗತ್ಯ ವೆಚ್ಚದ ಹಣವನ್ನು ಕಾಯ್ದಿರಿಸಲಾಗಿದೆ. ತ್ವರಿತವಾಗಿ ಟೆಂಡರ್ ಪ್ರಕ್ರಿಯೆಗೆ ಆಯುಕ್ತರ ಸೂಚನೆ ಸಾರ್ವಜನಿಕರಿಂದ ಹಾಗೂ ಪ್ರಾಣಿ ಪ್ರಿಯರಿಂದ ಈ ಭಾಗದಲ್ಲಿ ಪ್ರಾಣಿ ಚಿತಾಗಾರ ಸ್ಥಾಪನೆಗೆ ಹೆಚ್ಚಿನ ಬೇಡಿಕೆ ವ್ಯಕ್ತವಾಗಿರುವುದರಿಂದ, ಯಾವುದೇ ವಿಳಂಬವಿಲ್ಲದೆ ತ್ವರಿತಗತಿಯಲ್ಲಿ ಟೆಂಡರ್ ಕರೆದು ಕಾಮಗಾರಿ ಆರಂಭಿಸುವಂತೆ ಅಧಿಕಾರಿಗಳಿಗೆ ಆಯುಕ್ತರು ಸೂಚನೆ ನೀಡಿದರು. ಈ ವೇಳೆ ಪಾಲಿಕೆಯ ಮುಖ್ಯ ಪಶುವೈದ್ಯಾಧಿಕಾರಿ ಡಾ. ಡಿ. ಎನ್. ಶ್ರೀನಾಥ್, ೦ಇಇ ಶ್ರೀ ರವಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಅಂತ್ಯೋದಯ ಸಿದ್ಧಾಂತದೊಂದಿಗೆ ಸಮರ್ಥ ನಾಯಕತ್ವ ನೀಡಿದ ಮೋದಿ: ಯಡಿಯೂರಪ್ಪ



ಬೆಂಗಳೂರು: ಅಂತ್ಯೋದಯದ ಸಿದ್ಧಾಂತದೊಂದಿಗೆ ಹೆಮ್ಮೆಯ ವಿಶ್ವನಾಯಕ ನರೇಂದ್ರ ಮೋದಿಜಿಯವರ ಸಮರ್ಥ ನಾಯಕತ್ವ ನಮಗೆ ಆದರ್ಶ ಎಂದು ಬಿಜೆಪಿ ಕೇಂದ್ರ ಸಂಸದೀಯ ಮಂಡಳಿ ಸದಸ್ಯ ಮತ್ತು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಅಭಿಪ್ರಾಯಪಟ್ಟರು. ಸೇವಾ ಸಂಕಲ್ಪ ಅಭಿಯಾನದ ಪ್ರಯುಕ್ತ ನಡೆಯುತ್ತಿರುವ ಸೇವಾ ಜ್ಯೋತಿ ಯಾತ್ರೆಯ ಸಮಾರೋಪ ಸಮಾರಂಭವು ಇಂದು ಡಾ. ಎಂ.ಸಿ. ಮೋದಿ ಆಸ್ಪತ್ರೆಯ ರಸ್ತೆಯಲ್ಲಿರುವ ಶಂಕರಮಠ ಆಟದ ಮೈದಾನದಲ್ಲಿ ನಡೆಯಿತು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ಮೋದಿಜೀ ಅವರ ಸಾಧನೆ– ಸೇವಾ ಕಾರ್ಯಗಳು ನಮ್ಮ ದಾರಿಯನ್ನು ಬೆಳಕು ಹುಟ್ಟುವ ಜ್ಯೋತಿ. ಈ ನಿಟ್ಟಿನಲ್ಲಿ ಪ್ರತಿಯೊಬ್ಬರ ಸೇವಾ ಜ್ಯೋತಿ ಯಾತ್ರೆ ಸಾರ್ಥಕವಾಗಲಿ ಎಂದು ಹಾರೈಸಿದರು. ಮೋದಿಜೀ ಅವರ ಸೇವಾ ಕಾರ್ಯವು ಇಂದು 25 ವರ್ಷಗಳ ನಿರಂತರ ಜನಸೇವೆಯ ಮಹತ್ವದ ಮೈಲಿಗಲ್ಲನ್ನು ತಲುಪಿದೆ. ಕಾಲು ಶತಮಾನಗಳ ಕಾಲ ಅಭೂತಪೂರ್ವ ಜನಾದೇಶ ಪಡೆದು, ಸರ್ಕಾರದ ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸಿದ್ದಾರೆ. ಮೊದಲು ಸುಮಾರು 13 ವರ್ಷಗಳ ಕಾಲ ಗುಜರಾತ್ ಮುಖ್ಯಮಂತ್ರಿಗಳಾಗಿ, ನಂತರ ಕಳೆದ 12 ವರ್ಷಗಳಿಂದ ಭಾರತದ ಪ್ರಧಾನಮಂತ್ರಿಗಳಾಗಿ ಮೋದಿಜಿಯವರು ಸೇವೆ ಸಲ್ಲಿಸುತ್ತಿರುವ ಸತತ ದೇಶಸೇವೆಗೆ ಅದ್ವಿತೀಯವಾದುದು ಎಂದು ನುಡಿದರು. ನರೇಂದ್ರ ಮೋದಿಜಿಯವರು ಸಾರ್ವಜನಿಕ ಜೀವನದಲ್ಲಿ 25 ವರ್ಷಗಳ ಸಾರ್ಥಕ ಸೇವೆಯನ್ನು ಪೂರ್ಣಗೊಳಿಸುತ್ತಿರುವ ಸಂದರ್ಭವಿದು. ಈ ಕಾಲಘಟ್ಟದಲ್ಲಿ, ಸೇವಾ ಸಂಕಲ್ಪ ಅಭಿಯಾನದ ಮೂಲಕ ಅವರ ರಾಷ್ಟ್ರ ಸೇವೆಯನ್ನು ನಾವೆಲ್ಲರೂ ಸ್ಮರಿಸುತ್ತಿದ್ದೇವೆ ಮತ್ತು ಸಂಭ್ರಮಿಸುತ್ತಿದ್ದೇವೆ. ನಮ್ಮ ಪ್ರಧಾನಿಯವರು ಒಂದೇ ಒಂದು ದಿನ ರಜೆ ಪಡೆಯದೆ, ತಮ್ಮ ಸಂಪೂರ್ಣ ಜೀವನವನ್ನೇ ದೇಶಕ್ಕಾಗಿ ಮುಡುಪಾಗಿಟ್ಟ ಶ್ರೇಷ್ಠ ನಾಯಕ. ಅಂಥ ನಾಯಕ ಈ ದೇಶಕ್ಕೆ ಸಿಕ್ಕಿರುವುದು ಪ್ರತಿಯೊಬ್ಬ ಭಾರತೀಯರಿಗೂ ಹೆಮ್ಮೆ ತರುವ ಸಂಗತಿ ಎಂದು ವಿಶ್ಲೇಷಿಸಿದರು. ಮೋದಿಜಿಯವರ ಪಯಣವನ್ನು ನೋಡಿದಾಗ, ರಾಜಕೀಯ ಅವರ ಪಾಲಿಗೊಂದು ಅಧಿಕಾರ ಮಾರ್ಗವಲ್ಲ, ಅದು ಜನಸೇವೆ ಮತ್ತು ದೇಶಸೇವೆಗೆ ಒಂದು ಅವಕಾಶ ಎಂದು ನನಗೆ ಅನಿಸುತ್ತದೆ. ಮುಖ್ಯಮಂತ್ರಿಗಳಾಗಿ, ಪ್ರಧಾನಮಂತ್ರಿಗಳಾಗಿ, ದೇಶದ ಸಾಮಾನ್ಯ ನಾಗರಿಕರ ಬದುಕಿನಲ್ಲಿ ಪರಿವರ್ತನೆ ತರಬೇಕು ಎಂಬ ಒಂದೇ ಒಂದು ಸಂಕಲ್ಪದೊಂದಿಗೆ ಅವರು ಸತತವಾಗಿ ಕೆಲಸ ಮಾಡುತ್ತಿದ್ದಾರೆ ಎಂದು ತಿಳಿಸಿದರು. ಈ ವಿಶೇಷ ಸಂದರ್ಭದಲ್ಲಿ ನಮ್ಮ ಪ್ರತಿಯೊಬ್ಬ ಕಾರ್ಯಕರ್ತನ ವೈಯಕ್ತಿಕ ಸಂಪರ್ಕದ ಸಂಕಲ್ಪ ನಮ್ಮದಾಗಲಿ. ಮೋದಿಜಿಯವರ ಮೇಲೆ ನಮ್ಮ ಅಭಿಮಾನದ ಅಭಿವ್ಯಕ್ತಿಯಾಗಬೇಕು ಎಂದು ಆಶಿಸಿದರು.

ರೋರಿಕ್–ದೇವಿಕಾ ರಾಣಿ ಎಸ್ಟೇಟ್‌ನಲ್ಲಿ ಕೈಗೊಳ್ಳಲಾಗುತ್ತಿರುವ ಎಕೋ ಟೂರಿಸಂ ಕಾಮಗಾರಿಗಳನ್ನು ಚುರುಕುಗೊಳಿಸಿ: ಸಚಿವ ಕೆ.ಜೆ. ಜಾರ್ಜ್



ಬೆಂಗಳೂರು: ರೋರಿಕ್–ದೇವಿಕಾ ರಾಣಿ ಎಸ್ಟೇಟ್‌ನಲ್ಲಿ ಎಕೋ ಟೂರಿಸಂ ಅಭಿವೃದ್ಧಿಗೆ ಸಂಬಂಧಿಸಿದಂತೆ ನ್ಯಾಯಾಲಯದ ನಿರ್ದೇಶನದ ಮಿತಿಯಲ್ಲಿ ಕೈಗೊಳ್ಳಲಾಗುತ್ತಿರುವ ಕಾಮಗಾರಿಗಳನ್ನು ಚುರುಕುಗೊಳಿಸುವಂತೆ ಇಂಧನ ಮತ್ತು ಪ್ರವಾಸೋದ್ಯಮ ಸಚಿವ ಕೆ.ಜೆ. ಜಾರ್ಜ್ ಅಧಿಕಾರಿಗಳಿಗೆ ಸೂಚಿಸಿದರು. ಪ್ರವಾಸೋದ್ಯಮ ಇಲಾಖೆಯ ಹಿರಿಯ ಅಧಿಕಾರಿಗಳೊಂದಿಗೆ ಇಂದು ರೋರಿಕ್?ದೇವಿಕಾ ರಾಣಿ ಎಸ್ಟೇಟ್‌ಗೆ ಭೇಟಿ ನೀಡಿದ ಸಚಿವರು, ಅಲ್ಲಿ ನಡೆಯುತ್ತಿರುವ ಕಾಮಗಾರಿಗಳನ್ನು ಪರಿಶೀಲಿಸಿ, ಅನುಮತಿಸಲಾದ ಅಭಿವೃದ್ಧಿ ಕಾರ್ಯಗಳನ್ನು ಕಾಲಮಿತಿಯೊಳಗೆ ಪೂರ್ಣಗೊಳಿಸಲು ಸೂಚಿಸಿದರು. ಎಸ್ಟೇಟ್‌ನ ನೈಸರ್ಗಿಕ ಪರಿಸರ, ಹಸಿರು ವಲಯ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಕಾಪಾಡಿಕೊಂಡೇ ಪ್ರವಾಸಿಗರಿಗೆ ಅಗತ್ಯ ಮೂಲಸೌಲಭ್ಯಗಳನ್ನು ಅಭಿವೃದ್ಧಿಪಡಿಸಬೇಕು ಎಂದು ಸಚಿವರು ತಿಳಿಸಿದರು. "ರೋರಿಕ್?ದೇವಿಕಾ ರಾಣಿ ಎಸ್ಟೇಟ್ ಕಲೆ, ಸಂಸ್ಕೃತಿ ಮತ್ತು ನೈಸರ್ಗಿಕ ಪರಂಪರೆಯ ವಿಶಿಷ್ಟ ತಾಣವಾಗಿದೆ. ಇಲ್ಲಿ ಕೈಗೊಳ್ಳುವ ಪ್ರತಿಯೊಂದು ಕಾಮಗಾರಿಯೂ ನ್ಯಾಯಾಲಯದ ನಿರ್ದೇಶನಗಳು ಮತ್ತು ಪರಿಸರ ಸಂರಕ್ಷಣಾ ಮಾನದಂಡಗಳಿಗೆ ಅನುಗುಣವಾಗಿರಬೇಕು. ಅನುಮತಿಸಲಾದ ಕಾಮಗಾರಿಗಳನ್ನು ವಿಳಂಬವಿಲ್ಲದೆ ಪೂರ್ಣಗೊಳಿಸಿ, ಈ ತಾಣವನ್ನು ಸಂರಕ್ಷಣೆ ಆಧಾರಿತ ಎಕೋ ಟೂರಿಸಂ ಕೇಂದ್ರವಾಗಿ ಅಭಿವೃದ್ಧಿಪಡಿಸುವುದು ನಮ್ಮ ಉದ್ದೇಶ," ಎಂದು ಸಚಿವ ಕೆ.ಜೆ. ಜಾರ್ಜ್ ಹೇಳಿದರು.

ಪ್ರವಾಸೋದ್ಯಮ ಇಲಾಖೆಯ ಕಾರ್ಯದರ್ಶಿ ಡಾ. ರಾಮ್ ಪ್ರಸಾತ್ ಮನೋಹರ್ ಮಾತನಾಡಿ, "ರೋರಿಕ್?ದೇವಿಕಾ ರಾಣಿ ಎಸ್ಟೇಟ್‌ನ ಅಭಿವೃದ್ಧಿಯನ್ನು ಕೇವಲ ಮೂಲಸೌಕರ್ಯ ಕಾಮಗಾರಿಯಾಗಿ ನೋಡುತ್ತಿಲ್ಲ. ಇಲ್ಲಿನ ಪರಿಸರ, ಪರಂಪರೆ ಮತ್ತು ಕಲಾತ್ಮಕ ಮಹತ್ವವನ್ನು ಕಾಪಾಡಿಕೊಂಡೇ ಪ್ರವಾಸಿಗರಿಗೆ ಅಗತ್ಯ ಸೌಲಭ್ಯಗಳನ್ನು ಒದಗಿಸುವ ಸಮತೋಲನದ ಮಾದರಿಯನ್ನು ರೂಪಿಸಲಾಗುತ್ತಿದೆ. ನ್ಯಾಯಾಲಯ ಅನುಮತಿಸಿರುವ ಕಾಮಗಾರಿಗಳನ್ನು ಆದ್ಯತೆ ಆಧಾರದಲ್ಲಿ ಕೈಗೆತ್ತಿಕೊಂಡು, ಸಂಬಂಧಿತ ಇಲಾಖೆಗಳ ಸಮನ್ವಯದೊಂದಿಗೆ ಮುಂದಿನ ಹಂತಗಳನ್ನು ಯೋಜಿಸಲಾಗುವುದು," ಎಂದರು. ಸಚಿವರು ಕಾಮಗಾರಿಗಳ ಪ್ರಗತಿ, ಪ್ರವಾಸಿಗರ ಮೂಲಸೌಲಭ್ಯ, ಪರಿಸರ ಸಂರಕ್ಷಣೆ ಹಾಗೂ ಯೋಜನೆಯ ಮುಂದಿನ ಹಂತಗಳ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆದರು. ಈ ಸಂದರ್ಭದಲ್ಲಿ ಪ್ರವಾಸೋದ್ಯಮ ಇಲಾಖೆಯ ಆಯುಕ್ತ ಶಿವಪ್ರಸಾದ್ ಪಿ.ಆರ್. ಹಾಗೂ ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಶಿವರಾಮ್ ಬಾಬು ಎಂ., ಐಎಫ್‌ಎಸ್ ಸೇರಿದಂತೆ ಪ್ರವಾಸೋದ್ಯಮ ಇಲಾಖೆಯ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

ನನ್ನ ಹಾಗೂ ಸಚಿವರ ವಿರುದ್ಧ ಸ್ಟಿಂಗ್ ಆಪರೇಷನ್ ಮಾಡಿದ ಪಿತಾಮಹ ಯಾರು ಎಂದು ಗೊತ್ತು: ಸಿಎಂ

ಒಂದನೇ ಪುಟದಿಂದ......

ನಾನು ಅಲ್ಲಿ ಭಾಗವಹಿಸಬೇಕಿತ್ತು. ಜಿ.ಎಸ್.ಟಿ ಸಭೆಯಲ್ಲಿ ಭಾಗವಹಿಸಬೇಕಿದ್ದರಿಂದ ಭಾಗವಹಿಸಲಾಗಲಿಲ್ಲ" ಎಂದರು.

ಕಾನೂನು ಚೌಕಟ್ಟಿನಲ್ಲಿ ಪ್ರಜಾಪ್ರಭುತ್ವ ಉಳಿಸುತ್ತೇನೆ

ಎಸ್.ಐ ಆರ್. ಕುರಿತು ಕೇಳಿದಾಗ, "ನಾನು ಜಿ ಎಸ್ ಟಿ ಸಭೆಗೆ ಪಾಲ್ಗೊಳ್ಳಲು ಆಗಮಿಸಿದ್ದು, ನಮ್ಮ ರಾಜ್ಯದಲ್ಲಿ ಎಸ್ ಐಆರ್ ಕುರಿತ ಸಂಪೂರ್ಣ ಮಾಹಿತಿ ತಿಳಿಸಲು ದಾಖಲೆಗಳನ್ನು ನಮ್ಮ ನಾಯಕರಿಗೆ ಒಪ್ಪಿಸಲಾಗುವುದು. ಅವರೆಲ್ಲಾ ಸದ್ಯಕ್ಕೆ ಬಿಡುವಿಲ್ಲದಿರುವುದರಿಂದ ಗೋವಾದಲ್ಲಿ ನಡೆಯಲಿರುವ ಪಕ್ಷದ ಸಭೆಗೆ ಹೋಗಿ ದಾಖಲೆಗಳನ್ನು ಸಲ್ಲಿಸುತ್ತೇನೆ. ನಂತರ ನಾಯಕರ ಸೂಚನೆ ಮೇರೆಗೆ ತೀರ್ಮಾನ ಮಾಡಲಾಗುವುದು" ಎಂದು ತಿಳಿಸಿದರು.

"ಕೇಂದ್ರ ಸಚಿವರು ಸೇರಿದಂತೆ ಎನ್ಡಿಎ ನೈಯಕರು ರಾಜ್ಯಪಾಲರ ಕಚೇರಿಗೆ ಹೋಗಿ ರಾಜ್ಯ ಸರ್ಕಾರಕ್ಕೆ ಪ್ರಶ್ನೆ ಮಾಡುವ ಹಕ್ಕಿಲ್ಲ ಎಂದು ಹೇಳುತ್ತಿರುವುದೇಕೆ? ಇದು ಕ್ರಿಮಿನಲ್ ಚಟುವಟಿಕೆಯಲ್ಲವೇ? ಕೊಲೆಯಾಗುವ ಮುನ್ನ ನಾವು ಕೊಲೆಯನ್ನು ತಪ್ಪಿಸಿದ್ದೇವೆ. ರಾಜ್ಯಪಾಲರ ಕಚೇರಿಗೆ ತೆರಳಿರುವ ಬಿಜೆಪಿ ನಾಯಕರಿಗೆ ನಾಚಿಕೆಯಾಗಬೇಕು. ರಾಜ್ಯಪಾಲರು ನಮ್ಮ ಅಧಿಕಾರಿಗಳಿಗೆ ಕರೆ ಮಾಡಿ ಪ್ರಕರಣ ದಾಖಲಿಸುತ್ತಿರುವುದೇಕೆ ಎಂದು ಕೇಳಿದ್ದಾರೆ. ಇಲ್ಲಿ ನಡೆದಿರುವುದು ಅಪರಾಧವಲ್ಲವೇ? ರಾಜ್ಯದ ಮುಖ್ಯಮಂತ್ರಿಯಾಗಿ ಮತದಾರರ ಹಕ್ಕು ಉಳಿಸುವುದು ನನ್ನ ಕರ್ತವ್ಯವಲ್ಲವೇ? ಬಿಜೆಪಿ ನಾಯಕರು ಇಂತಹ ಕೀಳುಮಟ್ಟಕ್ಕೆ ಇಳಿಯುತ್ತಾರೆ ಎಂದು ನಾನು ನಿರೀಕ್ಷಿಸಿರಲಿಲ್ಲ. ಬಿಜೆಪಿಗರು ಜನರ ಹೃದಯ ಗೆದ್ದು ಚುನಾವಣೆ ಗೆಲ್ಲಬೇಕು. ಅದನ್ನು ಬಿಟ್ಟು ಚುನಾವಣಾ ಆಯೋಗ ಮೂಲಕ ಇಂತಹ ಅಕ್ರಮ ಮಾಡುತ್ತಿದೆ. ರಾಜ್ಯದಲ್ಲಿ ಇಷ್ಟು ಅಕ್ರಮ ನಡೆಯುತ್ತಿರುವಾಗ ಅಗತ್ಯ ಕ್ರಮ ಕೈಗೊಳ್ಳುವುದು ಸರ್ಕಾರದ ಜವಾಬ್ದಾರಿ. ಬದುಕಿರುವವರನ್ನು ಸತ್ತಿದ್ದಾರೆ ಎಂದು ಸುಳ್ಳು ಹೇಳಿ ಮತದಾನದ ಹಕ್ಕು ಕಸಿಯುವುದು ಅಕ್ರಮವಲ್ಲವೇ? ಇದು ಅಪರಾಧ ಪಿತೂರಿಯಾಗಿದೆ. ಅಮಾಯಕ ಬಿಜೆಪಿ ಕಾರ್ಯಕರ್ತರಿಗೆ ಈ ಕೆಲಸ ಒಪ್ಪಿಸಿರುವುದು. ಬಿಜೆಪಿ ಕಾರ್ಯಕರ್ತರು ಎಲ್ಲಿ ತಮ್ಮ ಹೆಸರು ಬಯಲು ಮಾಡುತ್ತಾರೋ ಎಂದು ಹೆದರಿದ್ದಾರೆ.ಈ ಬಗ್ಗೆ ತನಿಖೆ ಮಾಡಿಸಿ ಕಾನೂನಿನ ರೀತ್ಯಾ ಕ್ರಮ ಕೈಗೊಂಡು ಪ್ರಜಾಪ್ರಭುತ್ವ ಉಳಿಸುತ್ತೇನೆ" ಎಂದರು. ದೇಶದ ಅತಿದೊಡ್ಡ ಕುತಂತ್ರ "ಮತದಾರರ ಹೆಸರುಗಳನ್ನು ಅಳಿಸಿಹಾಕಲು ನಡೆಸಿರುವ ಪ್ರಯತ್ನ ದೇಶದ ಅತಿ ದೊಡ್ಡ ಕುತಂತ್ರವಾಗಿದೆ. ಮತದಾನದ ಹಕ್ಕು ಬದುಕಿನ ಹಕ್ಕಾಗಿದೆ. ವಿರೋಧ ಪಕ್ಷದ ನಾಯಕರಾಗಿ ಪ್ರತಿ ಮತದಾನವನ್ನು ಉಳಿಸುವುದು ರಾಹುಲ್ ಗಾಂಧಿ ಅವರ ಕರ್ತವ್ಯವಾಗಿದೆ. ದೇಶದಲ್ಲಾಗಿರುವ ಮತಗಳ್ಳತನದ ಬಗ್ಗೆ ಚುನಾವಣಾ ಆಯೋಗದ ಸದಸ್ಯರಿಂದ ಈಗಾಗಲೇ ಬಹಿರಂಗಗೊಂಡಿದೆ. ನ್ಯಾಯಾಲಯಗಳೂ ಕೂಡ ಇದನ್ನು ಒಪ್ಪಿದ್ದು, ನ್ಯಾಯವನ್ನು ಎತ್ತಿ ಹಿಡಿದಿರುವುದಕ್ಕಾಗಿ ನಾನು ಅಭಿನಂದಿಸುತ್ತೇನೆ. ಕರ್ನಾಟಕದಲ್ಲಿ ಲಕ್ಷಾಂತರ ಮತದಾರರನ್ನು ಮತದಾರರ ಪಟ್ಟಿಯಿಂದ ತೆಗೆದುಹಾಕಲಾಗಿದೆ. ಬಿಜೆಪಿ ಕೇಂದ್ರ ಕಚೇರಿಯಲ್ಲಿ ನಮೂನೆ–7 ಅರ್ಜಿಗಳನ್ನು ಮುದ್ರಣ ಮಾಡಲಾಗಿದೆ. ದಲಿತ, ಅಲ್ಪಸಂಖ್ಯಾತರು, ಹಿಂದುಳಿದ ವರ್ಗಗಳ ಮತದಾರರ ಹೆಸರು ಹಾಗೂ ವಿಳಾಸ ನಮೂದಿಸಿ ಸ್ಥಳೀಯ ಬಿಜೆಪಿ ನಾಯಕರಿಗೆ ನಮೂನೆ –7 ನೀಡಲಾಗಿದೆ. ಅರ್ಜಿಗಳನ್ನು ನೀಡಿದವರ ಐಡಿ ಕಾರ್ಡ್ , ದೂರವಾಣಿ ಸಂಖ್ಯೆಯನ್ನು ನೀಡಲಾಗಿದೆ. ಈ ಬಗ್ಗೆ ದೂರು ನೀಡಿದ ಬೆನ್ನಲ್ಲೆ ಬಿಎಲ್ಒ ಗಳನ್ನು ಬೆದರಿಸಿ ಅರ್ಜಿಗಳನ್ನು ವಾಪಸ್ಸು ಪಡೆದಿದ್ದಾರೆ" ಎಂದರು.

ಎಸ್ ಟಿ ಮಂಡಳಿ ಸಭೆ: ರಾಜ್ಯದ ಹಿತದೃಷ್ಟಿಯಿಂದ ಪ್ರಸ್ತಾವನೆ ಸಲ್ಲಿಕೆ "ಕಳೆದ ಮೂರು ದಿನಗಳಿಂದ ಜಿ ಎಸ್ ಟಿ ಮಂಡಳಿ ಸಭೆ ನಡೆಯುತ್ತಿತ್ತು. ಇಂದಿನ ಸಭೆಯಲ್ಲಿ ಪ್ರಮುಖ ವಿಚಾರಗಳ ಬಗ್ಗೆ ಚರ್ಚೆ ಮಾಡಲು ಹಲವು ರಾಜ್ಯಗಳ ಮುಖ್ಯಮಂತ್ರಿಗಳು ಆಗಮಿಸುತ್ತಿದ್ದಾರೆ. ಇಂದು ನಾನು ಹಾಗೂ ಸಚಿವ ಕೃಷ್ಣ ಬೈರೇಗೌಡರು ಸಭೆಯಲ್ಲಿ ಭಾಗವಹಿಸುತ್ತಿದ್ದೇವೆ. ಬೆಂಗಳೂರಿನಲ್ಲಿಯೂ ಅಧಿಕಾರಿಗಳೊಂದಿಗೆ ಸಭೆ ನಡೆಸಲಾಗಿತ್ತು. ನಿನ್ನೆಯೂ ಸಭೆ ನಡೆಸಿ ನಮ್ಮ ನಿಲುವೇನು ಎಂದು ತಿಳಿಸಿದ್ದು, ತೆಲಂಗಾಣ ಸೇರಿದಂತೆ ಇತರೆ ರಾಜ್ಯಗಳ ಅಭಿಪ್ರಾಯ ತಿಳಿಸಲಾಗಿದೆ. ಅಧಿಕಾರಿಗಳು ಕೂಡ ಪ್ರಮುಖ ವಿಚಾರಗಳನ್ನು ತಿಳಿಸಿದ್ದು, ರಾಜ್ಯದ ಹಿತದೃಷ್ಟಿಯಿಂದ ಪ್ರಸ್ತಾವನೆ ಮಾಡಲಿದ್ದೇನೆ" ಎಂದರು.

ಚಾಕುವಿನಿಂದ ದಾಳಿ ನಡೆಸಿ ಹತ್ಯೆ



ಮಹಾರಾಷ್ಟ್ರ: ಪೆಟ್ರೋಲ್ ಬಂಕ್ ಸೀಲ್ ಮಾಡಲು ತೆರಳಿದ್ದ ಇಂಡಿಯನ್ ಆಯಿಲ್ ಅಧಿಕಾರಿಯೊಬ್ಬರ ಮೇಲೆ ಚಾಕುವಿನಿಂದ ದಾಳಿ ನಡೆಸಿ ಹತ್ಯೆ ಮಾಡಿರುವಘಟನೆ ಮಹಾರಾಷ್ಟ್ರದ ಹಿಂಗೋಲಿ ಜಿಲ್ಲೆಯ ಬಸ್ಮತ್ ತಾಲೂಕಿನಅಂಬಾಚೊಂಡಿ ಗ್ರಾಮದಲ್ಲಿ ನಡೆದಿದೆ. ಮೃತರನ್ನು ಇಂಡಿಯನ್ ಆಯಿಲ್‌ನ ಸೇಲ್ಸ್‌ಮ್ಯಾನೇಜರ್‌ಹಾಗೂ ಫೀಲ್ಡ್ ಆಫೀಸರ್ ಮಹೇಶ್ ಶೆಲ್ಕೆ ಎಂದು ಗುರುತಿಸಲಾಗಿದೆ.ಮಂಗಳವಾರ ಸಂಜೆ ಸುಮಾರು4.30ರ ವೇಳೆಗೆ ಈ ಘಟನೆ ನಡೆದಿದೆ. ಬಂಕ್‌ನ್ನು ಸೀಲ್ ಮಾಡಿ ಕಂಪನಿಯ ವಶಕ್ಕೆ ಪಡೆಯಲು ಮಹೇಶ್ ಶೆಲ್ಕೆ ಸೇರಿದಂತೆ ಅಧಿಕಾರಿಗಳ ತಂಡ ಸ್ಥಳಕ್ಕೆ ತೆರಳಿತ್ತು. ಈ ವೇಳೆಬಂಕ್ ಮಾಲೀಕರ ಕುಟುಂಬದ ಸದಸ್ಯರೊಂದಿಗೆ ಮಾತಿನ ಚಕಮಕಿ ನಡೆದಿದೆ ಎನ್ನಲಾಗಿದೆ. ಪೆಟ್ರೋಲ್ ಬಂಕ್‌ನ್ನು ಕೆಲ ಸಮಯದಿಂದ ಸ್ಥಗಿತಗೊಳಿಸಲಾಗಿತ್ತು. ಇದೀಗ ಮತ್ತೆ ಕಾರ್ಯಾಚರಣೆ ಆರಂಭಿಸಿದ್ದ ಬಂಕ್‌ನ್ನು ಸೀಲ್ ಮಾಡುವಂತೆ ಅಧಿಕಾರಿಗಳು ಮುಂದಾಗಿದ್ದರು. ಅಧಿಕಾರಿಗಳ ತಂಡ ಸೀಲಿಂಗ್ ಪ್ರಕ್ರಿಯೆಆರಂಭಿಸುತ್ತಿದ್ದಂತೆಬಂಕ್ ಮಾಲೀಕರ ಕುಟುಂಬದವರು ವಿರೋಧ ವ್ಯಕ್ತಪಡಿಸಿದ್ದಾರೆಎನ್ನಲಾಗಿದೆ. ಮಾತಿಗೆ ಮಾತು ಬೆಳೆದು ಗಲಾಟೆ ನಡೆದಿದೆ.ಈ ವೇಳೆ ಮಹೇಶ್ ಶೆಲ್ಕೆ ಅವರ ಮೇಲೆ ಚಾಕುವಿನಿಂದ ದಾಳಿ ನಡೆಸಲಾಗಿದೆ. ಅವರಿಗೆ ಏಳು ಬಾರಿ ಇರಿತವಾಗಿದ್ದು,ತೀವ್ರವಾಗಿಗಾಯಗೊಂಡ ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ ಎಂದು ವರದಿಯಾಗಿದೆ.ಘಟನೆಗೆ ಸಂಬಂಧಿಸಿದಂತೆ ಪೊಲೀಸರು ಕೊಲೆ ಪ್ರಕರಣ ದಾಖಲಿಸಿಕೊಂಡಿದ್ದು, ಮಹಿಳೆ ಸೇರಿದಂತೆ ನಾಲ್ವರನ್ನು ವಶಕ್ಕೆ ಪಡೆದಿದ್ದಾರೆ ಎಂದು ತಿಳಿದುಬಂದಿದೆ. ಘಟನೆ ಬಗ್ಗೆ ಕೇಂದ್ರ ಪೆಟ್ರೋಲಿಯಂ ಸಚಿವ ಹರ್ದೀಪ್ ಸಿಂಗ್ ಪುರಿ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಕರ್ತವ್ಯ ನಿರ್ವಹಿಸುತ್ತಿದ್ದ ಅಧಿಕಾರಿಯ ಮೇಲೆ ನಡೆದಿರುವ ಈ ದಾಳಿ ಖಂಡನೀಯ ಎಂದು ಅವರು ಹೇಳಿದ್ದಾರೆ.ಆರೋಪಿಗಳ ವಿರುದ್ಧ ಕಾನೂನು ಪ್ರಕಾರ ತ್ವರಿತ ಹಾಗೂ ಕಠಿಣ ಕ್ರಮ ಕೈಗೊಳ್ಳುವಂತೆ ಮಹಾರಾಷ್ಟ್ರ ಸರ್ಕಾರ ಮತ್ತು ಪೊಲೀಸರ ಹಿರಿಯ ಅಧಿಕಾರಿಗಳೊಂದಿಗೆ ವಿಚಾರ ಪ್ರಸ್ತಾಪಿಸಲಾಗಿದೆ ಎಂದು ಪುರಿ ತಿಳಿಸಿದ್ದಾರೆ. ಮಹೇಶ್ ಶೆಲ್ಕೆ ಅವರ ಕುಟುಂಬಕ್ಕೆ ಪೆಟ್ರೋಲಿಯಂ ಸಚಿವಾಲಯ ಮತ್ತು ಇಂಡಿಯನ್ ಆಯಿಲ್ ಸಂಸ್ಥೆ ಅಗತ್ಯ ನೆರವು ನೀಡಲಿದೆ ಎಂದು ಅವರು ಹೇಳಿದ್ದಾರೆ.ಇಂಡಿಯನ್ ಆಯಿಲ್ ಅಧ್ಯಕ್ಷ ಎ.ಎಸ್. ಸಾಹ್ನಿ ಕೂಡ ಮಹೇಶ್ ಶೆಲ್ಕೆ ಅವರ ಸಾವಿಗೆ ಸಂತಾಪ ಸೂಚಿಸಿದ್ದಾರೆ. ಕರ್ತವ್ಯ ನಿರ್ವಹಿಸುವ ವೇಳೆ ಅವರು ದಾಳಿಗೆ ಒಳಗಾಗಿರುವುದು ದುಃಖಕರ ಎಂದು ಹೇಳಿದ್ದಾರೆ. ಇಂಡಿಯನ್ ಆಯಿಲ್ ಅಧಿಕಾರಿಗಳ ಸಂಘವೂ ಘಟನೆಗೆ ಆಕ್ರೋಶ ವ್ಯಕ್ತಪಡಿಸಿದೆ. ಪ್ರಕರಣದ ಬಗ್ಗೆ ತ್ವರಿತ ಹಾಗೂ ನಿಷ್ಪಕ್ಷಪಾತ ತನಿಖೆ ನಡೆಸಬೇಕು ಮತ್ತು ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದೆ.ಕರ್ತವ್ಯ ನಿರ್ವಹಿಸುವ ಅಧಿಕಾರಿಗಳಿಗೆ ಸೂಕ್ತ ಭದ್ರತೆ ಒದಗಿಸಬೇಕು ಎಂದು ಸಂಘ ಒತ್ತಾಯಿಸಿದೆ.ಈ ಘಟನೆ 2005ರಲ್ಲಿ ಉತ್ತರ ಪ್ರದೇಶದಲ್ಲಿ ನಡೆದ ಇಂಡಿಯನ್ ಆಯಿಲ್ ಅಧಿಕಾರಿ ಮಂಜುನಾಥ್ ಶಣ್ಮುಗಂ ಹತ್ಯೆಯನ್ನು ಮತ್ತೆ ನೆನಪಿಸಿದೆ. ಪೆಟ್ರೋಲ್ ಬಂಕ್‌ನಲ್ಲಿ ಅಕ್ರಮ ಪತ್ತೆಯಾದ ಹಿನ್ನೆಲೆಯಲ್ಲಿ ಮಂಜುನಾಥ್ ಅವರು ಪರಿಶೀಲನೆ ನಡೆಸಿದ್ದರು. ಬಳಿಕ ಬಂಕ್‌ಗೆ ಇಂಧನ ಪೂರೈಕೆ ಸ್ಥಗಿತಗೊಳಿಸಲಾಗಿತ್ತು. 2005ರ ನವೆಂಬರ್‌ನಲ್ಲಿ ಮಂಜುನಾಥ್ ಅವರ ಮೃತದೇಹ ಪತ್ತೆಯಾಗಿತ್ತು. ಇದೀಗ ಮತ್ತೆ ಕರ್ತವ್ಯ ನಿರ್ವಹಿಸುತ್ತಿದ್ದ ಇಂಡಿಯನ್ ಆಯಿಲ್ ಅಧಿಕಾರಿಯೊಬ್ಬರು ದಾಳಿಗೆ ಬಲಿಯಾಗಿರುವುದು ಚರ್ಚೆಗೆ ಕಾರಣವಾಗಿದೆ.

ದುಶ್ಚಟ ಮುಕ್ತ ಸಮಾಜ ನಿರ್ಮಾಣಕ್ಕೆ ಜನಜಾಗೃತಿ ಅಗತ್ಯ



ಸೇಡಂ: ಗಾಂಧಿ ಜಯಂತಿ ಸಂಭ್ರಮಾಚರಣೆಯ ಅಂಗವಾಗಿ ದುಶ್ಚಟ ಮುಕ್ತ ಸಮಾಜ ನಿರ್ಮಾಣದ ಉದ್ದೇಶದಿಂದ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ (ರಿ.) ಸೇಡಂ ತಾಲೂಕು, ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆ ಟ್ರಸ್ಟ್ (ರಿ.) ಬೆಳ್ತಂಗಡಿ, ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆ ಟ್ರಸ್ಟ್ (ರಿ.) ಕಲಬುರಗಿ ಜಿಲ್ಲೆ ಹಾಗೂ ಸ್ವಸಹಾಯ ಸಂಘಗಳ ಒಕ್ಕೂಟ ಸೇಡಂ ತಾಲೂಕು ಇವರ ಸಹಯೋಗದಲ್ಲಿ ಕೊಡ್ಲಾ ಗ್ರಾಮದಲ್ಲಿ ಗಾಂಧಿ ಸ್ಮೃತಿ ಹಾಗೂ ಬೃಹತ್ ಜನಜಾಗೃತಿ ಸಮಾವೇಶ ಅಕ್ಟೋಬರ್ 7ರಂದು ನಡೆಯಿತು. ಪರಮಪೂಜ್ಯ ರಾಜರ್ಷಿ ಡಾ. ಡಿ. ವೀರೇಂದ್ರ ಹೆಗ್ಗಡೆಯವರು ಹಾಗೂ ಮಾತೃಶ್ರೀ ಹೇಮಾವತಿ ವಿ. ಹೆಗ್ಗಡೆಯವರ ಕೃಪಾಶೀರ್ವಾದದೊಂದಿಗೆ ಆಯೋಜಿಸಲಾಗಿದ್ದ ಕಾರ್ಯಕ್ರಮಕ್ಕೆ ಮೊದಲು ಜಾತಾ ಕಾರ್ಯಕ್ರಮಕ್ಕೆ ಕೊಡ್ಲಾ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಶ್ರೀಮತಿ ಚಂದ್ರಕಲಾ ಚಾಲನೆ ನೀಡಿದರು. ನಂತರನಡೆದಸಭಾಕಾರ್ಯಕ್ರಮವನ್ನುಶ್ರೀಸಿ.ಎನ್.ಬಾಬಳಗಾವ್ ಹಾಗೂ ಗಣ್ಯರು ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಜಿಲ್ಲಾ ನಿರ್ದೇಶಕ ಶ್ರೀ ಗಣಪತಿ ಮಾಳಂಜಿ ಅವರು ಯೋಜನೆಯ ವಿವಿಧ ಸಮಾಜಮುಖಿ ಕಾರ್ಯಕ್ರಮಗಳು ಹಾಗೂ ಸಾರ್ವಜನಿಕರಿಗೆ ದೊರೆಯುವ ಸೌಲಭ್ಯಗಳ ಕುರಿತು ಮಾಹಿತಿ ನೀಡಿದರು. ಶ್ರೀ ಪರ್ವತ ರೆಡ್ಡಿ ಅವರು ಮಹಿಳಾ ಸಬಲೀಕರಣದ ಕುರಿತು ಮಾತನಾಡಿ, ಮಹಿಳೆಯರು ಸ್ವಾವಲಂಬಿಗಳಾಗಿ ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿಅಭಿವೃದ್ಧಿ ಹೊಂದುವ ಅಗತ್ಯವನ್ನು ವಿವರಿಸಿದರು.ಕಾರ್ಯಕ್ರಮದಲ್ಲಿ ಜಿಲ್ಲಾ ನಿರ್ದೇಶಕರು ಹಾಗೂ ಗಣ್ಯರ ಸಮ್ಮುಖದಲ್ಲಿ ಸುಜ್ಞಾನ ನಿಧಿ ಶಿಷ್ಯವೇತನದ ಮಂಜೂರಾತಿ ಪತ್ರಗಳನ್ನು ಫಲಾನುಭವಿಗಳಿಗೆ ವಿತರಿಸಲಾಯಿತು. ಜಿಲ್ಲಾ ಜನಜಾಗೃತಿ ವೇದಿಕೆಯ ಉಪಾಧ್ಯಕ್ಷ ಶಿವಯ್ಯಸ್ವಾಮಿ ಬಿಬ್ಬಳ್ಳಿ ಅವರು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ದೊರೆಯುವ ವಿವಿಧ ಸೌಲಭ್ಯಗಳ ಕುರಿತು ಮಾಹಿತಿ ನೀಡಿದರು. ಜಿಲ್ಲಾ ಜನಜಾಗೃತಿ ವೇದಿಕೆ ಸದಸ್ಯ ರಾಜಶೇಖರ್ ನೀಲಂಗಿ ಅವರು ಮಹಿಳೆಯರು ಸ್ವಸಹಾಯ ಸಂಘಗಳ ಮೂಲಕ ಸ್ವಂತ ಉದ್ಯೋಗಗಳನ್ನು ಕೈಗೊಂಡು ಆರ್ಥಿಕವಾಗಿ ಸಬಲರಾಗಬೇಕು ಎಂದು ಕರೆ ನೀಡಿದರು. ಶ್ರೀ ರಾಮನಗೌಡ, ಅಖಿಖ, ಶ್ರೀ ಫೌಂಡೇಶನ್ ಟ್ರಸ್ಟ್, ಬೆನಕನಹಳ್ಳಿ ಅವರು ಪೂಜ್ಯ ಡಾ. ಡಿ. ವೀರೇಂದ್ರ ಹೆಗ್ಗಡೆಯವರು ಕೈಗೊಂಡಿರುವ ಸಮಾಜಮುಖಿ ಕಾರ್ಯಗಳನ್ನು ಶ್ಲಾಘಿಸಿ, ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಹಾಗೂ ಮಾಜಿ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿ ಅವರ ಜೀವನ, ಆದರ್ಶ ಮತ್ತು ದೇಶಸೇವೆಯ ಕುರಿತು ಸ್ವಸಹಾಯ ಸಂಘದ ಸದಸ್ಯರಿಗೆ ನೆನಪಿಸಿದರು. ಶಂಭುಲಿಂಗೇಶ್ವರ ಶಿಕ್ಷಣ ಸಂಸ್ಥೆ, ಕೊಡ್ಲಾ ಅಧ್ಯಕ್ಷ ಶ್ರೀ ಶಂಬುರೆಡ್ಡಿ ಮದನಿ ಅವರು ಅಧ್ಯಕ್ಷೀಯ ಭಾಷಣದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಸಮಾಜಮುಖಿ ಕಾರ್ಯಗಳನ್ನು ಪ್ರಶಂಸಿಸಿದರು. ಕಾರ್ಯಕ್ರಮದಲ್ಲಿ ಬೆನಕನಹಳ್ಳಿ ಗ್ರಾಮದ ಮುಖಂಡ ಶ್ರೀ ಶಿವಲಿಂಗ ರೆಡ್ಡಿ ಪಾಟೀಲ್, ಕೊಡ್ಲಾ ಗ್ರಾಮದ ಮುಖಂಡ ಶ್ರೀ ಸಿದ್ದು ಬಾನರ್, ಜಿಲ್ಲಾ ಜನಜಾಗೃತಿ ವೇದಿಕೆ ಸದಸ್ಯರಾದ ಶ್ರೀ ಶಿವಕುಮಾರ ಜಾಡರ್, ಶ್ರೀ ವರದಸ್ವಾಮಿ ಹಿರೇಮಠ, ಶ್ರೀ ನರಸ ರೆಡ್ಡಿ ಹಾಗೂ ಶ್ರೀಮತಿ ಭಾಗ್ಯಲಕ್ಷ್ಮಿ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು. ಕಾರ್ಯಕ್ರಮಕ್ಕೆ ಆಗಮಿಸಿದ ಗಣ್ಯರು ಹಾಗೂಸಾರ್ವಜನಿಕರನ್ನು ಯೋಜನಾಧಿಕಾರಿ ಸೋಮಶೇಖರ್ ಕೆ. ಅವರು ಸ್ವಾಗತಿಸಿದರು. ಮೇಲ್ವಿಚಾರಕ ಬಸವಣ್ಣಪ್ಪ ತುಪ್ಪದ ಅವರು ಕಾರ್ಯಕ್ರಮ ನಿರೂಪಿಸಿದರು. ತಾಲೂಕಿನ ಕೃಷಿ ಅಧಿಕಾರಿ ಶಂಕರ್ ಬಂಡಿ ಅವರು ವಂದಿಸಿದರು. ಕಾರ್ಯಕ್ರಮದ ಯಶಸ್ಸಿಗೆ ಸೇಡಂ ತಾಲೂಕಿನ ಶೌರ್ಯ ಸ್ವಯಂಸೇವಕ ತಂಡ ಅಪಾರ ಸೇವೆ ಸಲ್ಲಿಸಿತು. ತಾಲೂಕಿನ ಎಲ್ಲಾ ಮೇಲ್ವಿಚಾರಕ ಶ್ರೇಣಿ ಸಿಬ್ಬಂದಿ, ಸೇವಾ ಪ್ರತಿನಿಧಿಗಳು, ಗ್ರಾಮೀಣ ಸೇವಾದಾರರು, ಸುವಿಧಾ ಸಹಾಯಕರು, ಸ್ವಸಹಾಯ ಸಂಘಗಳ ಒಕ್ಕೂಟದ ಪದಾಧಿಕಾರಿಗಳು ಹಾಗೂ ಸದಸ್ಯರು, ಗ್ರಾಮಸ್ಥರು ಸೇರಿದಂತೆ ಅಪಾರ ಸಂಖ್ಯೆಯ ಜನರು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು. ದುಶ್ಚಟಗಳಿಂದ ದೂರವಿದ್ದು, ಗಾಂಧೀಜಿಯವರ ಆದರ್ಶಗಳನ್ನು ಅಳವಡಿಸಿಕೊಂಡು ಆರೋಗ್ಯಕರ, ಸ್ವಾವಲಂಬಿ ಹಾಗೂ ದುಶ್ಚಟ ಮುಕ್ತ ಸಮಾಜ ನಿರ್ಮಾಣಕ್ಕೆ ಪ್ರತಿಯೊಬ್ಬರೂ ಕೈಜೋಡಿಸಬೇಕು ಎಂಬ ಸಂದೇಶ ಕಾರ್ಯಕ್ರಮದಲ್ಲಿ ಮೂಡಿಬಂತು.

ಸ್ಟಿಂಗ್ ಆಪರೇಷನ್ ಹೆಸರಿನಲ್ಲಿ ಬ್ಲ್ಯಾಕ್‌ಮೇಲ್ ಮಾಡುವ ಚರಿತ್ರೆ ಕಾಂಗ್ರೆಸ್‌ನದ್ದು: ವಿಜಯೇಂದ್ರ



ಗದಗ: ರಾಜ್ಯದಲ್ಲಿ ಸ್ಟಿಂಗ್ ಆಪರೇಷನ್ ನಡೆಸಿಸಿ ಬ್ಲ್ಯಾಕ್‌ಮೇಲ್ ಮಾಡುವ ಚರಿತ್ರೆಯಾರದ್ದು ಎಂಬುದು ಕಾಂಗ್ರೆಸ್ ಪಕ್ಷದ ಸಚಿವರು ಮತ್ತು ಶಾಸಕರನ್ನೇ ಕೇಳಿದರೆ ಗೊತ್ತಾಗುತ್ತದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಆರೋಪಿಸಿದರು. ಗದಗದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, "ಸ್ಟಿಂಗ್ ಮಾಡಿಸಿ ಬ್ಲ್ಯಾಕ್‌ಮೇಲ್ ಮಾಡುವ ಚರಿತ್ರೆಯ ಬಗ್ಗೆ ಸಚಿವ ಎಚ್. ಕೆ. ಪಾಟೀಲರನ್ನು ಕೇಳಿದರೆ ಸಾಕು. ಏನು, ಯಾರದು ಎಂಬುದನ್ನು ಹೇಳುವುದಕ್ಕೆ ನಾನು ಹೋಗುವುದಿಲ್ಲ" ಎಂದು ಹೇಳಿದರು. ಸ್ಟಿಂಗ್ ಆಪರೇಷನ್ ಬಗ್ಗೆ ಸ್ವತಃ ಆಡಳಿತ ಪಕ್ಷದ ಶಾಸಕರು ಮಾತನಾಡುತ್ತಿದ್ದಾರೆ. ಸ್ಟಿಂಗ್ ಆಪರೇಷನ್ ನಡೆಸುತ್ತಿರುವ ಏಜೆನ್ಸಿಗಳು ಯಾವುವು ಎಂಬುದನ್ನು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ರಾಜ್ಯದ ಜನತೆಯ ಮುಂದೆ ಸ್ಪಷ್ಟಪಡಿಸಬೇಕು ಎಂದು ವಿಜಯೇಂದ್ರ ಆಗ್ರಹಿಸಿದರು. "ಮೊಬೈಲ್ ಸ್ವಿಚ್ ಆಫ್ ಮಾಡಿಸಿ, ಬಾಗಿಲು ಹಾಕಿಕೊಂಡು ಲಂಚ ಹೊಡೆಯಿರಿ ಎಂದು ಸಚಿವರಿಗೆ ಕಿವಿಮಾತು ಹೇಳುವ ಪರಿಸ್ಥಿತಿ ರಾಜ್ಯದಲ್ಲಿ ನಿರ್ಮಾಣವಾಗಿದೆ. ಇಂತಹ ವ್ಯವಸ್ಥೆಯನ್ನು ನಡೆಸುತ್ತಿರುವವರು ಯಾರು ಎಂಬುದನ್ನು ಮುಖ್ಯಮಂತ್ರಿಗಳು ಸ್ಪಷ್ಟಪಡಿಸಬೇಕು" ಎಂದು ಅವರು ಟೀಕಿಸಿದರು. ಇದೇ ವೇಳೆ, ಇತ್ತೀಚೆಗೆ ಅತ್ಯುನ್ನತ ಪ್ರಭಾವಿ ನಾಯಕರೊಬ್ಬರು ಕೆಲವು ರಿಯಲ್ ಎಸ್ಟೇಟ್ ಉದ್ಯಮಿಗಳನ್ನು ಕರೆಸಿಕೊಂಡು, ಮೊಬೈಲ್ ಫೋನ್‌ಗಳನ್ನು ಸ್ವಿಚ್ ಆಫ್ ಮಾಡಿಸಿ ಮಾತನಾಡಿದ್ದಾರೆ ಎಂಬ ಗಂಭೀರ ಆರೋಪವನ್ನು ವಿಜಯೇಂದ್ರ ಮಾಡಿದರು. ಇಷ್ಟು ದಿನ 75 ರೂಪಾಯಿ ಕೊಡುತ್ತಿದ್ದೀರಿ, ಇನ್ನು ಮುಂದೆ 150 ರೂಪಾಯಿ ಕೊಡಬೇಕು ಎಂದು ಯಾಕೆ ಕೇಳಲಾಯಿತು? ಇಷ್ಟು ಕೊಡಲು ಸಾಧ್ಯವಿಲ್ಲ ಎಂದು ಉದ್ಯಮಿ ಹೇಳಿದಾಗ ರಾಜ್ಯ ಬಿಟ್ಟು ಹೋಗಿ ಎಂದು ಹೇಳಲಾಗಿದೆ. ಆ ಪ್ರಭಾವಿ ವ್ಯಕ್ತಿ ಯಾರು ಎಂಬುದನ್ನು ಮುಖ್ಯಮಂತ್ರಿಗಳು ತಿಳಿದುಕೊಂಡು ರಾಜ್ಯದ ಜನತೆಗೆ ಹೇಳಬೇಕು ಎಂದು ವಿಜಯೇಂದ್ರ ಒತ್ತಾಯಿಸಿದರು. ಜಿಪಂ–ತಾಪಂ ಚುನಾವಣೆಯಲ್ಲಿ ಮೈತ್ರಿ ಅಂತಿಮವಾಗಿಲ್ಲಜಿಲ್ಲಾಪಂಚಾಯಿತಿಮತ್ತುತಾಲೂಕು ಪಂಚಾಯಿತಿ ಚುನಾವಣೆಗಳಲ್ಲಿ ಬಿಜೆಪಿ?ಜೆಡಿಎಸ್ ಮೈತ್ರಿ ಕುರಿತು ಇನ್ನೂ ಅಂತಿಮ ನಿರ್ಧಾರವಾಗಿಲ್ಲ ಎಂದು ವಿಜಯೇಂದ್ರ ಸ್ಪಷ್ಟಪಡಿಸಿದರು. ಈ ಕುರಿತು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರೊಂದಿಗೆ ತಾನು ಮಾತನಾಡಿದ್ದೇನೆ. ಮುಂದಿನ ವಿಧಾನಸಭಾ ಚುನಾವಣೆಯನ್ನು ಒಟ್ಟಾಗಿ ಎದುರಿಸಬೇಕೆಂಬ ಅಪೇಕ್ಷೆ ಇದ್ದರೆ, ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿಯೂ ಸ್ಪಷ್ಟತೆ ಇರಬೇಕು. ಈ ಕುರಿತು ಎರಡೂ ಪಕ್ಷಗಳು ಕುಳಿತು ಚರ್ಚೆ ನಡೆಸಬೇಕಿದೆ. ಚುನಾವಣೆಗೆ ಇನ್ನೂ ಸಮಯವಿರುವುದರಿಂದ ಮಾತುಕತೆ ನಡೆಸಿ ತೀರ್ಮಾನ ಕೈಗೊಳ್ಳಲಾಗುವುದು ಎಂದು ಅವರು ಹೇಳಿದರು. ಬಿಜೆಪಿ ಕಾರ್ಯಕರ್ತರು, ಹಿಂದೂ ಕಾರ್ಯಕರ್ತರು ಹಾಗೂ ಮಠಾಧೀಶರನ್ನು ಹೆದರಿಸುವ ಕೆಲಸ ನಡೆಯುತ್ತಿದೆಎಂದುವಿಜಯೇಂದ್ರಆರೋಪಿಸಿದರು. "2028ರ ನಂತರ ನಾನೇ ಮುಖ್ಯಮಂತ್ರಿ ಎಂಬ ಭ್ರಮೆಯಲ್ಲಿದ್ದ ಮುಖ್ಯಮಂತ್ರಿ ಅವರಿಗೆ ಈಗ ವಾಸ್ತವದ ಅರಿವಾಗಿದೆ. ಆ ಹತಾಶೆಯಿಂದಲೇ ಈ ರೀತಿಯ ನಡೆ ಅನುಸರಿಸುತ್ತಿದ್ದಾರೆ" ಎಂದು ಅವರು ಮುಖ್ಯಮಂತ್ರಿ ವಿರುದ್ಧ ವಾಗ್ದಾಳಿ ನಡೆಸಿದರು. ಯತ್ನಾಳ್ ವಿಚಾರದಲ್ಲಿ ಸದ್ಯ ಯಾವುದೇ ಚರ್ಚೆ ಬೇಡ ಬಸನಗೌಡ ಪಾಟೀಲ ಯತ್ನಾಳ್ ಅವರು ಪಕ್ಷ ಸೇರ್ಪಡೆಯಾಗುವ ವಿಚಾರದ ಕುರಿತು ಪ್ರತಿಕ್ರಿಯಿಸಿದ ವಿಜಯೇಂದ್ರ, ಯತ್ನಾಳ್ ಅವರು ಕಳೆದ ಒಂದು ತಿಂಗಳಿಂದ ಮೌನವಾಗಿದ್ದಾರೆ ಎಂದು ಹೇಳಿದರು. ಯತ್ನಾಳ್ ಅವರು ಒಂದು ತಿಂಗಳಿಂದ ಪಾಪ ಸುಮ್ಮನಿದ್ದಾರೆ. ಈಗ ಗಣೇಶ ಹಬ್ಬ ನಡೆಯುತ್ತಿದೆ. ಅವರಿಗೆ ಯಾವುದೇ ತೊಂದರೆ ಕೊಡಬೇಡಿ. ನಂತರ ಈ ವಿಚಾರದ ಬಗ್ಗೆ ಮಾತನಾಡುತ್ತೇನೆ" ಎಂದು ವಿಜಯೇಂದ್ರ ಹೇಳಿದರು

ವಿಕಲಚೇತನರ ಗೌರವಧನ ತಡೆ ಅಮಾನವೀಯ: ಅಶೋಕ್ ಆಕ್ರೋಶ



ಬೆಂಗಳೂರು: ಪರಿಷ್ಕರಣೆ ಮತ್ತು ಪರಿಶೀಲನೆ ನೆಪದಲ್ಲಿ ಕಳೆದಐದು ತಿಂಗಳಿಂದರಾಜ್ಯಾದ್ಯಂತತಡೆಹಿಡಿದಿರುವ ವಿಕಲಚೇತನರ ಗೌರವಧನವನ್ನು ತಕ್ಷಣ ಬಿಡುಗಡೆ ಮಾಡುವಂತೆ, ಹಾಗೂ ಆಂಧ್ರಪ್ರದೇಶ ಮಾದರಿಯಲ್ಲಿ ಅದನ್ನು ಮಾಸಿಕ ಐದು ಸಾವಿರ ರೂಪಾಯಿಗೆ ಏರಿಸುವಂತೆ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್. ಅಶೋಕ ಆಗ್ರಹಿಸಿದ್ದಾರೆ. 19 ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ಸುಮಾರು 6,000 MRW/VRW/URWಕಾರ್ಯಕರ್ತರಿಗೆ ಸೇವಾ ಭದ್ರತೆ ಒದಗಿಸುವಂತೆಯೂ ಅವರು ಆಗ್ರಹಿಸಿ ಸರ್ಕಾರದ ಮುಖ್ಯ ಕಾರ್ಯದರ್ಶಿ ಮತ್ತು ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿಯವರಿಗೆ ಪತ್ರ ಬರೆದಿದ್ದಾರೆ. ಪರಿಷ್ಕರಣೆ ಅಥವಾ ಪರಿಶೀಲನೆ ನೆಪದಲ್ಲಿ ಗೌರವಧನ ತಡೆ ಹಿಡಿದಿರುವುದು ಅಕ್ಷಮ್ಯ ಮತ್ತು ಅಪರಾಧ. ಪರಿಷ್ಕರಣೆ ನಿರಂತರ ಪ್ರಕ್ರಿಯೆಯಾಗಿದ್ದು, ಆಡಳಿತದ ಲೋಪಗಳನ್ನು ಸರಿಪಡಿಸುವ ನೆಪದಲ್ಲಿ ಗೌರವಧನವನ್ನೇ ಸ್ಥಗಿತಗೊಳಿಸಿರುವುದು ದುರದೃಷ್ಟಕರ ಎಂದು ಪತ್ರದಲ್ಲಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಔಷಧಿ ಮತ್ತು ತಿಂಗಳ ಅಗತ್ಯ ವೆಚ್ಚಗಳಿಗೆ ಬಹುತೇಕ ವಿಕಲಚೇತನರು ಈ ಗೌರವಧನವನ್ನೇ ಅವಲಂಬಿಸಿದ್ದಾರೆ. ಅದನ್ನು ತಡೆಹಿಡಿದಿರುವುದು ಅವರ ದೈನಂದಿನ ಬದುಕಿನ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತಿದೆ ಎಂದು ಆರ್. ಅಶೋಕ ಹೇಳಿದ್ದಾರೆ. ರಾಜ್ಯದ ನವ ಕರ್ನಾಟಕ MRW/VRW/URW ವಿಕಲಚೇತನರ ಗೌರವಧನ ಕಾರ್ಯಕರ್ತರ ಸಂಘದ ಕಾರ್ಯಕರ್ತರು ಮತ್ತು ವಿಕಲಚೇತನರು ರಾಮನಗರ ಜಿಲ್ಲಾಧಿಕಾರಿಗಳ ಕಚೇರಿ ಬಳಿ ಅಮರಣಾಂತ ಉಪವಾಸ ಸತ್ಯಾಗ್ರಹ ನಡೆಸುತ್ತಿದ್ದಾರೆ. ವಿರೋಧ ಪಕ್ಷದ ನಾಯಕನಾಗಿ ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿ ಮನವಿ ಸ್ವೀಕರಿಸಿದ್ದೇನೆ. ಸರ್ಕಾರದ ಪರವಾಗಿ ಯಾರೊಬ್ಬರೂ ಭೇಟಿ ನೀಡಿಲ್ಲ ಎಂದು ಅವರು ಪತ್ರದಲ್ಲಿ ಟೀಕಿಸಿದ್ದಾರೆ. ಉಪವಾಸ ನಡೆಸುತ್ತಿರುವವರ ಆರೋಗ್ಯದ ದೃಷ್ಟಿಯಿಂದ ಹಿರಿಯ ಅಧಿಕಾರಿಗಳನ್ನು ತಕ್ಷಣ ಕಳುಹಿಸಿ ಮನವಿ ಸ್ವೀಕರಿಸಿ, ಪ್ರತಿಭಟನೆ ನಿಲ್ಲಿಸಲು ಅನುವು ಮಾಡಿಕೊಡಬೇಕು ಎಂದು ಪತ್ರದಲ್ಲಿ ಒತ್ತಾಯಿಸಿದ್ದಾರೆ.

ಸೇವಾ ಭದ್ರತೆ ಕಲ್ಪಿಸಲು ಆಗ್ರಹ MRW/VRW/URW ಕಾರ್ಯಕರ್ತರು ಗ್ರಾಮೀಣ ಮಟ್ಟದಲ್ಲಿ ಸರ್ಕಾರದ ಯೋಜನೆಗಳು ಮತ್ತು ಸೇವೆಗಳನ್ನು ಅರ್ಹ ಫಲಾನುಭವಿಗಳಿಗೆ ತಲುಪಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದಾರೆ. ಕಳೆದ 19 ವರ್ಷಗಳ ನಿರಂತರ ಸೇವೆಯ ಬಳಿಕವೂ ಅವರಿಗೆ ಸೇವಾ ಭದ್ರತೆ ಇಲ್ಲ. ಇದನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ, ಅವರ ಸೇವೆಯನ್ನು ವಿಕಲಚೇತನರು ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯಲ್ಲಿ ಕಾಯಂಗೊಳಿಸುವ ಸಾಧ್ಯತೆ ಪರಿಶೀಲಿಸಿ ಸಚಿವ ಸಂಪುಟಕ್ಕೆ ಪ್ರಸ್ತಾವನೆ ಸಲ್ಲಿಸಬೇಕು ಎಂದು ಆಗ್ರಹಿಸಿದ್ದಾರೆ. ಇದು ಕೇವಲ ಗೌರವಧನ ಬಿಡುಗಡೆ ಮತ್ತು ಕಾರ್ಯಕರ್ತರ ಸೇವಾ ಭದ್ರತೆಯ ಆಡಳಿತಾತ್ಮಕ ವಿಷಯವಲ್ಲ. ಗ್ರಾಮೀಣ ಪ್ರದೇಶಗಳಲ್ಲಿ ಸರ್ಕಾರದ ಸೇವೆಗಳು ಪರಿಣಾಮಕಾರಿಯಾಗಿ ತಲುಪಲು ಅಗತ್ಯವಿರುವ ಮಾನವ ಸಂಪನ್ಮೂಲದ ವಿಷಯವೂ ಆಗಿದೆ ಎಂದು ಪತ್ರದಲ್ಲಿ ಅವರು ಸ್ಪಷ್ಟಪಡಿಸಿದ್ದಾರೆ. ಕಂದಾಯ ಇಲಾಖೆ ಹಾಗೂ ಸಂಬಂಧಪಟ್ಟ ಅಧಿಕಾರಿಗಳಿಗೆ ಸ್ಪಷ್ಟ ಕಾಲಮಿತಿ ನಿಗದಿಪಡಿಸಿ ತ್ವರಿತ ಕ್ರಮಕ್ಕೆ ನಿರ್ದೇಶಿಸುವಂತೆ, ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ತಕ್ಷಣ ಸಭೆ ನಡೆಸಿ ಸಂಘದ ನ್ಯಾಯಯುತ ಬೇಡಿಕೆಗಳ ಕುರಿತು ನಿರ್ಧಾರ ಕೈಗೊಳ್ಳುವಂತೆ, ಹಾಗೂ ಕೈಗೊಂಡ ಕ್ರಮದ ಬಗ್ಗೆ ತಮಗೆ ಲಿಖಿತವಾಗಿ ತಿಳಿಸುವಂತೆ ಆರ್. ಅಶೋಕ ಅವರು ಮುಖ್ಯ ಕಾರ್ಯದರ್ಶಿಗಳಿಗೆ ಪತ್ರದಲ್ಲಿ ಸೂಚಿಸಿದ್ದಾರೆ.

ಪತ್ರದ ಪ್ರಮುಖ ಬೇಡಿಕೆಗಳು

- **ತಡೆಹಿಡಿದಿರುವ ಎಲ್ಲ ತಿಂಗಳುಗಳ ವಿಕಲಚೇತನರ ಗೌರವಧನ ತಕ್ಷಣ ಬಿಡುಗಡೆ**
- **ಗೌರವಧನವನ್ನು ಮಾಸಿಕ ?5,000ಕ್ಕೆ ಏರಿಕೆಗೆ ಆಗ್ರಹ**
- **ಸುಮಾರು 6,000ದಷ್ಟಿರುವ MRW/VRW/URW ಕಾರ್ಯಕರ್ತರ ಸೇವಾ ಭದ್ರತೆ; ಇಲಾಖೆಯಲ್ಲಿ ಕಾಯಂಗೊಳಿಸುವ ಪ್ರಸ್ತಾವನೆಯನ್ನು ಸಂಪುಟಕ್ಕೆ ಸಲ್ಲಿಕೆಗೆ ಸಲಹೆ.**
- **ಕಂದಾಯ ಇಲಾಖೆಗೆ ಕಾಲಮಿತಿ ನಿಗದಿಗೆ ಒತ್ತಾಯ**
- **ಹಿರಿಯ ಅಧಿಕಾರಿಗಳು ರಾಮನಗರ ಉಪವಾಸ ಸ್ಥಳಕ್ಕೆ ಭೇಟಿ, ಮನವಿ ಸ್ವೀಕರಿಸಲು ಆಗ್ರಹ**

ನಕಲಿ ಆದೇಶದ ಮೂಲಕ ಜೀವಾವಧಿ ಕೈದಿ ಬಿಡುಗಡೆ

ನಕಲಿ ಸುಪ್ರೀಂ ಕೋರ್ಟ್ ಆದೇಶ ಸೃಷ್ಟಿಸಿ ಜೀವಾವಧಿ ಶಿಕ್ಷೆಗೆ ಗುರಿಯಾಗಿದ್ದ ಕೈದಿಯನ್ನು ಜೈಲಿನಿಂದ ಬಿಡುಗಡೆ ಮಾಡಿದ ಪ್ರಕರಣದ ತನಿಖೆ ಇದೀಗ ಮತ್ತಷ್ಟು ತೀವ್ರಗೊಂಡಿದೆ. ಪ್ರಕರಣದಲ್ಲಿ ಅಂದಿನ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ಮುಖ್ಯ ಅಧೀಕ್ಷಕರಾಗಿದ್ದ ಹಾಗೂ ಸದ್ಯ ಡಿಐಜಿ (ಕಾರಾಗೃಹ) ಆಗಿರುವ ಎಂ. ಸೋಮಶೇಖರ್ ಅವರನ್ನು ಪೊಲೀಸರು ಬಂಧಿಸಿದ್ದಾರೆ. ತನಿಖೆಯ ವೇಳೆ ಕೈದಿಯ ಪತ್ನಿಯೊಂದಿಗೆ ಸೋಮಶೇಖರ್ ನಡೆಸಿದ ಎನ್ನಲಾದ ಸಂಪರ್ಕ ಹಾಗೂ ಲೈಂಗಿಕ ದುರ್ವರ್ತನೆಗೆ ಸಂಬಂಧಿಸಿದ ಆರೋಪಗಳೂ ಬೆಳಕಿಗೆ ಬಂದಿವೆ ಎಂದು ವರದಿಯಾಗಿದೆ. ನಕಲಿ ಆದೇಶದ ಮೂಲಕ ಜೀವಾವಧಿ ಕೈದಿ ಬಿಡುಗಡೆ ಪ್ರಕರಣದ ಕೇಂದ್ರಬಿಂದುವಾಗಿರುವ ಶಂಕರ್ ಎ. ಅರಾಧ್ಯ ಎಂಬ ಜೀವಾವಧಿ ಕೈದಿಯನ್ನು 2018ರ ನವೆಂಬರ್‌ನಲ್ಲಿ ಸುಪ್ರೀಂ ಕೋರ್ಟ್ ಬಿಡುಗಡೆಗೆ ಆದೇಶಿಸಿದೆ ಎಂದು ಬಿಂಬಿಸುವ ನಕಲಿ ಆದೇಶ ಪತ್ರದ ಆಧಾರದ ಮೇಲೆ ಪರಪ್ಪನ ಅಗ್ರಹಾರ ಜೈಲಿನಿಂದ ಬಿಡುಗಡೆ ಮಾಡಲಾಗಿತ್ತು. ತನಿಖೆಯ ಪ್ರಕಾರ, ಜೈಲಿನ ಕನ್ವಿಕ್ಟ್ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದ ಶ್ರೀಕಾಂತ್ ಎಸ್. ಎಂಬ ಸಿಬ್ಬಂದಿ ನಕಲಿ ಆದೇಶವನ್ನು ಸೃಷ್ಟಿಸಿದ ಆರೋಪ ಎದುರಿಸುತ್ತಿದ್ದಾರೆ. ನಕಲಿ ದಾಖಲೆಗಳನ್ನು ಆಧರಿಸಿ 2018ರ ನವೆಂಬರ್ 13ರಂದು ಕೈದಿಯನ್ನು ಬಿಡುಗಡೆ ಮಾಡಲಾಗಿತ್ತು. ನಂತರ ದಾಖಲೆಗಳ ಪರಿಶೀಲನೆ ವೇಳೆ ಸುಪ್ರೀಂ ಕೋರ್ಟ್‌ನ ಆದೇಶವೇ ನಕಲಿ ಎಂಬುದು ಪತ್ತೆಯಾಗಿತ್ತು. ಪ್ರಕರಣ ಬೆಳಕಿಗೆ ಬಂದ ನಂತರ ಕೈದಿಯ ಪತ್ನಿಯನ್ನು ಪೊಲೀಸರು ವಿಚಾರಣೆ ನಡೆಸಿದ್ದರು. ಈ ವೇಳೆ ಅಂದಿನ ಜೈಲು ಮುಖ್ಯ ಅಧೀಕ್ಷಕರಾಗಿದ್ದ ಸೋಮಶೇಖರ್ ಅವರು ಕೈದಿಯ ಬಿಡುಗಡೆಗೆ ಸಹಕರಿಸಿದ್ದರು ಎಂದು ಆಕೆ ಹೇಳಿಕೆ ನೀಡಿದ್ದಾಳೆ ಎಂದು ತನಿಖಾ ಮೂಲಗಳನ್ನು ಉಲ್ಲೇಖಿಸಿ ವರದಿಯಾಗಿದೆ. ತನಿಖೆಗೆ ಸಹಕರಿಸದ ಆರೋಪದ ಹಿನ್ನೆಲೆಯಲ್ಲಿ ಸೋಮಶೇಖರ್ ಅವರನ್ನು ಪೊಲೀಸರು ಬಂಧಿಸಿ ಹೆಚ್ಚಿನ ವಿಚಾರಣೆಗೆ ವಶಕ್ಕೆ ಪಡೆದಿದ್ದಾರೆ. ಪ್ರಕರಣದಲ್ಲಿ ಶ್ರೀಕಾಂತ್ ಮತ್ತು ಕೈದಿ ಶಂಕರ್ ಅವರನ್ನೂ ಈಗಾಗಲೇ ಬಂಧಿಸಲಾಗಿದೆ. ಇದೀಗ ತನಿಖೆಯ ವೇಳೆ ಸೋಮಶೇಖರ್ ಅವರು ಶಂಕರ್‌ನ ಪತ್ನಿಯೊಂದಿಗೆ ವಿಡಿಯೋ ಕರೆ ಮೂಲಕ ಸಂಪರ್ಕದಲ್ಲಿದ್ದರು ಎಂಬ ಮಾಹಿತಿ ಬೆಳಕಿಗೆ ಬಂದಿದೆ ಎಂದು ವರದಿಯಾಗಿದೆ. ಈ ಸಂಪರ್ಕದ ಸ್ವರೂಪ ಮತ್ತು ಉದ್ದೇಶದ ಕುರಿತು ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ಕೆಲವು ವರದಿಗಳ ಪ್ರಕಾರ, ಕೈದಿಯ ಬಿಡುಗಡೆಗೆ ನೆರವು ನೀಡುವ ಸಂದರ್ಭದಲ್ಲಿ ಆಕೆಯನ್ನು ಲೈಂಗಿಕವಾಗಿ ಬಳಸಿಕೊಂಡ ಆರೋಪವೂ ಸೋಮಶೇಖರ್ ವಿರುದ್ಧ ಕೇಳಿಬಂದಿದೆ. ಆದರೆ ಈ ಆರೋಪಗಳು ಇನ್ನೂ ತನಿಖೆಯ ಹಂತದಲ್ಲಿದ್ದು, ನ್ಯಾಯಾಲಯದಲ್ಲಿ ಸಾಬೀತಾಗಿಲ್ಲ. ಪೊಲೀಸರು ವಿಡಿಯೋ ಕರೆಗಳು, ಮೊಬೈಲ್ ದಾಖಲೆಗಳು ಹಾಗೂ ಇತರ ಸಾಕ್ಷ್ಯಗಳನ್ನು ಪರಿಶೀಲಿಸುತ್ತಿದ್ದಾರೆ. ನಕಲಿ ಸುಪ್ರೀಂ ಕೋರ್ಟ್ ಆದೇಶವನ್ನು ಯಾರು ಸೃಷ್ಟಿಸಿದರು, ಅದನ್ನು ಜೈಲು ಅಧಿಕಾರಿಗಳಿಗೆ ಹೇಗೆ ತಲುಪಿಸಲಾಯಿತು ಮತ್ತು ಬಿಡುಗಡೆ ಪ್ರಕ್ರಿಯೆಯಲ್ಲಿ ಯಾವ ಅಧಿಕಾರಿಗಳು ಭಾಗಿಯಾಗಿದ್ದರು ಎಂಬುದರ ಕುರಿತು ಪೊಲೀಸರು ತನಿಖೆ ಮುಂದುವರಿಸಿದ್ದಾರೆ. ಸುಪ್ರೀಂ ಕೋರ್ಟ್‌ನ ನಕಲಿ ಆದೇಶದ ಆಧಾರದ ಮೇಲೆ ಜೀವಾವಧಿ ಕೈದಿ ಜೈಲಿನಿಂದ ಹೊರಬಂದಿರುವುದು ಪ್ರಕರಣದ ಗಂಭೀರತೆಯನ್ನು ಹೆಚ್ಚಿಸಿದೆ. ಇದೀಗ ಜೈಲು ಅಧಿಕಾರಿಗಳ ಪಾತ್ರ, ನಕಲಿ ದಾಖಲೆಗಳ ಸೃಷ್ಟಿ ಹಾಗೂ ಕೈದಿಯ ಬಿಡುಗಡೆಗೆ ಸಂಬಂಧಿಸಿದ ಸಂಪೂರ್ಣ ಜಾಲದ ಬಗ್ಗೆ ತನಿಖೆ ನಡೆಯುತ್ತಿದೆ. ಪ್ರಕರಣದಲ್ಲಿ ಬಂಧಿತರಾಗಿರುವವರ ವಿರುದ್ಧದ ಆರೋಪಗಳ ಸತ್ಯಾಸತ್ಯತೆ ತನಿಖೆ ಮತ್ತು ಮುಂದಿನ ನ್ಯಾಯಾಂಗ ಪ್ರಕ್ರಿಯೆಯಲ್ಲಿ ನಿರ್ಧಾರವಾಗಬೇಕಿದೆ.

CMYK

ಮೊಂಟಾನಾ ರಾಜ್ಯಪಾಲರನ್ನು ಭೇಟಿಯಾದ ಸಚಿವ ಪ್ರಿಯಾಂಕ್ ಖರ್ಗೆ

ಬೆಂಗಳೂರು: ಕರ್ನಾಟಕ ಸರ್ಕಾರ ಮತ್ತು ಅಮೆರಿಕದ ಮೊಂಟಾನಾ ರಾಜ್ಯವು ತಂತ್ರಜ್ಞಾನ, ಸಂಶೋಧನೆ, ನಾವೀನ್ಯತೆ ಹಾಗೂ ಮಾರುಕಟ್ಟೆ ಪ್ರವೇಶ ಕ್ಷೇತ್ರಗಳಲ್ಲಿ ಹೆಚ್ಚಿನ ಸಹಯೋಗಕ್ಕಾಗಿ ಹಲವು ಆದ್ಯತಾ ಕ್ಷೇತ್ರಗಳನ್ನು ಗುರುತಿಸಿವೆ. ಕರ್ನಾಟಕ ಸರ್ಕಾರದ ಗೃಹ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಮತ್ತು ಇ–ಆಡಳಿತ ಸಚಿವರಾದ ಶ್ರೀ ಪ್ರಿಯಾಂಕ್ ಖರ್ಗೆ ಹಾಗೂ ಮೊಂಟಾನಾ ರಾಜ್ಯದ ರಾಜ್ಯಪಾಲ ಗ್ರೆಗ್ ಜಿಯಾನ್ಫೋರ್ಟೆ ಅವರ ನೇತೃತ್ವದಲ್ಲಿ ನಡೆದ ಉನ್ನತ ಮಟ್ಟದ ಸಭೆಯಲ್ಲಿ ಈ ಕುರಿತು ಚರ್ಚೆ ನಡೆಯಿತು. ಸಭೆಯಲ್ಲಿ ಕರ್ನಾಟಕ ಸರ್ಕಾರದ ಎಲೆಕ್ಟ್ರಾನಿಕ್ಸ್, ಐಟಿ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆಯ ಕಾರ್ಯದರ್ಶಿ ಡಾ. ಎನ್. ಮಂಜುಳಾ ಹಾಗೂ ಕರ್ನಾಟಕ ಇನ್ನೋವೇಶನ್ ಅಂಡ್ ಟೆಕ್ನಾಲಜಿ ಸೊಸೈಟಿ (ಕೆಐಟಿಎಸ್)ಯ ವ್ಯವಸ್ಥಾಪಕ ನಿರ್ದೇಶಕರು ಹಾಗೂ ಎಲೆಕ್ಟ್ರಾನಿಕ್ಸ್, ಐಟಿ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆಯ ನಿರ್ದೇಶಕರಾದ ಡಾ. ಅವಿನಾಶ್ ಮೆನನ್, ಐಎಎಸ್ ಅವರು ಉಪಸ್ಥಿತರಿದ್ದರು. ಮೊಂಟಾನಾ ನಿಯೋಗದಲ್ಲಿ ರಾಜ್ಯಪಾಲ ಗ್ರೆಗ್ ಜಿಯಾನ್ಫೋರ್ಟೆ, ಪ್ರಥಮ ಮಹಿಳೆ ಸುಸನ್ ಜಿಯಾನ್ಫೋರ್ಟೆ, ಮೊಂಟಾನಾ ರಾಜ್ಯದ ಅಧಿಕಾರಿಗಳಾದ ಕೈಟ್ಲಿನ್ ಟಿಮ್ಮೆನ್ ಮತ್ತು ಅನ್ನಾ ಬ್ರೈಟ್‌ವೆಲ್, ಚೆನ್ನೈನ ಅಮೆರಿಕದ ಕಾನ್ಸುಲೇಟ್‌ನ ಅಮೆರಿಕದ ಕಾನ್ಸಲ್ ಜನರಲ್ ಮರಿಯಾನಾ ನೈಸುಲರ್, ಬೆಂಗಳೂರು/ಚೆನ್ನೈನ ಅಮೆರಿಕದ ಕಾನ್ಸುಲೇಟ್‌ನ ಯುಎಸ್ ಕಮರ್ಷಿಯಲ್ ಸರ್ವೀಸ್‌ನ ಪ್ರಧಾನ ವಾಣಿಜ್ಯ ಅಧಿಕಾರಿ ಕ್ಯಾರಿ ಅರುಣ್, ಅಂತಪ್ಪ ಬಡಿಗೇರ್, ಹಾಗೂ ಬೆಂಗಳೂರು/ಚೆನ್ನೈನ ಅಮೆರಿಕದ ಕಾನ್ಸುಲೇಟ್‌ನ ಯುಎಸ್ ಕಮರ್ಷಿಯಲ್ ಸರ್ವೀಸ್‌ನ ಹಿರಿಯ ವಾಣಿಜ್ಯ ತಜ್ಞೆ ಹಾಗೂ ನಿರ್ದೇಶಕರಾದ ಮಂಜುಶ್ರೀ ಫೂಕನ್ ಸೇರಿದಂತೆ ರಾಜ್ಯಪಾಲರ ಭದ್ರತಾ ಸಿಬ್ಬಂದಿ ಉಪಸ್ಥಿತರಿದ್ದರು.

ಎರಡೂ ರಾಜ್ಯಗಳ ತಂತ್ರಜ್ಞಾನ ಮತ್ತು ನಾವೀನ್ಯತಾ ಪರಿಸರ ವ್ಯವಸ್ಥೆಗಳ ನಡುವೆ ವ್ಯವಸ್ಥಿತ ಸಹಯೋಗದ ಚೌಕಟ್ಟನ್ನು ರೂಪಿಸುವ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು. ತಂತ್ರಜ್ಞಾನ, ಎಂಜಿನಿಯರಿಂಗ್, ಸ್ಟಾರ್ಟ್‌ಅಪ್‌ಗಳು, ಸೆಮಿಕಂಡಕ್ಟರ್‌ಗಳು ಮತ್ತು ಜೈವಿಕ ತಂತ್ರಜ್ಞಾನ ಕ್ಷೇತ್ರಗಳಲ್ಲಿ ಕರ್ನಾಟಕದ ಸಾಮರ್ಥ್ಯಗಳನ್ನು ಹಾಗೂ ಕ್ವಾಂಟಮ್ ತಂತ್ರಜ್ಞಾನ, ಫೋಟೋನಿಕ್ಸ್, ನಿಖರ ಕೃಷಿ, ಜೈವಿಕ ವಿಜ್ಞಾನ ಮತ್ತು ಸಂಶೋಧನಾ ಆಧಾರಿತ ನಾವೀನ್ಯತೆಯಲ್ಲಿ ಮೊಂಟಾನಾದ ವಿಶೇಷ ಪರಿಣತಿಯನ್ನು ಪರಸ್ಪರ ಜೋಡಿಸುವ ಕುರಿತು ಚರ್ಚಿಸಲಾಯಿತು. ಕ್ವಾಂಟಮ್ ಮತ್ತು ಫೋಟೋನಿಕ್ಸ್, ನಿಖರ ಕೃಷಿ, ಜೈವಿಕ ವಿಜ್ಞಾನ ಮತ್ತು ಔಷಧೀಯ ಕ್ಷೇತ್ರ, ಸೆಮಿಕಂಡಕ್ಟರ್ ಮತ್ತು ಚಿಪ್ ವಿನ್ಯಾಸ ಹಾಗೂ ಏರೋಸ್ಪೇಸ್ ಮತ್ತು ಬಾಹ್ಯಾಕಾಶ ತಂತ್ರಜ್ಞಾನಗಳನ್ನು ಸಹಯೋಗದ ಪ್ರಮುಖ ಕ್ಷೇತ್ರಗಳಾಗಿ ಎರಡೂ ಕಡೆಯವರು ಗುರುತಿಸಿದರು. ಸಭೆಯಲ್ಲಿ ಮಾತನಾಡಿದ ಕರ್ನಾಟಕ ಸರ್ಕಾರದ ಗೃಹ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಮತ್ತು ಇ–ಆಡಳಿತ ಸಚಿವ ಶ್ರೀ ಪ್ರಿಯಾಂಕ್ ಖರ್ಗೆ, ಕರ್ನಾಟಕದ ಬಲಿಷ್ಠ ತಂತ್ರಜ್ಞಾನ ಮತ್ತು ನಾವೀನ್ಯತಾ ಪರಿಸರ ವ್ಯವಸ್ಥೆ ಹಾಗೂ ಸ್ಪಷ್ಟ ಫಲಿತಾಂಶಗಳನ್ನು ನೀಡಬಲ್ಲ ಅಂತರರಾಷ್ಟ್ರೀಯ ಸಹಭಾಗಿತ್ವಗಳ ಅವಕಾಶಗಳನ್ನು ಒತ್ತಿ ಹೇಳಿದರು. "ಜಾಗತಿಕ ನಾವೀನ್ಯತಾ ಕೇಂದ್ರಗಳೊಂದಿಗೆ ಅರ್ಥಪೂರ್ಣ ಸಹಭಾಗಿತ್ವಗಳನ್ನು ನಿರ್ಮಿಸಲು ಕರ್ನಾಟಕವು ಬಲಿಷ್ಠ ತಂತ್ರಜ್ಞಾನ ಪರಿಸರ ವ್ಯವಸ್ಥೆ, ಪ್ರತಿಭೆ, ಸಂಶೋಧನಾ ಸಾಮರ್ಥ್ಯ ಹಾಗೂ ಉದ್ಯಮಶೀಲತೆಯ ಶಕ್ತಿಯನ್ನು ಹೊಂದಿದೆ. ಕ್ವಾಂಟಮ್, ಫೋಟೋನಿಕ್ಸ್, ನಿಖರ ಕೃಷಿ ಮತ್ತು ಜೈವಿಕ ವಿಜ್ಞಾನಗಳಂತಹ ಕ್ಷೇತ್ರಗಳಲ್ಲಿ ಮೊಂಟಾನಾ ವಿಶೇಷ ಪರಿಣತಿಯನ್ನು ಹೊಂದಿದೆ. ಈ ಎರಡೂ ಸಾಮರ್ಥ್ಯಗಳನ್ನು ಪರಸ್ಪರ ಜೋಡಿಸಿ, ಮಾತುಕತೆಗಳನ್ನು



ಸಂಸ್ಥೆಗಳು, ಕಂಪನಿಗಳು, ಸ್ಟಾರ್ಟ್‌ಅಪ್‌ಗಳು ಮತ್ತು ಸಂಶೋಧಕರ ನಡುವಿನ ನಿರ್ದಿಷ್ಟ ಸಹಯೋಗಗಳಾಗಿ ಪರಿವರ್ತಿಸುವ ಅವಕಾಶ ನಮ್ಮ ಮುಂದಿದೆ," ಎಂದು ಶ್ರೀ ಪ್ರಿಯಾಂಕ್ ಖರ್ಗೆ ಹೇಳಿದರು. ಮೊಂಟಾನಾ ರಾಜ್ಯಪಾಲ ಗ್ರೆಗ್ ಜಿಯಾನ್ಫೋರ್ಟೆ ಅವರು ಭಾರತ ಮತ್ತು ಮೊಂಟಾನಾ ನಡುವಿನ ಸಾಮ್ಯತೆಗಳು ಹಾಗೂ ಭವಿಷ್ಯದ ಸಹಯೋಗದ ಅವಕಾಶಗಳ ಕುರಿತು ನಡೆದ ಚರ್ಚೆಯನ್ನು ಸ್ವಾಗತಿಸಿದರು. "ಭಾರತ ಮತ್ತು ಮೊಂಟಾನಾ ನಡುವಿನ ಹಲವು ಸಾಮ್ಯತೆಗಳ ಕುರಿತು ಸಚಿವ ಖರ್ಗೆ ಅವರೊಂದಿಗೆ ಫಲಪ್ರದ ಸಭೆಯಲ್ಲಿ ಭಾಗವಹಿಸಿರುವುದು ಸಂತೋಷ ತಂದಿದೆ. ಕ್ವಾಂಟಮ್, ಫೋಟೋನಿಕ್ಸ್, ಏರೋಸ್ಪೇಸ್, ನಿಖರ ಕೃಷಿ ಮತ್ತು ಜೈವಿಕ ವಿಜ್ಞಾನ ಕ್ಷೇತ್ರಗಳಲ್ಲಿ ಭವಿಷ್ಯದ ಸಹಯೋಗದ ಕುರಿತು ಚರ್ಚೆ ಆರಂಭಿಸಿದ್ದೇವೆ. ಕೃಷಿ ಆಧಾರಿತ ಬೇರುಗಳಿಂದ ಹೊರಬಂದು ಉದಯೋನ್ಮುಖ ತಂತ್ರಜ್ಞಾನಗಳಲ್ಲಿ ಹೂಡಿಕೆಗಳನ್ನು ಅಳವಡಿಸಿಕೊಳ್ಳುತ್ತಿರುವ ಮೊಂಟಾನಾ ಆರ್ಥಿಕತೆಯು ವಿಸ್ತರಿಸುತ್ತಿದೆ. ಐತಿಹಾಸಿಕ ಸಹಭಾಗಿತ್ವಗಳಿಗೆ ದಾರಿ ಮಾಡಿಕೊಡುವ ಹಾಗೂ ಮೊಂಟಾನಾ ಜನರಿಗೆ ಹೆಚ್ಚಿನ ಅವಕಾಶಗಳನ್ನು ಸೃಷ್ಟಿಸುವ ಜಾಗತಿಕ ಮಟ್ಟದ ಸ್ಪರ್ಧೆಯಲ್ಲಿ ನಾವು ಬಲವಾಗಿ ಮುನ್ನಡೆಯುತ್ತಿದ್ದೇವೆ," ಎಂದು ರಾಜ್ಯಪಾಲ ಗ್ರೆಗ್ ಜಿಯಾನ್ಫೋರ್ಟೆ ಹೇಳಿದರು.

ಪ್ರಮುಖ ಚರ್ಚಾ ಕ್ಷೇತ್ರಗಳು ಕ್ವಾಂಟಮ್ ಮತ್ತು ಫೋಟೋನಿಕ್ಸ್ ಕರ್ನಾಟಕದ ಬೆಳೆಯುತ್ತಿರುವ ಕ್ವಾಂಟಮ್ ಪರಿಸರ ವ್ಯವಸ್ಥೆಯನ್ನು ಮೊಂಟಾನಾ ಸ್ಟೇಟ್ ಯೂನಿವರ್ಸಿಟಿಯ ಕ್ವಾಂಟಮ್ ಮತ್ತು ಫೋಟೋನಿಕ್ಸ್ ಸಾಮರ್ಥ್ಯಗಳೊಂದಿಗೆ ಸಂಪರ್ಕಿಸುವ ಅವಕಾಶಗಳ ಕುರಿತು ಚರ್ಚಿಸಲಾಯಿತು. ಕ್ವಾಂಟಮ್ ಶಿಕ್ಷಣ, ಸಂಶೋಧನೆ, ಕ್ವಾಂಟಮ್ ಕಂಪ್ಯೂಟಿಂಗ್ ಮತ್ತು ಕ್ವಾಂಟಮ್ ಹಾರ್ಡ್‌ವೇರ್ ಕ್ಷೇತ್ರಗಳಲ್ಲಿ ಕರ್ನಾಟಕದ ಕಾರ್ಯಚಟುವಟಿಕೆಗಳನ್ನು ವಿವರಿಸಲಾಯಿತು. ಮೊಂಟಾನಾ ನಿಯೋಗವು ಮೊಂಟಾನಾ ಸ್ಟೇಟ್ ಯೂನಿವರ್ಸಿಟಿಯ ಕ್ಯೂಕೋರ್ (ಕಿಊಔಖಇ) ಪರಿಸರ ವ್ಯವಸ್ಥೆಯ ಸಂಶೋಧನೆ, ತಂತ್ರಜ್ಞಾನ ವರ್ಗಾವಣೆ ಹಾಗೂ ಸ್ಟಾರ್ಟ್‌ಅಪ್‌ಗಳ ಉತ್ತೇಜನದಲ್ಲಿ ವಹಿಸುತ್ತಿರುವ ಪಾತ್ರವನ್ನು ವಿವರಿಸಿತು. ನಿಖರ ಕೃಷಿ ಕೃಷಿ ಉತ್ಪಾದಕತೆಯನ್ನು ಹೆಚ್ಚಿಸಲು, ನೀರು ಮತ್ತು ಇತರ ಸಂಪನ್ಮೂಲಗಳ ಬಳಕೆಯನ್ನು ಉತ್ತಮಗೊಳಿಸಲು ಹಾಗೂ ಪರಿಸರ ಪರಿಸ್ಥಿತಿಗಳಿಗೆ ಸೂಕ್ತವಾದ ಬೆಳೆ ತಳಿಗಳನ್ನು ಅಭಿವೃದ್ಧಿಪಡಿಸಲು ತಂತ್ರಜ್ಞಾನ ಬಳಕೆಯ ಕುರಿತು ಚರ್ಚಿಸಲಾಯಿತು. ನೀರಿನ ಕೊರತೆಯಂತಹ ಸಮಾನ ಸವಾಲುಗಳನ್ನು ಎರಡೂ ಕಡೆಯವರು ಎದುರಿಸುತ್ತಿದ್ದು, ಈ ಕ್ಷೇತ್ರದಲ್ಲಿ ಸಂಶೋಧನಾ ಸಹಯೋಗಕ್ಕೆ ಉತ್ತಮ ಅವಕಾಶಗಳಿವೆ ಎಂದು ಅಭಿಪ್ರಾಯಪಟ್ಟರು. ಜೈವಿಕ ವಿಜ್ಞಾನ ಮತ್ತು ಔಷಧೀಯ ಕ್ಷೇತ್ರ ಜೈವಿಕ ವಿಜ್ಞಾನ, ಔಷಧೀಯ ಕ್ಷೇತ್ರ, ಕ್ಲಿನಿಕಲ್ ಸಂಶೋಧನೆ ಮತ್ತು ಆರೋಗ್ಯ ಕ್ಷೇತ್ರದ ನಾವೀನ್ಯತೆಗಳಲ್ಲಿ ಸಹಯೋಗದ ಅವಕಾಶಗಳ ಕುರಿತು ಚರ್ಚಿಸಲಾಯಿತು. ಮೊಂಟಾನಾ ತನ್ನ ರಾಜ್ಯ ಮಟ್ಟದ "ರೈಟ್ ಟು ಟ್ರೈ" ವ್ಯವಸ್ಥೆ ಹಾಗೂ ಕ್ಲಿನಿಕಲ್ ಸಂಶೋಧನೆ ಮತ್ತು ಪ್ರಾಯೋಗಿಕ ಚಿಕಿತ್ಸೆಗಳ ಲಭ್ಯತೆಗೆ ಹೊಸ ಮಾರ್ಗಗಳನ್ನು ಸೃಷ್ಟಿಸುವ ತನ್ನ ಪ್ರಯತ್ನಗಳನ್ನು ವಿವರಿಸಿತು. ಕರ್ನಾಟಕವು ತನ್ನ ಬಲಿಷ್ಠ ಜೈವಿಕ ತಂತ್ರಜ್ಞಾನ ಮತ್ತು ಔಷಧೀಯ ಪರಿಸರ ವ್ಯವಸ್ಥೆ, ವೈದ್ಯಕೀಯ ಶಿಕ್ಷಣ ಮೂಲಸೌಕರ್ಯ ಹಾಗೂ ಉದಯೋನ್ಮುಖ ಸಮುದ್ರ ಮತ್ತು ಬ್ಲೂ ಬಯೋಟೆಕ್ನಾಲಜಿ ಕ್ಷೇತ್ರದ ಕುರಿತು ಮಾಹಿತಿ ಹಂಚಿಕೊಂಡಿತು. ಸೆಮಿಕಂಡಕ್ಟರ್ ಮತ್ತು ಚಿಪ್ ವಿನ್ಯಾಸ ಸೆಮಿಕಂಡಕ್ಟರ್‌ಗಳು ಮತ್ತು ಚಿಪ್ ವಿನ್ಯಾಸವನ್ನು ಸಹಯೋಗದ ಮತ್ತೊಂದು ಪ್ರಮುಖ ಕ್ಷೇತ್ರವಾಗಿ ಗುರುತಿಸಲಾಯಿತು.

ಕರ್ನಾಟಕವು ತನ್ನ ಬಲಿಷ್ಠ ಚಿಪ್ ವಿನ್ಯಾಸ ಪರಿಸರ ವ್ಯವಸ್ಥೆಯನ್ನು ವಿವರಿಸಿದರೆ, ಮೊಂಟಾನಾ ತನ್ನ ಸೆಮಿಕಂಡಕ್ಟರ್ ತಯಾರಿಕಾ ಉಪಕರಣಗಳ ಸಾಮರ್ಥ್ಯ ಹಾಗೂ ಕ್ವಾಂಟಮ್ ಮತ್ತು ಫೋಟೋನಿಕ್ಸ್ ಕ್ಷೇತ್ರಗಳಲ್ಲಿನ ಪರಿಣತಿಯನ್ನು ಪ್ರಸ್ತುತಪಡಿಸಿತು. ಏರೋಸ್ಪೇಸ್, ಬಾಹ್ಯಾಕಾಶ ಮತ್ತು ರಕ್ಷಣಾ ತಂತ್ರಜ್ಞಾನ ಏರೋಸ್ಪೇಸ್ ಮತ್ತು ಬಾಹ್ಯಾಕಾಶ ತಂತ್ರಜ್ಞಾನ, ಸ್ವಾಯತ್ತ ವ್ಯವಸ್ಥೆಗಳು, ಡ್ರೋನ್‌ಗಳು, ಸುಧಾರಿತ ವಸ್ತುಗಳು ಮತ್ತು ರಿಮೋಟ್ ಸೆನ್ಸಿಂಗ್ ಕ್ಷೇತ್ರಗಳ ಕುರಿತೂ ಚರ್ಚಿಸಲಾಯಿತು. ಈ ಕ್ಷೇತ್ರಗಳಲ್ಲಿನ ಸ್ಟಾರ್ಟ್‌ಅಪ್‌ಗಳು ಮತ್ತು ತಂತ್ರಜ್ಞಾನ ಕಂಪನಿಗಳನ್ನು ಸಂಬಂಧಿತ ಸಂಶೋಧನೆ ಮತ್ತು ವಾಣಿಜ್ಯ ಪರಿಸರ ವ್ಯವಸ್ಥೆಗಳೊಂದಿಗೆ ಸಂಪರ್ಕಿಸುವ ಅವಕಾಶಗಳ ಕುರಿತು ಎರಡೂ ಕಡೆಯವರು ಚರ್ಚಿಸಿದರು. ಸಹಯೋಗವನ್ನು ಮುಂದಕ್ಕೆ ಕೊಂಡೊಯ್ಯಲು ಕೇಂದ್ರೀಕೃತ ಪ್ರಯತ್ನ ನಿರ್ದಿಷ್ಟ ಸಹಯೋಗದ ಕ್ಷೇತ್ರಗಳನ್ನು ಗುರುತಿಸುವುದು ಹಾಗೂ ಸಂಬಂಧಿತ ವಿಶ್ವವಿದ್ಯಾಲಯಗಳು, ಸಂಶೋಧನಾ ಸಂಸ್ಥೆಗಳು, ಸೆಂಟರ್ ಆಫ್ ಎಕ್ಸಲೆನ್ಸ್‌ಗಳು, ಸ್ಟಾರ್ಟ್‌ಅಪ್‌ಗಳು ಮತ್ತು ಕಂಪನಿಗಳನ್ನು ಗುರುತಿಸುವ ಕುರಿತು ಎರಡೂ ಕಡೆಯವರು ಚರ್ಚಿಸಿದರು. ಬಹು ಕ್ಷೇತ್ರಗಳಲ್ಲಿ ವ್ಯಾಪಕ ಸಹಯೋಗಕ್ಕೆ ಮುಂದಾಗುವ ಬದಲು, ಆರಂಭದಲ್ಲಿ ಸೀಮಿತ ಸಂಖ್ಯೆಯ ಆದ್ಯತಾ ಕ್ಷೇತ್ರಗಳ ಮೇಲೆ ಗಮನ ಕೇಂದ್ರೀಕರಿಸಿ, ನಿರ್ದಿಷ್ಟ ಮತ್ತು ಕಾರ್ಯರೂಪಕ್ಕೆ ತರಬಹುದಾದ ಸಹಯೋಗದ ಅವಕಾಶಗಳನ್ನು ಅಭಿವೃದ್ಧಿಪಡಿಸುವುದು ಉದ್ದೇಶವಾಗಿದೆ. ತಂತ್ರಜ್ಞಾನ ಸಹಭಾಗಿತ್ವ, ಸ್ಟಾರ್ಟ್‌ಅಪ್ ವಿನಿಮಯ, ಸಂಶೋಧನಾ ಸಹಯೋಗ, ಮಾರುಕಟ್ಟೆ ಪ್ರವೇಶ ಮತ್ತು ಹೂಡಿಕೆ ಸಂಪರ್ಕಗಳನ್ನು ಒಳಗೊಂಡಂತೆ ಈ ಸಹಯೋಗವನ್ನು ಮುಂದುವರಿಸಲು ಗ್ಲೋಬಲ್ ಇನ್ನೋವೇಶನ್ ಅಲಯನ್ಸ್ (ಜಿಐಎ) ವೇದಿಕೆಯನ್ನು ಬಳಸಿಕೊಳ್ಳುವ ಕುರಿತು ಚರ್ಚಿಸಲಾಯಿತು.


ಭೀಮಣ್ಣ ಖಂಡ್ರೆಗೆ ಕರ್ನಾಟಕ ರತ್ನ ಪ್ರಶಸ್ತಿ ನೀಡಿ: ರಂಭಾಪುರಿ ಶ್ರೀಗಳು

ಚಿಕ್ಕಮಗಳೂರು: ಸ್ವಾತಂತ್ರ್ಯ ಸೇನಾನಿ, ಏಕೀಕರಣದ ಹೋರಾಟಗಾರಾಗಿದ್ದ ಲಿಂಗೈಕ್ಯ ಡಾ. ಭೀಮಣ್ಣ ಖಂಡ್ರೆ ಅವರಿಗೆ ಮರಣೋತ್ತರವಾಗಿ ಕರ್ನಾಟಕ ರತ್ನ ಪ್ರಶಸ್ತಿ ನೀಡುವಂತೆ ವೀರಶೈವ ಲಿಂಗಾಯತ ಮಹಾಸಭಾ ಚಿಕ್ಕಮಗಳೂರು ಘಟಕ ಕೈಗೊಂಡಿರುವ ನಿರ್ಣಯಕ್ಕೆ ರಂಭಾಪುರಿ ಜಗದ್ಗುರುಗಳು ಬೆಂಬಲ ವ್ಯಕ್ತಪಡಿಸಿದ್ದಾರೆ.

ಚಿಕ್ಕಮಗಳೂರಿನಲ್ಲಿಂದು ನಡೆದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿದ ರಂಭಾಪುರಿ ಜಗದ್ಗುರು ಪ್ರಸನ್ನ ರೇಣುಕ ವೀರಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯ ಸ್ವಾಮೀಜಿ, ಕಲ್ಯಾಣ ಕರ್ನಾಟಕದ ಕಣ್ಮಣಿಯಾಗಿದ್ದ ಭೀಮಣ್ಣ ಖಂಡ್ರೆ ಅವರಿಗೆ ಕರ್ನಾಟಕ ರತ್ನ ಪ್ರಶಸ್ತಿ ನೀಡಿದರೆ ಅದು ಅವರು ಮಾಡಿದ ಮಹತ್ಕಾರ್ಯಕ್ಕೆ ಬೆಂಬಲ ನೀಡಿದಂತಾಗುತ್ತದೆ ಎಂದರು.

ಸ್ವಾತಂತ್ರ್ಯ ಹೋರಾಟದಲ್ಲಿ ತಮ್ಮನ್ನು ತೊಡಗಿಸಿಕೊಂಡು ತಾವು ನೋವುಂಡು, ಸಮಾಜಕ್ಕೆ ಒಳಿತನ್ನೇ ಮಾಡಿದ ಭೀಮಣ್ಣ ಖಂಡ್ರೆ ಅವರಿಗೆ ಮುಂದಿನ ದಿನಗಳಲ್ಲಿ ಕರ್ನಾಟಕ ರತ್ನ ಗೌರವ ನೀಡಬೇಕು ಎಂದು ಸರ್ಕಾರವನ್ನು ಒತ್ತಾಯಿಸಿದರು.

ಇದಕ್ಕೂ ಮುನ್ನ ಮಾತನಾಡಿದ ಮಹಾಸಭಾ, ಜಿಲ್ಲಾ ಘಟಕದ ಅಧ್ಯಕ್ಷ ಎಚ್.ಎಂ.ಲೋಕೇಶ್, ಶತಾಯುಷಿ, ಲೋಕನಾಯಕ ಲಿಂಗೈಕ್ಯ ಡಾ. ಭೀಮಣ್ಣ ಖಂಡ್ರೆ ಅವರಿಗೆ ಮರಣೋತ್ತರವಾಗಿ ಕರ್ನಾಟಕ ರತ್ನ ಪ್ರಶಸ್ತಿ ನೀಡುವಂತೆ ಕಾರ್ಯಕಾರಿ ಸಮಿತಿ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗಿದ್ದು, ಮುಖ್ಯಮಂತ್ರಿಗಳಿಗೆ



ಮನವಿ ಅರ್ಪಿಸಲಾಗುವುದು ಎಂದು ತಿಳಿಸಿದರು.

ಭೀಮಣ್ಣ ಖಂಡ್ರೆ ಅವರು ನಮ್ಮ ಸಮಾಜದ ಮೇರು ವ್ಯಕ್ತಿಗಳಲ್ಲಿ ಒಬ್ಬರಾಗಿದ್ದರು. ಸ್ವಾತಂತ್ರ್ಯ ಚಳವಳಿಯಲ್ಲಿ ಸಕ್ರಿಯವಾಗಿ ಭಾಗಿಯಾಗಿದ್ದ ಅವರು, ವಕೀಲರಾಗಿ ನೊಂದ ಸಾವಿರಾರು ಬಡ ಜನರಿಗೆ ನ್ಯಾಯ ಕೊಡಿಸಿದ್ದರು. ನಿಜಾಮರ ಆಳ್ವಿಕೆಗೆ ಒಳಪಟ್ಟಿದ್ದ ಹೈದ್ರಾಬಾದ್ ಕರ್ನಾಟಕದಲ್ಲಿ ರಜಾಕಾರರ ದಬ್ಬಾಳಿಕೆಯ ನಡುವೆಯೂ ಕನ್ನಡ ಜೀವಂತವಾಗಿ ಉಳಿಯಲು ಶ್ರಮಿಸಿದ್ದರು. ಜೊತೆಗೆ ಬಸವ ಕಲ್ಯಾಣದಲ್ಲಿ ಈಗಿರುವ ಆಧುನಿಕ ಅನುಭವ ಮಂಟಪ ನಿರ್ಮಾಣದಲ್ಲಿ ಭಾಲ್ಕಿ ಹಿರೇಮಠದ ಚನ್ನಬಸವ ಪಟ್ಟದ್ದೇವರೊಂದಿಗೆ ಹೆಗಲಿಗೆ ಹೆಗಲುಕೊಟ್ಟು ಶ್ರಮಿಸಿದ್ದರು. ಇಂತಹ ಕನ್ನಡ ಕಟ್ಟಾಳುವಿಗೆ ಕರ್ನಾಟಕ ರತ್ನ ಪ್ರಶಸ್ತಿಯನ್ನು ಮರಣೋತ್ತರವಾಗಿ ನೀಡಬೇಕು ಎಂದು ಸಭಾ ಒತ್ತಾಯಿಸುತ್ತದೆ ಎಂದರು.

ಸಭೆಯಲ್ಲಿ ನೆರೆದಿದ್ದ ಎಲ್ಲರೂ ಈ ನಿರ್ಣಯವನ್ನು ಒಕ್ಕೊರಲಿನಿಂದ ಅನುಮೋದಿಸಿದರು.

ಪ್ರತಿಭಾವಂತ ಮಾನವ ಸಂಪನ್ಮೂಲಭರಿತ ರಾಷ್ಟ್ರ ಭಾರತ: ಈಶ್ವರ ಖಂಡ್ರೆ

ಚಿಕ್ಕಮಗಳೂರು: ಪ್ರತಿಭಾವಂತ ಮಾನವ ಸಂಪನ್ಮೂಲದಿಂದ ಕೂಡದ ರಾಷ್ಟ್ರ ಭಾರತವಾಗಿದ್ದು, ದೇಶದ ಪ್ರತಿಭಾವಂತರಿಗೆ ವಿಶ್ವ ಮಾನ್ಯತೆ ಲಭಿಸುತ್ತಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಬಿ ಖಂಡ್ರೆ ಹೇಳಿದ್ದಾರೆ.

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಚಿಕ್ಕಮಗಳೂರು ಘಟಕದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ರಾಜ್ಯದಲ್ಲೂ ಅಪ್ರತಿಮ ಪ್ರತಿಭಾವಂತರಿದ್ದು, ಈ ಪ್ರತಿಭಾ ವಿಕಸನಕ್ಕೆ ವೀರಶೈವ ಲಿಂಗಾಯತ ಮಠಗಳು ಕೊಡುಗೆ ಅಪಾರವಾಗಿದೆ ಎಂದರು.

ಎಲ್ಲ ಜಾತಿ, ಜನಾಂಗದವರಿಗೂ ಭೇದ ಭಾವವಿಲ್ಲದೆ ಅಕ್ಷರ, ಆಶ್ರಯ ಮತ್ತು ಅನ್ನ ದಾಸೋಹದ ಮೂಲಕ ಜ್ಞಾನ ಸಿಂಚನ ಮಾಡಿದ ಕೀರ್ತಿ ನಮ್ಮ ಮಠಮಾನ್ಯಗಳಿಗೆ ಸಲ್ಲುತ್ತದೆ ಎಂದು ಈಶ್ವರ ಖಂಡ್ರೆ ಹೇಳಿದರು.

ಯಾವುದೇ ಸಮಾಜ ತಾನು ಬಲಿಷ್ಠವಾಗಬೇಕು ಎಂದು ಮತ್ತೊಂದು ಸಮುದಾಯವನ್ನು ತುಳಿಯುವುದು ಸರಿಯಲ್ಲ. ಆದರೆ ಎಲ್ಲರನ್ನೂ ಅಪ್ಪಿಕೊಂಡು, ಒಪ್ಪಿಕೊಂಡು, ಇಡೀ ಸಮಾಜಕ್ಕೆ ಸಾಮಾಜಿಕ ನ್ಯಾಯಕೊಟ್ಟ ಯಾವುದಾದರೂ ಸಮಾಜವಿದ್ದರೆ ಅದು ವೀರಶೈವ ಲಿಂಗಾಯತ ಸಮುದಾಯ ಎಂದು ಹೇಳಿದರು. ಇಂದು ಕೆಲವರು ಜಾತಿಯನ್ನು ಒಡೆಯಲು ಪ್ರಯತ್ನಿಸುತ್ತಿದ್ದಾರೆ. ಆದರೆ ಲಿಂಗಾಯತರು, ವೀರಶೈವರು ಬೇರೆ ಬೇರೆ ಎಲ್ಲ. ಒಂದೇ ನಾಣ್ಯದ ಎರಡು ಮುಖ. ಇದನ್ನು ಸಿದ್ದಗಂಗಾಮಠದ ಲಿಂಗೈಕ್ಯ ಡಾ. ಶಿವಕುಮಾರಸ್ವಾಮೀಜಿ ಅವರು ಸ್ವಹಸ್ತಾಕ್ಷರದಲ್ಲಿ ಬರೆದುಕೊಟ್ಟಿದ್ದಾರೆ ಎಂದು ಈಶ್ವರ ಖಂಡ್ರೆ ಒತ್ತಿ ಹೇಳಿದರು.

ದೊಡ್ಡ ಗುರಿ ಹೊಂದಲು ಸಲಹೆ: ಏಳಿ ಎದ್ದೇಳಿ ಗುರಿ ಮುಟ್ಟುವ ತನಕ ನಿಲ್ಲದಿರಿ ಎಂದು ಸ್ವಾಮಿ ವಿವೇಕಾನಂದರು ಹೇಳಿದ್ದಾರೆ. ಯುವಜನರು ಮನಸ್ಸು ಮಾಡಿದರೆ, ಛಲ ಇದ್ದರೆ ಸಾಧನೆಗೆ ಅಸಾಧ್ಯವಾದ್ದು ಯಾವುದೂ ಇಲ್ಲ. ಹೀಗಾಗಿ ನಮ್ಮ ಸಮಾಜದ ಎಲ್ಲ ಪ್ರತಿಭಾವಂತರೂ ದೊಡ್ಡ ಗುರಿ ಹೊಂದಬೇಕು. ನಿಮ್ಮ ಹಿಂದೆ ಗುರುಗಳಿದ್ದಾರೆ. ಮುಂದೆ ಗುರಿ ಇದ್ದರೆ, ಸಾಧನೆ ಸಾಧ್ಯ ಎಂದರು.

ಅನಂತ ಗುರಿ, ಅನಂತ ಉತ್ಸಾಹವಿದ್ದರೆ, ಆತ್ಮವಿಶ್ವಾಸವಿದ್ದರೆ ಪರ್ವತವನ್ನೂ ಕದಲಿಸಲು ಸಾಧ್ಯ. ಹೀಗಾಗಿ ಯುವಜನರು ಇಷ್ಟಪಟ್ಟು ಓದಿದರೆ ಹೆಸರಾಂತ ವೈದ್ಯರು, ಎಂಜಿನಿಯರ್, ವಿಜ್ಞಾನಿ, ತಂತ್ರಜ್ಞಾನಿಗಳಾಗಬಹುದು. ಈ ಜಗತ್ತು ಸಾಧಕರನ್ನು ಮಾತ್ರ ಸ್ಮರಿಸುತ್ತದೆ. ಜ್ಞಾನಾಧಾರಿತ ಸಮಾಜದಲ್ಲಿ ಬುದ್ಧಿವಂತರು, ಜ್ಞಾನವಂತರು ಮಾತ್ರ ಗೆಲ್ಲುತ್ತಾರೆ. ಹೀಗಾಗಿ ನೀವೆಲ್ಲರೂ ಬದಲಾಗುತ್ತಿರುವ ಕಾಲಘಟ್ಟದಲ್ಲಿ ಇಂದಿನ ಯುಗಮಾನದ ಅಗತ್ಯಕ್ಕೆ ಅನುಗುಣವಾಗಿ ನಿಮ್ಮ ಜ್ಞಾನವನ್ನು ಹೆಚ್ಚಿಸಿಕೊಳ್ಳಬೇಕು ಎಂದರು.

ಇಂದು ವಿಜ್ಞಾನ, ತಂತ್ರಜ್ಞಾನದಲ್ಲಿ ಅಸಾಧಾರಣ ಪರಿವರ್ತನೆ, ಆವಿಷ್ಕಾರ ಆಗುತ್ತಿದೆ. ಕೃತಕ ಬುದ್ಧಿಮತ್ತೆ, ಮಿಷನ್ ಲರ್ನಿಂಗ್ ನಂತಹ ಆವಿಷ್ಕಾರಗಳು ಇಂದು ಮನುಷ್ಯನನ್ನೇ ಆಳುವಂತಾಗುತ್ತಿದೆ. ಆದರೆ, ನಾವು ನೀವು ಬುದ್ಧಿಮತ್ತೆ ಹೆಚ್ಚಿಸಿಕೊಂಡರೆ ಜಗತ್ತನ್ನು ಆಳಬಹುದು ಎಂದು ಹೇಳಿದರು. ಆರೋಗ್ಯವಂತ ಸಮಾಜಕ್ಕೆ ಆರೋಗ್ಯವಂತ ಮಕ್ಕಳು ಅಗತ್ಯ. ಹೀಗಾಗಿ ಮಕ್ಕಳು ಮಾನಸಿಕ ವಿಕಾಸದ ಜೊತೆಗೆ, ದೈಹಿಕ ಸದೃಢತೆಗೂ ಹೆಚ್ಚಿನ ಕಾಳಜಿವಹಿಸಬೇಕು, ದುಶ್ಚಟ, ದುರ್ವ್ಯಸನಗಳನ್ನು ಬಿಟ್ಟು ಆರೋಗ್ಯವಂತರಾಗಿ, ಸುಸಂಸ್ಕೃತರಾಗಬೇಕು ಎಂದು ಈಶ್ವರ ಖಂಡ್ರೆ ಕಿವಿ ಮಾತು ಹೇಳಿದರು. ಇಂದು ಎಲ್ ನಿ ನೋ ಪ್ರಭಾವದಿಂದ ಜಾಗತಿಕ ತಾಪಮಾನ ಹೆಚ್ಚುತ್ತಿದೆ. ಶೀತವಾತಾವರಣದ ದೇಶಗಳಲ್ಲೂ ತಾಪಮಾನ ಹೆಚ್ಚಳವಾಗುತ್ತಿದೆ. ಇಂದು ಜಗತ್ತು ಜಾಗತಿಕ ತಾಪಮಾನ ಏರಿಕೆ ಮತ್ತು ಹವಾಮಾನ ಬದಲಾವಣೆಯ ಪ್ರತಿಕೂಲ ಪರಿಣಾಮ ಎದುರಿಸುತ್ತಿದ್ದು, ಇದನ್ನು ತಡೆಯಲು ಪ್ರಕೃತಿ ಪರಿಸರ ಉಳಿಸಬೇಕು ಎಂದು ಪ್ರತಿಪಾದಿಸಿದರು.

ಚಾರಿತ್ರ್ಯ ಹೋದರೆ ಸರ್ವಸ್ವವೂ ಹೋದಂತೆ: ಹಣ ಕಳೆದರೆ ಏನೂ ಹೋಗುವುದಿಲ್ಲ, ಮತ್ತೆ ಗಳಿಸಬಹುದು. ಆದರೆ ಆರೋಗ್ಯಕ್ಕೆ ಹಾನಿಯಾದರೆ ಸ್ವಲ್ಪ ನಷ್ಟವಾಗುತ್ತದೆ. ಆದರೆ ಚಾರಿತ್ರ್ಯ ಹೋದರೆ ಸರ್ವಸ್ವವೂ ಹೋದಂತೆ. ಹೀಗಾಗಿ ಪ್ರತಿಯೊಬ್ಬರೂ ಚಾರಿತ್ರ್ಯವಂತರಾಗಿ ಬಾಳಬೇಕು ಎಂದರು. ಶ್ರೀಮದ್ ರಂಭಾಪುರಿ ವೀರಸಂಹಾಸನಾಧೀಶ್ವರ ಶ್ರೀ ಶ್ರೀ 1008 ಜಗದ್ಗುರು ಪ್ರಸನ್ನ ರೇಣುಕ ವೀರಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದರ ದಿವ್ಯ ಸಾನ್ನಿಧ್ಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ವೀರಶೈವ ಲಿಂಗಾಯತ ಮಹಾಸಭಾದ ಉಪಾಧ್ಯಕ್ಷರಾದ ಸಚ್ಚಿದಾನಂದಮೂರ್ತಿ, ರಾಷ್ಟ್ರೀಯ ಮಹಿಳಾ ಘಟಕದ ಅಧ್ಯಕ್ಷರಾದ ವೀಣಾ ಕಾಶೆಪ್ಪನವರ್, ಯುವ ಘಟಕದ ಅಧ್ಯಕ್ಷರಾದ ವೆಂಕಟರೆಡ್ಡಿ, ರಾಜ್ಯ ಮಹಿಳಾ ಘಟಕದ ಅಧ್ಯಕ್ಷರಾದ ಮುಕ್ತಾಂಬಾ ಮತ್ತಿತರರು ಪಾಲ್ಗೊಂಡಿದ್ದರು.

ನೂತನ ಜವಳಿ ನೀತಿಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಿ: ಕಾರ್ಯದರ್ಶಿ ರೋಹಿಣಿ ಸಿಂಧೂರಿ



ಬೆಂಗಳೂರು: ರಾಜ್ಯದ ಕೈಮಗ್ಗ ಮತ್ತು ಜವಳಿ ಕ್ಷೇತ್ರದ ಬೆಳವಣಿಗೆಗೆ ಹೊಸ ದಿಕ್ಕು ನೀಡುವ ಉದ್ದೇಶದಿಂದ ಜಾರಿಗೆ ತರಲಾಗಿರುವ ನೂತನ ಜವಳಿ ಮತ್ತು ಉಡುಪು ನೀತಿಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಕಾರ್ಯದರ್ಶಿಗಳಾದ ರೋಹಿಣಿ ಸಿಂಧೂರಿ, ಐಎಎಸ್ ಅವರು ಕೈಮಗ್ಗ ಮತ್ತು ಜವಳಿ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಸೂಚನೆ ನೀಡಿದರು. ಕಾಸಿಯಾ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ `Implementation Training for Textile & Apparel Policy' ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಅವರು, ನೀತಿಯಲ್ಲಿರುವ ಪ್ರೋತ್ಸಾಹಗಳು, ಯೋಜನೆಗಳು ಮತ್ತು ಅವಕಾಶಗಳು ಉದ್ಯಮಿಗಳು, ನೇಕಾರರು ಹಾಗೂ ಅರ್ಹ ಫಲಾನುಭವಿಗಳವರೆಗೆ ಪರಿಣಾಮಕಾರಿಯಾಗಿ ತಲುಪಬೇಕು ಎಂದರು.

'ಕರ್ನಾಟಕದಲ್ಲಿ ಜವಳಿ ಕ್ಷೇತ್ರದ ಬೆಳವಣಿಗೆಗೆ ಅಪಾರ ಅವಕಾಶಗಳಿವೆ. ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಸಕ್ಕರೆ ಮತ್ತು ಜವಳಿ ಸಚಿವ ರುದ್ರಪ್ಪ ಲಮಾಣಿ ಅವರ ಮುತುವರ್ಜಿಯಿಂದ ರೂಪಿಸಲಾದ ಈ ನೀತಿಯ ಯಶಸ್ಸು ಅದರ ಪರಿಣಾಮಕಾರಿ ಅನುಷ್ಠಾನದಲ್ಲಿ ಅಡಗಿದೆ. ಜಿಲ್ಲಾ ಮಟ್ಟದ ಅಧಿಕಾರಿಗಳು ನೀತಿಯನ್ನು ಸಂಪೂರ್ಣವಾಗಿ ಅರ್ಥಮಾಡಿಕೊಂಡು, ಸ್ಥಳೀಯ ಅವಕಾಶಗಳನ್ನು ಗುರುತಿಸಿ, ಹೊಸ ಹೂಡಿಕೆ ಮತ್ತು ಉದ್ಯೋಗ ಸೃಷ್ಟಿಗೆ ಕ್ರಿಯಾಶೀಲವಾಗಿ ಕೆಲಸ ಮಾಡಬೇಕು," ಎಂದು ರೋಹಿಣಿ ಸಿಂಧೂರಿ ಹೇಳಿದರು. ನೂತನ ನೀತಿಯಲ್ಲಿ ಗುರುತಿಸಲಾಗಿರುವ ಫೋಕಸ್ ತಾಲೂಕುಗಳ ಕೈಮಗ್ಗ, ಜವಳಿ, ಕೌಶಲ್ಯ ಮತ್ತು ಉತ್ಪಾದನಾ ಸಾಮರ್ಥ್ಯವನ್ನು ಆಧರಿಸಿ ತಾಲೂಕುವಾರು ಕಾರ್ಯಯೋಜನೆ ರೂಪಿಸಬೇಕು ಎಂದು ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು. ಪ್ರತಿ ಪ್ರದೇಶದ ಪರಂಪರೆಯ ಉತ್ಪನ್ನಗಳು, ಲಭ್ಯವಿರುವ ಕೌಶಲ್ಯ, ಉದ್ಯಮ ಸಾಧ್ಯತೆಗಳು ಹಾಗೂ ಮಾರುಕಟ್ಟೆ ಅವಕಾಶಗಳನ್ನು ಗುರುತಿಸಿ, ಅವುಗಳನ್ನು ಹೊಸ ಉದ್ಯಮ, ಹೂಡಿಕೆ ಮತ್ತು ಉದ್ಯೋಗ ಸೃಷ್ಟಿಯೊಂದಿಗೆ ಸಂಪರ್ಕಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸಬೇಕು ಎಂದು ತಿಳಿಸಿದರು. ಜವಳಿ ಅಭಿವೃದ್ಧಿ ಆಯುಕ್ತರಾದ ಎ.ಬಿ. ಬಸವರಾಜು, ಮಾತನಾಡಿ, ನೂತನ ನೀತಿಯಲ್ಲಿ ಕೈಮಗ್ಗ, ನೇಕಾರರು ಹಾಗೂ ಜವಳಿ ಉದ್ಯಮದ ಅಭಿವೃದ್ಧಿಗೆ ಹಲವು ಹೊಸ ಯೋಜನೆಗಳು ಮತ್ತು ಪ್ರೋತ್ಸಾಹಗಳನ್ನು ಕಲ್ಪಿಸಲಾಗಿದೆ ಎಂದರು. "ನೀತಿಯಡಿ ಲಭ್ಯವಿರುವ ಸೌಲಭ್ಯಗಳು ಮತ್ತು ಪ್ರೋತ್ಸಾಹಗಳ ಕುರಿತು ವ್ಯಾಪಕ ಜಾಗೃತಿ ಮೂಡಿಸಿ, ಅರ್ಹ ಫಲಾನುಭವಿಗಳು ಮತ್ತು ಉದ್ಯಮಿಗಳು ಅವುಗಳ ಪ್ರಯೋಜನ ಪಡೆಯುವಂತೆ ಮಾಡುವುದು ಅಧಿಕಾರಿಗಳ ಪ್ರಮುಖ ಜವಾಬ್ದಾರಿ. ಜಿಲ್ಲಾ ಮಟ್ಟದಲ್ಲಿ ನಿರಂತರ ಸಂಪರ್ಕ, ಮಾರ್ಗದರ್ಶನ ಮತ್ತು ಅನುಸರಣೆ ಅಗತ್ಯ," ಎಂದು ಹೇಳಿದರು. ಕಾರ್ಯಾಗಾರದಲ್ಲಿ ಜವಳಿ ಇಲಾಖೆಯ ಹೆಚ್ಚುವರಿ ನಿರ್ದೇಶಕರಾದ ಸಿ.ಎಸ್. ಯೋಗೇಶ್ ಮತ್ತು ಶ್ರೀಧರ್ ನಾಯಕ್, ವ್ಯವಸ್ಥಾಪಕ ನಿರ್ದೇಶಕಿ ಸೌಮ್ಯ ಎಂ. ಸೇರಿದಂತೆ ಇಲಾಖೆಯ ಹಿರಿಯ ಅಧಿಕಾರಿಗಳು ಹಾಗೂ ವಿವಿಧ ಜಿಲ್ಲೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

ಪರಸ್ಪರ ಸಹಕಾರದ ಬದುಕೇ ಮಾನವೀಯತೆ: ಮಹದೇವಸ್ವಾಮೀಜಿ ಅಭಿಮತ

ಎಚ್.ಡಿ.ಕೋಟೆ: ಸಾಧು–ಸಂತರು ಹಾಗೂ ಮಹಾತ್ಮರು ನೀಡಿರುವ ಉತ್ತಮ ಸಂದೇಶಗಳನ್ನು ಜೀವನದಲ್ಲಿ ಅಳವಡಿಸಿಕೊಂಡು, ಸಮಾಜದ ಒಳಿತಿಗಾಗಿ ಬದುಕಿದಾಗ ಮಾತ್ರ ಮಾನವ ಜನ್ಮ ಸಾರ್ಥಕವಾಗುತ್ತದೆ ಎಂದು ಬಿಡುಗಲು ಪಡುವಲು ವಿರಕ್ತ ಮಠದ ಮಹದೇವಸ್ವಾಮೀಜಿ ತಿಳಿಸಿದರು. ಪಟ್ಟಣದ ಕನಕ ಭವನದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಹನುಮಂತನಗರ ವಲಯದ ವತಿಯಿಂದ ಆಯೋಜಿಸಿದ್ದ ಸಾಮೂಹಿಕ ಸತ್ಯನಾರಾಯಣ ಪೂಜೆ ಹಾಗೂ ಧಾರ್ಮಿಕ ಕಾರ್ಯಕ್ರಮದಲ್ಲಿ ಮಾತನಾಡಿದರು. ಮನುಷ್ಯ ಜೀವನವೆಂದರೆ ಕೇವಲ ತನ್ನನ್ನು ತಾನು ರಕ್ಷಿಸಿಕೊಂಡು ಬದುಕುವುದಲ್ಲ. ಸಮಾಜದಲ್ಲಿರುವ ಇತರರಿಗೂ ನೆರವಾಗಿ, ಅವರ ಕಷ್ಟಗಳಿಗೆ ಸ್ಪಂದಿಸಿ, ಪರಸ್ಪರ ಸಹಕಾರದೊಂದಿಗೆ ಬದುಕುವುದೇ ನಿಜವಾದ ಮಾನವೀಯತೆ ಎಂದು ಹೇಳಿದರು. ಪ್ರಕೃತಿಯಲ್ಲಿರುವ ಪ್ರತಿಯೊಂದು ಜೀವಿಯೂ ಇತರರಿಗೆ ಉಪಯೋಗವಾಗುವ ರೀತಿಯಲ್ಲಿ ಬದುಕುತ್ತದೆ. ಹಸು ತಾನು ಸೇವಿಸುವ ಆಹಾರದಿಂದ ಉತ್ಪತ್ತಿಯಾಗುವ ಹಾಲನ್ನು ಇತರರಿಗೆ ನೀಡುತ್ತದೆ. ಮರ ತಾನು ಬೆಳೆದ ಹಣ್ಣುಗಳನ್ನು ಇತರರಿಗೆ ನೀಡುತ್ತದೆ. ಅದೇ ರೀತಿ ಮನುಷ್ಯನು ತನ್ನಲ್ಲಿರುವ ಜ್ಞಾನ, ಸಂಪತ್ತು, ಶಕ್ತಿ ಹಾಗೂ ಸಮಯವನ್ನು ಸಮಾಜದ ಒಳಿತಿಗಾಗಿ ಬಳಸಿಕೊಂಡು ಬದುಕಬೇಕು ಎಂದು ಅವರು ಕರೆ ನೀಡಿದರು. ಧಾರ್ಮಿಕ ಆಚರಣೆಗಳು ಕೇವಲ ಪೂಜೆ–



ಪುನಸ್ಕಾರಗಳಿಗೆ ಸೀಮಿತವಾಗದೆ, ಮನುಷ್ಯನಲ್ಲಿ ಉತ್ತಮ ಗುಣ, ಪರೋಪಕಾರದ ಮನೋಭಾವ ಹಾಗೂ ಸಾಮಾಜಿಕ ಜವಾಬ್ದಾರಿಯನ್ನು ಬೆಳೆಸಬೇಕು. ಸತ್ಯ, ಧರ್ಮ, ಮಾನವೀಯತೆ ಮತ್ತು ಪರಸ್ಪರ ಸಹಕಾರದ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವ ಮೂಲಕ ಉತ್ತಮ ಸಮಾಜ ನಿರ್ಮಾಣಕ್ಕೆ ಎಲ್ಲರೂ ಕೈಜೋಡಿಸಬೇಕು ಎಂದು ತಿಳಿಸಿದರು. ಸಂಸ್ಥೆಯಜಿಲ್ಲಾಹಿರಿಯನಿರ್ದೇಶಕವಿಜಯಕುಮಾರ್ ನಾಗನಾಳ ಮಾತನಾಡಿ, ಮಹಾತ್ಮ ಗಾಂಧೀಜಿ ಕಂಡಿದ್ದ ಗ್ರಾಮಾಭಿವೃದ್ಧಿ ಹಾಗೂ ಸಾಮಾನ್ಯ ಜನರ ಆರ್ಥಿಕ ಸಬಲೀಕರಣದ ಕನಸನ್ನು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮೂಲಕ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆಯವರು ಸಾಕಾರಗೊಳಿಸುವ ಕಾರ್ಯ ಮಾಡುತ್ತಿದ್ದಾರೆ ಎಂದು ಹೇಳಿದರು. ಗಾಂಧೀಜಿಯವರು ಮಧ್ಯಮ ವರ್ಗ ಹಾಗೂ ಹಿಂದುಳಿದ ವರ್ಗದ ಜನರು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಮುಂದೆ ಬರಬೇಕು ಎಂಬ ಆಶಯ ಹೊಂದಿದ್ದರು.

ಈ ಉದ್ದೇಶವನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಸುಮಾರು 44 ವರ್ಷಗಳ ಹಿಂದೆ ಗ್ರಾಮಾಭಿವೃದ್ಧಿ ಯೋಜನೆಯ ಮೂಲಕ ಸ್ವಸಹಾಯ ಸಂಘಗಳನ್ನು ರಚಿಸಿ, ಗ್ರಾಮೀಣ ಜನರನ್ನು ಒಗ್ಗೂಡಿಸುವ ಕಾರ್ಯ ಆರಂಭಿಸಲಾಯಿತು ಎಂದು ವಿವರಿಸಿದರು. ಸ್ವಸಹಾಯ ಸಂಘಗಳ ಮೂಲಕ ಮಹಿಳೆಯರು ಸೇರಿದಂತೆ ಗ್ರಾಮೀಣ ಕುಟುಂಬಗಳಲ್ಲಿ ಉಳಿತಾಯದ ಮನೋಭಾವ ಬೆಳೆದಿದ್ದು, ಸ್ವಾವಲಂಬನೆ ಸಾಧಿಸಲು ಅವಕಾಶ ದೊರೆತಿದೆ. ಪ್ರಸ್ತುತ 55 ಲಕ್ಷ ಕುಟುಂಬಗಳು ಯೋಜನೆಯ ಸದುಪಯೋಗ ಪಡೆದುಕೊಳ್ಳುತ್ತಿವೆ ಎಂದು ತಿಳಿಸಿದರು. ಎಚ್.ಡಿ. ಕೋಟೆ ತಾಲ್ಲೂಕಿನಲ್ಲಿಯೂ ಗ್ರಾಮಾಭಿವೃದ್ಧಿ ಯೋಜನೆಯ ಸ್ವಸಹಾಯ ಸಂಘಗಳು ಆರ್ಥಿಕ ಶಿಸ್ತು ಹಾಗೂ ಉಳಿತಾಯಕ್ಕೆ ಹೆಚ್ಚಿನ ಆದ್ಯತೆ ನೀಡುತ್ತಿವೆ. ತಾಲ್ಲೂಕಿನ ಸ್ವಸಹಾಯ ಸಂಘಗಳು ಇದುವರೆಗೆ ಸುಮಾರು 25 ಕೋಟಿ ಹಣವನ್ನು ಉಳಿತಾಯದ ರೂಪದಲ್ಲಿ ಸಂಗ್ರಹಿಸಿಟ್ಟುಕೊಂಡಿವೆ ಎಂದು ಮಾಹಿತಿ ನೀಡಿದರು.

ಎಂಟು ಅತಿಥಿ ಶಿಕ್ಷಕರಿಗೆ ನೇಮಕಾತಿ ಪತ್ರ ವಿತರಿಸಲಾಯಿತು. ಪೂಜಾ ಸಮಿತಿಯ ಅಧ್ಯಕ್ಷ ನಟರಾಜು, ತಾಲ್ಲೂಕು ಯೋಜನಾಧಿಕಾರಿ ವೇಣುಗೋಪಾಲ್, ಜಿಲ್ಲಾ ಜನಜಾಗೃತಿ ವೇದಿಕೆಯ ಸದಸ್ಯ ನಾಗಣ್ಣ, ಕನ್ನಡಪ್ರಮೋದ್, ಜೆ.ಪಿ. ಶಿವರಾಜು, ಸ್ವಾಮಿ, ಮಿಲ್ ನಾಗರಾಜು, ವಿನಯ ಭಜರಂಗಿ, ಡೈರಿ ಶ್ರೀಕಾಂತ್, ರಮೇಶ್, ನಾಗರಾಜು, ಪ್ರಶಾಂತ್, ಸೃಜಂತ್, ಮಹೇಶ್ವರಿ ನಟರಾಜು, ಕುಮಾರಿ, ಅರ್ಚಕ ರಘುಕೀರ್ತಿ, ನಾಗೇಗೌಡ, ಸೇವಾ ಪ್ರತಿನಿಧಿ ಗುಣಶ್ರೀ ಹಾಗೂ ಮಹಿಳೆಯರು ಸೇರಿದಂತೆ ಹಲವರು ಇದ್ದರು.

ನಾಳೆ ರಾಜ್ಯಮಟ್ಟದ 'ವಿಶ್ವಕರ್ಮ ವೈಭವ ರತ್ನ', 'ಕರ್ನಾಟಕ ವೈಭವ ರತ್ನ' ಪ್ರಶಸ್ತಿ ಪ್ರದಾನ

ಬೆಂಗಳೂರು: ನಿತ್ಯೋತ್ಸವ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಘ (ರಿ.) ವತಿಯಿಂದ ವಿಶ್ವಕರ್ಮ ಜಯಂತಿ ಹಾಗೂ ಗಾಂಧಿ ಜಯಂತಿ ಅಂಗವಾಗಿ ರಾಜ್ಯಮಟ್ಟದ 'ವಿಶ್ವಕರ್ಮ ವೈಭವ ರತ್ನ' ಹಾಗೂ 'ಕರ್ನಾಟಕ ವೈಭವ ರತ್ನ' ಪ್ರಶಸ್ತಿ ಪ್ರದಾನ ಸಮಾರಂಭವನ್ನು ಅ.10ರಂದು ಶನಿವಾರ ಬೆಳಿಗ್ಗೆ 9 ಗಂಟೆಗೆ ಕನ್ನಡ ಭವನದ ರವೀಂದ್ರ ಕಲಾಕ್ಷೇತ್ರ ಆವರಣದಲ್ಲಿರುವ ನಯನ ಸಭಾಂಗಣದಲ್ಲಿ ಆಯೋಜಿಸಲಾಗಿದೆ. ಬೇಲಿ ಮಠದ ಶಿವರುದ್ರ ಸ್ವಾಮೀಜಿ ಅವರು ಸಮಾರಂಭಕ್ಕೆ ಚಾಲನೆ ನೀಡಲಿದ್ದು, ಧಾರ್ಮಿಕ ಮುಖಂಡ ಡಾ. ಎಸ್. ವಾಸುದೇವ ಭಟ್ಟರ್, ವಿಶ್ವಕರ್ಮ ಅಭಿವೃದ್ಧಿ ನಿಗಮದ ಅಧ್ಯಕ್ಷ ಪಿ. ಸುಜ್ಞಾನಮೂರ್ತಿ, ಹೈಕೋರ್ಟ್ ವಕೀಲ ಅನಂತ್ ನಾಯ್ಕ್, ಹಿರಿಯ ಲೇಖಕಿ ಇಂದಿರಾ ಕೃಷ್ಣಪ್ಪ, ಸರ್ವೋದಯ ಮಂಡಲದ ಅಧ್ಯಕ್ಷ ಡಾ. ಯ. ಚಿ. ದೊಡ್ಡಯ್ಯ ಸೇರಿದಂತೆ ವಿವಿಧ ಕ್ಷೇತ್ರಗಳ ಗಣ್ಯರು ಹಾಗೂ ಸಾಮಾಜಿಕ ಸಾಂಸ್ಕೃತಿಕ ಕ್ಷೇತ್ರದ ಪ್ರಮುಖರು ಭಾಗವಹಿಸಲಿದ್ದಾರೆ. ಸಮಾಜ, ಕಲೆ, ಸಾಹಿತ್ಯ, ಸಂಸ್ಕೃತಿ, ಶಿಕ್ಷಣ, ವೈದ್ಯಕೀಯ, ಕ್ರೀಡೆ, ಮಾಧ್ಯಮ ಸೇರಿದಂತೆ ವಿವಿಧ



ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿರುವ ಸಾಧಕರನ್ನು ಗುರುತಿಸಿ ಈ ಸಂದರ್ಭದಲ್ಲಿ 'ವಿಶ್ವಕರ್ಮ ವೈಭವ ರತ್ನ' ಹಾಗೂ 'ಕರ್ನಾಟಕ ವೈಭವ ರತ್ನ' ಪ್ರಶಸ್ತಿಗಳನ್ನು ಪ್ರದಾನ ಮಾಡಲಾಗುವುದು. ರಾಜ್ಯದ ವಿವಿಧ ಜಿಲ್ಲೆಗಳ ಸಾಧಕರು, ಸಮಾಜ ಸೇವಕರು, ಕಲಾವಿದರು ಹಾಗೂ ಯುವ ಪ್ರತಿಭೆಗಳು ಸೇರಿದಂತೆ ಹಲವು ಕ್ಷೇತ್ರಗಳ ಸಾಧಕರನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಕಾರ್ಯಕ್ರಮವನ್ನು ಡಾ. ಗುಣವಂತ ಮಂಜು ಅವರು ನಿರೂಪಿಸಲಿದ್ದಾರೆ. ಸಮಾಜದಲ್ಲಿ ಪ್ರತಿಭೆ ಮತ್ತು ಸೇವೆಯನ್ನು ಗುರುತಿಸಿ ಪ್ರೋತ್ಸಾಹಿಸುವುದು, ಯುವಜನರಲ್ಲಿ ಕಾಯಕ ಸಂಸ್ಕೃತಿ ಹಾಗೂ ಸಾಮಾಜಿಕ ಹೊಣೆಗಾರಿಕೆಯ ಮನೋಭಾವ ಬೆಳೆಸುವುದು ಪ್ರಶಸ್ತಿ ಪ್ರದಾನ ಸಮಾರಂಭದ ಉದ್ದೇಶವಾಗಿದೆ ಎಂದು ಸಂಘದ ಅಧ್ಯಕ್ಷೆ ನಿತ್ಯಾ ಎಂ. ಆಚಾರ್ ತಿಳಿಸಿದ್ದಾರೆ.

ಕಾರ್ಯಕ್ರಮದ ವಿವರ

ದಿನಾಂಕ: 10–10–2026, ಶನಿವಾರ
ಸಮಯ: ಬೆಳಿಗ್ಗೆ 9.00 ಗಂಟೆ
ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ರವೀಂದ್ರಕಲಾಕ್ಷೇತ್ರಆವರಣ,ಬೆಂಗಳೂರು.

ಮಾಧ್ಯಮ ಮಿತ್ರರಿಗೆ ಮನವಿ: ಕಾರ್ಯಕ್ರಮಕ್ಕೆ ಪೂರ್ವಭಾವಿ ಪ್ರಚಾರ ನೀಡುವುದರೊಂದಿಗೆ, ಕಾರ್ಯಕ್ರಮದಂದು ವರದಿಗಾರರು ಹಾಗೂ ಛಾಯಾಗ್ರಾಹಕರನ್ನು ಕಳುಹಿಸಿ, ಕಾರ್ಯಕ್ರಮದ ವರದಿ ಪ್ರಸಾರಕ್ಕೆ ಸಹಕರಿಸುವಂತೆ ಮಾಧ್ಯಮ ಮಿತ್ರರಲ್ಲಿ ವಿನಮ್ರ ಮನವಿ

ಹಕ್ಕು ಮತ್ತು ವ್ಯಾಜ್ಯಗಳು ಬೆಂಗಳೂರು ನಗರಕ್ಕೆ ಮಾತ್ರ ಸೀಮಿತ

Printed by: Krishnaiah V, Published by B Kumaraswamy & Owned by B Kumaraswamy and Printed at Shree manjunatha enterprises, No.7. Tirukappa lane, cottenpete cross, Bangalore Karnataka-560022, Published form No. 865/1 B Cross, Pipeline Road, Opp Karnataka Bank LTD, Yeshwanthpur, VTC: Bangalore North, PO: Yeshwanthpur, Bangalore Karnataka-560022, Editor: B Kumaraswamy. Mob:9482834853

CMYK